House. Discussion on this report may continue today and one other day; one other day will be set apart for consideration of Bills and a third day for taking up non-official Business—resolutions.

Mr. SPEAKER.—I think that will satisfy the House.

DEBATE ON THE EDUCATIONAL REFORMS.

(Sri G. Shivappa rose.)

Sri J. MOHAMED IMAM (Jagalur).—I thought I was allowed to speak on the reforms proposals.

Sri A. G. RAMACHANDRA RAO.—He had spoken on the other day for about five minutes or so.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಅಧ್ಯಕ್ಷರೇ, ನಿನ್ನೆಯದಿನ ವಿದ್ಯಾಭ್ಯಾಸ ಸುಧಾರಣೆಯ ಮೇಲೆ ನಾಲ್ಕು ಮಾತುಗಳನ್ನು ಪ್ರಾಸ್ತಾವಿಕವಾಗಿ ಹೇಳಿದ್ದೇನೆ. ಈಗ ಅದನ್ನು ವಿಸ್ತರಿಸಿ ನಾಲ್ಕು ಅಂಶಗಳನ್ನು ನಿವೇದಿಸುತ್ತೇನೆ. ಈ ವರದಿಯಲ್ಲಿ ನರ್ಸರಿ ಸ್ಕೂಲುಗಳ ವಿಚಾರವಾಗಿ ತಿಳಿಸಿದೆ. ಈ ನರ್ಸರಿ ಸ್ಕೂಲ್ಸ್ ಎಂಬುವು ಮೂರು ವರ್ಷದಿಂದ ಆರು ವರ್ಷದವರೆಗೂ ಎಂದು ವಿಧಾಯಕಮಾಡಿದೆ. ಈ ನರ್ಸರಿ ಸ್ಕೂಲ್ ಸ್ಥಾಪನೆಗೆ ಹೆಚ್ಚಿನ ಹಣವು ಖರ್ಚಾಗುತ್ತದೆಯಾದುದರಿಂದ ಪ್ರತಿಯೊಂದು ಸ್ಥಳೀಯ ಸಂಸ್ಥೆಯೂ ಇದರ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಈ ರೀತಿ ಮಾಡಿರುತ್ತಾರೆಂದು ಭಾವಿಸುತ್ತೇನೆ.

ಪ್ರೈಮರಿ ವಿದ್ಯಾಭ್ಯಾಸ ಶಿಕ್ಷಣ ಮೊದಲು 8 ವರ್ಷವೆಂದಿತ್ತು. ಈ ಸಮಿತಿಯ ಶಿಫಾರ್ಸಿನಂತೆ ಅದು ಆರು ವರ್ಷದಲ್ಲಿ ಮುಗಿಯಬೇಕಾಗಿದೆ. ಇದೊಂದು ಪ್ರಗತಿದಾಯಕವಾದ ಸಲಹೆಯೇ ಹೊರತು ಪ್ರಗತಿಗೆ ವಿರೋಧವಲ್ಲ. ಇದೇ ರೀತಿ ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸವನ್ನೂ ಹೈಸ್ಕೂಲ್ ವಿದ್ಯಾಭ್ಯಾಸವನ್ನೂ ಸೇರಿಸಿ, ಜೂನಿಯರ್ ಹೈಸ್ಕೂಲ್ ವ್ಯಾಸಂಗ ನಾಲ್ಕು ವರ್ಷ, ಸೀನಿಯರ್ ಹೈಸ್ಕೂಲ್ ವ್ಯಾಸಂಗ ನಾಲ್ಕು ವರ್ಷ ಎಂಬುದಾಗಿ ಸಮಿತಿಯವರು ಮಾಡಿರುವುದರಿಂದ ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿರುವ duplication of work ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಇಷ್ಟೇ ಅಲ್ಲದೆ, ಈ ಶಿಫಾರ್ಸಿನ ಪ್ರಕಾರ number of working days ಜಾಸ್ತಿಯಾಗುತ್ತದೆ. ಈಗ ಜಾರಿಯಲ್ಲಿರುವ ಶಿಕ್ಷಣ ಪದ್ಧತಿಯ ಪ್ರಕಾರ ವರ್ಷಕ್ಕೆ ಕೆಲಸದ ದಿವಸಗಳು 200 ಎಂದು ಇತ್ತು. ವಿದ್ಯಾಭ್ಯಾಸ ಸಮಿತಿಯವರ ಶಿಫಾರ್ಸಿನ ಪ್ರಕಾರ ಅದನ್ನು 250 ದಿವಸಗಳಿಗೆ ಏರಿಸಬೇಕಾಗಿದೆ, ಅಂದರೆ 50 ದಿವಸಗಳು ಜಾಸ್ತಿ ಶಾಲೆ ಕೆಲಸ ಮಾಡಬೇಕೆಂದು ನಮೂದಿಸಿರುತ್ತಾರೆ.

ಮೂಲ ಶಿಕ್ಷಣದ ವಿಚಾರವಾಗಿ ಹಲವಾರು ಟೀಕೆಗಳು ಬಂದವು. ಚಿಕ್ಕ ವಯಸ್ಸಿನ ಮಕ್ಕಳಿಗೆ ಇದು ಸಾಧ್ಯವೇ ಎಂದು ಕೆಲವರ ವಾದ. ನಾನು ಮಕ್ಕಳ ತಂದೆ. ಈ ವಿಚಾರದಲ್ಲಿ ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನನ್ನ ಆರು ವರ್ಷದ ಮಗುವಿಗೆ ನಾನು ಮಾಡತಕ್ಕ ಕಸಬಿನ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ತರಬೇತು ಕೊಡುತ್ತೇನೆ ಈಗ ಈ ಆರು ವರ್ಷದ ಮಗು ಅಡಿಕೆ ಬೆಳೆಯುವುದು. ಅಡಿಕೆ ಆರಿಸುವುದು ಮುಂತಾದ ಕೆಲಸವನ್ನು ಬಹು ಚೆನ್ನಾಗಿ ಮಾಡುತ್ತದೆ. ಯಾವ ಶಿಕ್ಷಣವನ್ನು ಕೊಟ್ಟರೂ ಸಹ ಮಗುವಿನ ಮನಸ್ಸಿಗೆ ಮನದಟ್ಟಾಗಿ ಹಿಡಿಯುವ ಕಾಲ ಅದು. ಇದೇ ರೀತಿಯೇ ಮೂಲಶಿಕ್ಷಣದ ಸ್ಥಿತಿಯೂ ಸಹ. ಈ ಮೂಲ ಶಿಕ್ಷಣ ಪದ್ಧತಿಯ ವಿಚಾರದಲ್ಲಿ ಮಹಾತ್ಮ ಗಾಂಧಿಯವರೂ, ಸಿ. ಆರ್. ರೆಡ್ಡಿಯವರೂ ಪ್ರೈಮರಿ ಸ್ಟೇಜ್‌ನಲ್ಲಿಯೇ ಇದು ಉತ್ತಮವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಇನ್ನು ಸೆಕೆಂಡರಿ ವಿದ್ಯಾಭ್ಯಾಸದ ವಿಚಾರವಾಗಿ ಕೆಲವು ಟೀಕೆಗಳು ಬಂದಿವೆ. ಇವೊತ್ತಿನ ದಿವಸ ಈ ವರದಿಯಲ್ಲಿ ಸೆಕೆಂಡರಿ ವಿದ್ಯಾಭ್ಯಾಸದ ವಿಚಾರವಾಗಿ ಯಾವ ಒಂದು ಅಂಶವನ್ನು ಹೇಳಿದ್ದಾರೆಯೋ ಅದನ್ನೂ ಕೂಡ ಸ್ವಾಗತಿಸುತ್ತೇನೆ, ದಯಮಾಡಿ ಯಾರೂ ತಪ್ಪು ತಿಳಿದುಕೊಳ್ಳಬಾರದು, ಸ್ವಾಗತಿಸುತ್ತೇನೆ. ಅಂದಮಾತ್ರಕ್ಕೆ ಎಲ್ಲ ವಿಷಯಗಳಿಗೂ ಕೈ ಎತ್ತುವುದು ಎಂದು ತಿಳಿಯಕೂಡದು, ಇರುವ ಅಭಿಪ್ರಾಯವನ್ನು ಹೇಳುತ್ತೇನೆ. ಸೆಕೆಂಡರಿ ವಿದ್ಯಾಭ್ಯಾಸದ ವಿಚಾರವಾಗಿ ಸ್ಯಾಡ್ಲರ್‌ರವರು ಕೂಡ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರಲ್ಲಿ ಅತಿ ಮುಖ್ಯವಾಗಿ ಕಾಣತಕ್ಕ ಟೀಕೆ ಎಂದರೆ ಈ ಸೆಕೆಂಡರಿ ವಿದ್ಯಾಭ್ಯಾಸವನ್ನು 6 ವರ್ಷ ಮಾಡಿದ್ದಾರೆ ಎಂಬುದು ಒಂದು ಮತ್ತು ಇಂಟರ್‌ಮೀಡಿಯಟ್‌ನ್ನು ಸೆಕೆಂಡರಿ ವಿದ್ಯಾಭ್ಯಾಸದ ಜೊತೆಗೆ ಸೇರಿಸಿದ್ದಾರೆ ಎಂಬುದು ಇನ್ನೊಂದು. ಇದು ಬಹಳ ತಪ್ಪು. atmosphere ಹೊರಟುಹೋಗುತ್ತದೆ' ಎಂದು ಮಾನ್ಯ ಸ್ನೇಹಿತರು ಹೇಳಿದರು. ಯಾವ ಉದ್ದೇಶಕ್ಕಾಗಿ ಅವರು ಈ ಇಂಟರ್‌ಮೀಡಿಯಟ್‌ನ್ನು ಸೆಕೆಂಡರಿಯೊಳಗೆ ಸೇರಿಸಿದ್ದಾರೆ ಎಂಬುದನ್ನು ತಾವೆಲ್ಲರೂ ಅರ್ಥಮಾಡಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ. ಈ ಸಮಿತಿಯ ವರದಿಯನ್ನು ವಿಮರ್ಶಾತ್ಮಕವಾಗಿ ಓದಿದ್ದೇ ಆದರೆ ಖಂಡಿತವಾಗಿಯೂ ಇದಕ್ಕೆ ಬಲವಾದ ಕಾರಣಗಳಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಆಧಾರಗಳೂ ಇವೆ. ಇದನ್ನು ಸಮಿತಿಯವರ ಕೇವಲ ಒತ್ತಾಯಕ್ಕಾಗಿ ಸೇರಿಸಿದ್ದಲ್ಲ. 30 ವರ್ಷಗಳ ಹಿಂದೆಯೇ ಇದನ್ನು ಸ್ಯಾಡ್ಲರ್ ಮಹಾಶಯರು ಹೇಳಿದ್ದರು. ಅದನ್ನು ಇವೊತ್ತು ಮಾಡಬೇಕಾಗಿದೆ, ಈಗ ನಮ್ಮ generationನ್ನೇ ಹಾಳಾಗಿ ಹೋಗಿದೆ. ಇಂಥಾ ಸನ್ನಿವೇಶದಲ್ಲಿ ಇವೊತ್ತು ಸಮಿತಿಯವರು ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಶಿಫಾರಸು ಮಾಡಿರುವುದು ಸಾಹಸದ ಕೆಲಸ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸ್ಯಾಡ್ಲರ್ ಕಮಿಷನನ್ನಿನವರ ಬೆಂಬಲವೊಂದೇ ಅಲ್ಲದೆ ಅನೇಕ ಮಹನೀಯರ ಬೆಂಬಲವಿದೆ. ಡಾಕ್ಟರ್ ಸಿ. ಆರ್. ರೆಡ್ಡಿಯವರು ಹೇಳಿದ್ದಾರೆ, ಡಾಕ್ಟರ್ ರಾಧಾಕೃಷ್ಣನ್‌ರವರು ಹೇಳಿದ್ದಾರೆ. ಇಂಡಿಯನ್ ಯೂನಿವರ್ಸಿಟಿ ಕಮೀಷನ್‌ನವರು ಕೂಡ ಒತ್ತಾಯವಾಗಿ ಹೇಳಿದ್ದಾರೆ.

Intermediate marks an end of secondary education and a beginning of University education.

ಇದರಲ್ಲಿ ಏನು ಅನುಕೂಲ ಇದೆ ಅದನ್ನು ಪಡೆದುಕೊಳ್ಳಬೇಕು ಎಂಬ ದೃಷ್ಟಿಯಿಂದ ಯೋಚನೆಮಾಡಿದರೆ ಗೊತ್ತಾಗುತ್ತದೆ. ಏಕ್‌ದಂ ತೊಂದರೆಯಾಗುತ್ತದೆ ಎಂದು ಯೋಚನೆಮಾಡಿದರೆ ತಕ್ಷಣ ಗೊತ್ತಾಗುವುದು

(ಶ್ರೀ ಜಿ. ಶಿವಪ್ಪ)

ಕಷ್ಟ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಹೇಗೆ ಆಗುತ್ತದೆ ಎಂದರೆ ಇದು ನನ್ನ ಭಾವನೆಯಲ್ಲಿ ಒಂದು ರೈಲ್ವೆ ಪ್ಲಾಟ್‌ಫಾರಂ ಇದ್ದಹಾಗೆ. ಸೆಕೆಂಡ್ ಕ್ಲಾಸ್ ಪ್ರಯಾಣಿಕರು ಇರುತ್ತಾರೆ, ಇಂಟರ್‌ಕ್ಲಾಸ್ ಪ್ರಯಾಣಿಕರೂ ಇರುತ್ತಾರೆ, ಮೂರನೆಯ ಕ್ಲಾಸ್ ಪ್ರಯಾಣಿಕರೂ ಇರುತ್ತಾರೆ, ಇವರೆಲ್ಲರೂಕೂಡ ಪ್ಲಾಟ್ ಫಾರಂನಲ್ಲಿ ಇದ್ದು ತಮ್ಮ ತಮ್ಮ ಯೋಗ್ಯತಾನುಸಾರ ಶಕ್ತ್ಯಾನುಸಾರ ಟಿಕೆಟ್ ಕೊಂಡು ಕೊಂಡು ಪ್ರಯಾಣ ಮಾಡುವಂತೆ ಇದೂ ಒಂದು ಸಾಧನ ಎಂದು ನಾನು ತಿಳಿದುಕೊಂಡಿದ್ದೇನೆ. ಹೇಗೆಂದರೆ ಇದು ಒಂದು ಸ್ವಯಂ ಪರಿಪೂರ್ಣವಾದ ವಿದ್ಯಾಭ್ಯಾಸವನ್ನು ಕೊಡತಕ್ಕ ಸಾಧನ. ಇಲ್ಲಿ ಎರಡು ವರ್ಷ, ನಾಲ್ಕುವರ್ಷ, 6ವರ್ಷದ ವಿದ್ಯಾಭ್ಯಾಸ ಇರುತ್ತದೆ. ಪ್ರತಿಯೊಬ್ಬನೂ ತನ್ನ ಯೋಗ್ಯತಾನುಸಾರ ತನಗೆ ಬೇಕಾದ ದಾರಿಯಲ್ಲಿ ಹೋಗುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಈ ನಕ್ಷೆಯಲ್ಲಿ ಬಹಳ ಚನ್ನಾಗಿ ತೋರಿಸಿದ್ದಾರೆ. This is both a preparatory and terminal examination. ಸೆಕೆಂಡರಿ ಆದ ತಕ್ಷಣ ಟೆಕ್ನಿಕಲ್ ಕೋರ್ಸ್‌ಗೆ ಹೋಗ ಬಹುದು ಅಥವಾ 6 ವರ್ಷ ಪೂರ್ತಿಯಾದನಂತರ ಯೂನಿವರ್ಸಿಟಿಗೆ ಹೋಗಬಹುದು. ಹೀಗೆ ತಮ್ಮ ಅನು ಕೂಲ, ಅನಾನುಕೂಲ. ಬುದ್ಧಿಶಕ್ತಿ, ಇದನ್ನೆಲ್ಲಾ ನೋಡಿ ಕೊಂಡು ಮೊದಲೇ ಕೆಲಸಕಾರ್ಯಗಳಲ್ಲಿ, ನೌಕರಿಗ ಳಲ್ಲಿ ತೊಡಗಿ ತಮ್ಮ ಜೀವನವನ್ನು ಸಾಗಿಸಬಹುದು. ಇಲ್ಲದೇ ಇದ್ದರೆ ಹೆಚ್ಚಿನ ಜ್ಞಾನ ಸಂಪಾದನೆ ಮಾಡಬೇ ಕೆಂಬ ಅಭಿರುಚಿಯಿದ್ದು, ತಕ್ಕ ಸೌಕರ್ಯ ಇದ್ದ ಪಕ್ಷದಲ್ಲಿ ಅಂತಹವರು ವಿಶ್ವವಿದ್ಯಾಲಯಕ್ಕೆ ಹೋಗಿ ತಮ್ಮ ವಿದ್ಯಾ ಭ್ಯಾಸವನ್ನು ಮುಗಿಸಬಹುದು. ಇವುಗಳೆಲ್ಲಕ್ಕೂ ಸಹ ಇದು ಸಾಧನರೂಪವಾಗಿರತಕ್ಕ ಒಂದು ಪ್ಲಾಟ್‌ಫಾರಂ ಎಂದು ನಾನು ಭಾವಿಸಿಕೊಂಡಿದ್ದೇನೆ. ಇಷ್ಟೇ ಅಲ್ಲದೆ ಸೆಕೆಂಡರಿ ಮತ್ತು ಇಂಟರ್‌ಮೀಡಿಯಟ್ ಎರಡನ್ನೂ ಸೇರಿಸಲಿಕ್ಕೆ ಇನ್ನೂ ಚಿಕ್ಕ ಚಿಕ್ಕ ಕಾರಣಗಳುಂಟು. ಅವು ಯಾವು ವೆಂದರೆ, ಇವೊತ್ತಿನ ದಿವಸ ನಮ್ಮ ಯೂನಿವರ್ಸಿಟಿ ಬಹಳ ದೊಡ್ಡದಾಗಿ ಬೆಳೆದಿದೆ, ಪರ್ವತಾಕಾರದಲ್ಲಿ, ಸಮುದ್ರದಾಕಾರದಲ್ಲಿ ಬೆಳೆದಿದೆ. ಇದು ಕೆಟ್ಟ ಕುದುರೆ ಒಳ್ಳೆಯ ಕುದುರೆ ಎರಡನ್ನೂ ಒಟ್ಟಿಗೆ ಜೂಜಿನಲ್ಲಿ ಓಡಿಸಿದ ಹಾಗಾಗಿದೆ. ಯೂನಿವರ್ಸಿಟಿಗೆ ಹೋಗತಕ್ಕ ಒತ್ತಡ (rush) ವನ್ನು ತಪ್ಪಿಸುವುದಕ್ಕೂ ಮತ್ತು ಅವರವರ ಯೋಗ್ಯತಾನುಸಾರ ಅವರವರ ವಿದ್ಯಾಭ್ಯಾಸವನ್ನು ಹೊಂದಿ ಜೀವನ ಸಾಗಿಸಿಕೊಂಡು ಹೋಗುವುದಕ್ಕೆ ಒಂದು ಮಾರ್ಗವನ್ನು ಕಲ್ಪಿಸುವುದೇ ಈ ಸೆಕೆಂಡರಿ ಎಜು ಕೇಷನ್ನಿನ ಒಂದು ಉದ್ದೇಶವಾಗಿದೆ. ಅದಕ್ಕೆ ತಕ್ಕಂಥ ಒಂದು ಏರ್ಪಾಡನ್ನು ಅವರು ಮಾಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಅಷ್ಟೇ ಅಲ್ಲದೆ, ಹಿಂದಿನ ವಿದ್ಯಾಭ್ಯಾಸಕ್ಕೂ ಈಗಿನ ವಿದ್ಯಾಭ್ಯಾಸಕ್ಕೂ ಅನೇಕ ವ್ಯತ್ಯಾಸಗಳಿವೆ. ಇದರಲ್ಲಿ ಬಹಳ ಇಂಪ್ರೂವ್‌ಮೆಂಟ್ ಇದೆ ಎಂದು ನಾನು ಭಾವಿಸುತ್ತೇನೆ.

ಇಲ್ಲಿ ಇನ್ನೊಂದು ಪ್ರಾಮುಖ್ಯವಾದ ಅಂಶವನ್ನು ಗಮನಿಸಬೇಕಾಗಿದೆ. ಇವೊತ್ತಿನ ದಿವಸ ವಿದ್ಯಾಭ್ಯಾಸ ಸುಧಾರಣೆ ಎಂದರೆ ಅದರಲ್ಲಿ ಮ್ಯಾನ್ಯುಯಲ್ ಲೇಬರಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದ್ದಾರೆ. Number of working days ಹೆಚ್ಚುಮಾಡಿರುವುದನ್ನು ಗಮನಿ ಸಬೇಕು. ಈಗ 180 ದಿವಸಗಳು ಇತ್ತು, ಅದನ್ನು ಇನ್ನೂ 20 ದಿವಸ ಜಾಸ್ತಿ ಮಾಡಿದ್ದಾರೆ.

ಸೆಕೆಂಡರಿ ವಿದ್ಯಾಭ್ಯಾಸದ ಮೇಲೆ ಇಷ್ಟು ಮಾತು ಹೇಳಿದನಂತರ ಮೊದಲೇ ಹೇಳಿದಂತೆ, ಈ ಸುಧಾರಣೆ ಯಲ್ಲಿ ಮ್ಯಾನ್ಯುಯಲ್ ಲೇಬರಿಗೆ ಮೊದಲಿನಿಂದ ಕೊನೆಯ ವರೆಗೂ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಈ ವಿಚಾ ರದಲ್ಲಿ ಸಮಿತಿಯವರನ್ನು ಖಂಡಿತವಾಗಿಯೂ ವಂದಿಸ ಬೇಕಾಗಿದೆ. ಏನಿದ್ದರೂ ಕೂಡ ಅವರು ಪಟ್ಟ ಶ್ರಮಕ್ಕೆ ಫಲ ದೊರೆಯುತ್ತದೆಯೋ ಎಂಬುದು ಒಂದು ಅಂಶ. ಖಂಡಿತವಾಗಿಯೂ ಫಲ ದೊರೆಯುತ್ತದೆ ಎಂದು ನಾನು ಭಾವಿಸಿದ್ದೇನೆ. ಪ್ರೈಮರಿ, ಸೆಕೆಂಡರಿ ಈ ರೀತಿ ಎಲ್ಲಾ ಘಟ್ಟದಲ್ಲೂ ಕೂಡ ಕೆಲಸ ಮಾಡಬೇಕು. ಕೆಲಸ ಅತಿ ಮುಖ್ಯವಾದದ್ದು. ಇದು ನಮ್ಮ ದೇಶದ ವಾತಾವರ ಣಕ್ಕೆ ಸರಿಯಾಗಿದೆ. ನಮ್ಮ ದೇಶ ವ್ಯವಸಾಯದ ದೇಶ. ಈ ವ್ಯವಸಾಯದ ವಾತಾವರಣಕ್ಕೆ ಸರಿಯಾಗಿ ವಿದ್ಯಾ ಭ್ಯಾಸ ಬದಲಾವಣೆಯಾಗಬೇಕೆಂದು ಹೇಳುತ್ತಾ ಇದ್ದೆವು. ಅದನ್ನು ಈ ವರದಿಯಲ್ಲಿ ಪರಿಪೂರ್ಣವಾಗಿ ಸಾಧನೆಮಾಡಿದ್ದಾರೆ ಎಂಬ ವಿಚಾರ ಎದ್ದುಕಾಣುತ್ತದೆ ಎಂದು ಭಾವಿಸುತ್ತೇನೆ. ಸರ್ಕಾರದವರಲ್ಲಿ ಒಂದು ಪ್ರಾರ್ಥನೆ ಏನೆಂದರೆ, ಈ ಮ್ಯಾನ್ಯುಯಲ್ ಲೇಬರಿಗೆ ಸಂಬಂಧಪಟ್ಟಂತೆ ಆಯಾ ಸ್ಥಳ, ಸನ್ನಿವೇಶಗಳಿಗನು ಸಾರವಾಗಿ, ಅಲ್ಲಿರತಕ್ಕ ಕಸಬುಗಳಿಗನುಸಾರವಾಗಿ ತಕ್ಕ ಏರ್ಪಾಡು ಮಾಡಿಕೊಡಬೇಕೆಂದು ಕೇಳಿಕೊಳ್ಳು ತ್ತೇನೆ. ಒಂದು ಹೈಸ್ಕೂಲು ಹಳ್ಳಿಯಲ್ಲಿದ್ದರೆ ಅದರ ಪಕ್ಕದಲ್ಲಿರುವ ಜಮೀನು ಕೊಟ್ಟು ವ್ಯವಸಾಯಮಾಡಿಸ ಬಹುದು. ಟೌನಿನಲ್ಲಾಗಲೀ, ಸಿಟಿಯಲ್ಲಾಗಲೀ ಇದ್ದರೆ ಅದಕ್ಕೆ ಸ್ಥಳ ಸನ್ನಿವೇಶಕ್ಕನುಸಾರವಾಗಿ ಯಾವ ರೀತಿ ಕೆಲಸ ಮಾಡಿಸಬಹುದು ಎಂಬುದನ್ನು ತಿಳಿದುಕೊಂಡು, ಅದಕ್ಕೆ ಹವಣಿಸಿಕೊಂಡು ಕೆಲಸ ಮಾಡಿದರೆ ಬಹಳ ಉತ್ತಮ ಎಂದು ಭಾವಿಸುತ್ತೇನೆ.

ಆಮೇಲೆ ಇನ್ನೊಂದು ವಿಚಾರ ಹೇಳಬೇಕೆಂದು ಬಯ ಸುತ್ತೇನೆ. ಮಹಿಳೆಯರ ವಿದ್ಯಾಭ್ಯಾಸದ ವಿಚಾರದಲ್ಲಿ ಸಮಿತಿಯವರು ತಿಳಿಸಿದ್ದಾರೆ. ನಾನು ಮಹಿಳೆಯರ ವಿದ್ಯಾಭ್ಯಾಸಕ್ಕೆ ವಿರೋಧಿಯಲ್ಲ. ಅವರಿಗೆ ಸಮಾನ ಸ್ಥಾನ ಕೊಡಕೂಡದು ಎಂದು ನಾನು ಹೇಳುವುದಿಲ್ಲ. ಆದರೆ ಅವರಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬಾರದು exceptional cases ಬಿಟ್ಟು ಬೇಕಾಗಿಲ್ಲ ಎಂದು ನನ್ನ ಅಭಿಪ್ರಾಯ...

1-30 P.M.

ನಾವು ಯಾವಾಗಲೂ ಆತುರಕ್ಕೆ ಯಾವುದನ್ನೂ ಮಾಡಕೂಡದು. ಹಿಂದಿನ ನಮ್ಮ ಸಂಸ್ಕೃತಿಯನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕು. ಅಲ್ಲದೆ ಈಗಲೂ ಬೇರೆ ದೇಶಗಳಲ್ಲಿನ ಪರಿಸ್ಥಿತಿಯನ್ನು ನೋಡಿ. ಫ್ರಾನ್ಸ್ ದೇಶದಲ್ಲಿ ಅಡಲ್ಟ್ ಫ್ರಾಂಚೈಸ್ ಬಂದಿದ್ದರೂ ಅಲ್ಲಿ ಸ್ತ್ರೀಯರು ಯಾರೂ ಮಂತ್ರಿಗಳಾಗಿ ಬರಕೂಡದೆಂದು ಮಾಡಿದ್ದಾರೆ. ಇಂಗ್ಲೆಂಡಿನಲ್ಲಿಯೂ ಸಹ ಸ್ತ್ರೀ ಮಂತ್ರಿ ಗಳು ಯಾರೂ ಇಲ್ಲ. ಹಿಂದೆ ಅಟ್ಲೀಯವರು ಪ್ರಧಾನಿಗ ಳಾಗಿದ್ದಾಗ ಒಬ್ಬರು ಸ್ತ್ರೀಯರು ಮಂತ್ರಿಗಳಾಗಿ ದ್ದರು. ಆದರೆ ಅವರು ಬೇಗ ಸತ್ತೇಹೋದರು. ಇವೊತ್ತು ನಾನು ಈ ಒಂದು ಅಭಿಪ್ರಾಯ ಹೇಳುತ್ತಿರು ವುದು ನನ್ನೊಬ್ಬನ ಅಭಿಪ್ರಾಯವೇ ಅಲ್ಲ. I represent both myself and my wife. ಅಂದಮಾತ್ರಕ್ಕೆ ನಾನು ಆ ಮಹಿಳಾ ಸ್ತ್ರೀ ಸದಸ್ಯರಿಗೆ ವಿರೋಧಿಯಾ ಗಿದ್ದೇನೆಂದಲ್ಲ. ಹೆಣ್ಣುಮಕ್ಕಳಿಗೆ ಫೀಜನ್ನು ಜಾಸ್ತಿ ಮಾಡಿದ್ದಕ್ಕಾಗಿ ಅವರು ಬಹಳವಾಗಿ ಗೋಳಾಡಿದರು. ಆದರೆ ನನ್ನ ವಾದ ಇಷ್ಟೆ. ನನ್ನ ಮಗನಿಗೆ ಫೀಜನ್ನು ಕೊಡುವವನೂ ನಾನೇ, ನನ್ನ ಮಗಳಿಗೆ ಫೀಜನ್ನು ಕೊಡುವವನೂ ನಾನೇ. ಆದ್ದರಿಂದ ನೀವೇಕೆ ಯೋಚನೆ

ಮಾಡುತ್ತೀರಿ ಎಂದು ನಾನವರಿಗೆ ಹೇಳಿದೆ. ಅಲ್ಲದೆ ಕಮಿಟಿಯವರೂ ಸಹ ಅವರಿಗೆ ಡೊಮೆಸ್ಟಿಕ್ ಸೈನ್ಸ್, ಅಡಿಗೆಮಾಡುವುದು ಇತ್ಯಾದಿ ವಿದ್ಯೆಗಳನ್ನು ಹೇಳಿಕೊಟ್ಟು ಅವರನ್ನು ಉತ್ತಮ ಗೃಹಿಣಿಯರಾಗುವುದಕ್ಕೆ ಸರಿಯಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಮನೆಯ ರಾಣಿಯರಾಗಿರಲಿ, ಸಂತೋಷ. ರಾಜ್ಯದ ರಾಣಿಯರಾಗಿರುವುದು ಬೇಡವೆಂದು ಮಾತ್ರ ನನ್ನ ಪ್ರಾರ್ಥನೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಹಾಗೆಂದರೆ ರಾಜನಿಗೆ ರಾಣಿ ಬೇಡವೇ!

ಶ್ರೀ ಜಿ. ಶಿವಪ್ಪ.—ಆಮೇಲೆ, ಉಪಾಧ್ಯಾಯರ ಶಿಕ್ಷಣದ ವಿಚಾರದಲ್ಲಿಯೂ ಈ ಸಮಿತಿಯವರು ಹೆಚ್ಚಿಗೆ ನಿಗಾ ಕೊಟ್ಟಿದ್ದಾರೆ. ಒಟ್ಟು ಸಂಸ್ಥಾನಕ್ಕೆ 20,000 ಸುಶಿಕ್ಷಿತ ಉಪಾಧ್ಯಾಯರುಗಳು ಬೇಕೆಂದು ಹೇಳಿ ವರ್ಷೇ ವರ್ಷೇ 2,000 ಉಪಾಧ್ಯಾಯರುಗಳನ್ನು ತರಪೇತು ಮಾಡಬೇಕೆಂದು ಹೇಳಿದ್ದಾರೆ.

ಒಟ್ಟಿನಲ್ಲಿ ಕಮಿಟಿಯವರು ಅಭಿಪ್ರಾಯ ಕೊಟ್ಟಿರುವ ರೀತಿಯಲ್ಲಿ ವಿದ್ಯಾಭ್ಯಾಸ ಸುಧಾರಣೆಯನ್ನು ತರುವುದು ಬಹಳ ಸಾಧುವಾಗಿದೆ. ಇದರಲ್ಲಿಯೂ ಕೆಲವು ಲೋಪದೋಷಗಳಿರಬಹುದು. ಒಬ್ಬರು ಉಪಾಧ್ಯಾಯರಿರುವ ಸ್ಕೂಲುಗಳಿಗೆ ಬದಲು ಇಬ್ಬರು ಉಪಾಧ್ಯಾಯರಿರುವ ಸ್ಕೂಲು, ನಾಲ್ವರು ಉಪಾಧ್ಯಾಯರಿರುವ ಸ್ಕೂಲು ಆಗುವುದೆಲ್ಲಿ? ಎಂದು ಶ್ರೀಮಾನ್ ಭೀಮಪ್ಪನಾಯಕರು ಟೀಕೆ ಮಾಡಿದರು. ಹೀಗೆ ಟೀಕೆ ಮಾಡುವುದರಿಂದೇನೂ ಪ್ರಯೋಜನವಿಲ್ಲ. ಅದ್ದರಿಂದ ನಾವು ಮುಂದುವರಿಯುವುದಕ್ಕಾಗುವುದಿಲ್ಲ. ಆದ್ದರಿಂದ ಕಾರ್ಯತಃ ಕೆಲಸದಲ್ಲಿ ತೊಡಗಿ ಅದರಲ್ಲೇನಾದರೂ ತೊಂದರೆಗಳು ಬಂದರೆ ಅದನ್ನು ಪರಿಹರಿಸುವುದಕ್ಕೆ ಯೋಚನೆಮಾಡಬಹುದು. ಅದು ಬಿಟ್ಟು ಈಗಲೇ ಟೀಕೆ ಮಾಡಹೊರಟು ಪ್ರಾರಂಭದಲ್ಲೇ brake ಹಾಕಿದರೆ ಯಾವುದೂ ಆಗುವುದಿಲ್ಲ. ವಿರೋಧ ಪಕ್ಷದವರು ಹಣಕಾಸಿನ ವಿಚಾರದಲ್ಲಿ ಹೇಗೆ ಮಾಡುವುದು ಎಂದು ಕೇಳುತ್ತಿದ್ದಾರೆ. ಮನಸ್ಸೊಂದು ಇದ್ದರೆ ಹಣ ಹೇಗಾದರೂ ಹೊಂದಿಸಬಹುದು. ನಮಗಿರತಕ್ಕ natural resources, ಸ್ವಾಭಾವಿಕವಾದ ಜನರ ಸಂಪತ್ತು ಹಾಗೂ ಇತರ ಸಂಪತ್ತುಗಳನ್ನು ಸರಿಯಾದ ರೀತಿಯಲ್ಲಿ ರೂಢಿಸಿಕೊಳ್ಳುವುದಾದರೆ ಸಾರ್ವಜನಿಕರೇ ಮುಂದೆ ಬಂದು ಸಹಾಯ ಮಾಡುತ್ತಾರೆ. ವಿದ್ಯಾಸಂಸ್ಥೆಗಳಿಗೆ ಕಟ್ಟಡಗಳನ್ನೊದಗಿಸುವುದಕ್ಕಾಗಿ ಸರ್ಕಾರದವರು ಖರ್ಚುಮಾಡಬೇಕಾಗಿಲ್ಲ. ಸರ್ಕಾರದವರು ತಕ್ಕ ಉತ್ತೇಜನ ಕೊಟ್ಟರೆ ಎಷ್ಟೋ ಜನ ಸಾರ್ವಜನಿಕರು ಮುಂದೆಬಂದು ಸಹಾಯ ಮಾಡುತ್ತಾರೆ. ಅಲ್ಲದೆ ನಮಗೆ ಕಟ್ಟಡಗಳು ಬೇಕೆಂದರೆ ಈಗ ಕಟ್ಟುತ್ತಿರುವ ಲೆಜಿಸ್ಲೇಟಿವ್ ಅಸೆಂಬ್ಲಿಯಂಥ ಕಟ್ಟಡಗಳೇನೂ ಬೇಕಾಗಿಲ್ಲ. ಒಂದು ನೆರಳಿದ್ದರೆ ಸಾಕು. ಒಟ್ಟಿನಲ್ಲಿ ಈ ಸುಧಾರಣೆಗಳು ಚೆನ್ನಾಗಿವೆ, ಈ ಸುಧಾರಣೆಗಳಲ್ಲಿ ಕೆಲವು ಲೋಪದೋಷಗಳೇನೋ ಇರಬಹುದು ಅವನ್ನೆಲ್ಲಾ ನಾನೀಗ ಹೇಳಹೊರಟರೆ ಕಾಲ ಹಿಡಿಯುತ್ತದೆ. ಅವುಗಳನ್ನು ಸರಿಮಾಡಿಕೊಂಡ ಈ ಸುಧಾರಣೆಗಳನ್ನು ಕಾರ್ಯಗತಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಟೀಕೆ ಮಾಡಿದ ಶ್ರೀಮಾನ್ ಭೀಮಪ್ಪನಾಯಕರೂ ಕೂಡ ಚಿತ್ರದುರ್ಗದಲ್ಲಿ ಮಾಡಿದ ಕಾನ್ಫರೆನ್ಸಿನಲ್ಲಿ ಮಾತನಾಡುವಾಗ ಈ ಸುಧಾರಣೆಗಳನ್ನು ಖಂಡಿತವಾಗಿಯೂ ಕಾರ್ಯಗತಮಾಡಬೇಕೆಂದು ಹೇಳಿದ್ದರು. ಆ ವಿಷಯ ಪತ್ರಿಕೆಗಳಲ್ಲೂ ಬಂದಿತ್ತು. ಆದ್ದರಿಂದ ಏನೇ ಆಗಲಿ ಈ ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ನಾನು ಸೂಚಿಸುತ್ತೇನೆ.

*ಶ್ರೀ ಜೆ. ಮಹಮದ್ ಇಮಾಂ (ಜಗಳೂರು).—ಸ್ವಾಮಿ, ಈ ವಿದ್ಯಾಭ್ಯಾಸ ಸಮಿತಿಯ ಸುಧಾರಣೆಗಳ ಬಗ್ಗೆ ನಮ್ಮಗಳ ಅಭಿಪ್ರಾಯವನ್ನು ಶೇಖರಿಸುವುದಕ್ಕಾಗಿ ಈಗ ವಿದ್ಯಾಸಚಿವರು ಅದನ್ನು ಸಭೆಯ ಮುಂದಿಟ್ಟಿದ್ದಾರೆ. ಇದುವರೆಗೆ ಅನೇಕ ಸಲಹೆಗಳು ಸಚಿವರಿಗೆ ಕೊಡಲ್ಪಟ್ಟಿವೆ. ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ಕೊಡುವುದಕ್ಕೇ ನನಗೆ ಬಹಳ ಭಯವಾಗುತ್ತಿದೆ. ಏಕೆಂದರೆ ಯಾವ ವಿಷಯವಾಗಿ ಅಭಿಪ್ರಾಯವನ್ನು ಕೊಡಬೇಕೋ ಅದೇ ನನಗೆ ತೋಚುವುದಿಲ್ಲ. ಅಂದ ಮಾತ್ರಕ್ಕೆ ನಾನು ಈ ಸುಧಾರಣೆಗಳನ್ನು ಓದಿಲ್ಲವೆಂದು ಯಾರೂ ಭಾವಿಸಕೂಡದು. ಬೇಕಾದಷ್ಟು ಅಂಕಿಅಂಶಗಳು ನನ್ನಲ್ಲಿ ತುಂಬಿವೆ. ಅಷ್ಟೊಂದು ತುಂಬಿರುವುದರಿಂದಲೇ ಯಾವ ವಿಷಯದಲ್ಲಿ ಅಭಿಪ್ರಾಯವನ್ನು ಕೊಡಲೆಂಬ ಸಂದಿಗ್ಧ ಪರಿಸ್ಥಿತಿ ನನ್ನ ಮನಸ್ಸಿನಲ್ಲುಂಟಾಗಿದೆ. ಬರೀ ಈ ಸುಧಾರಣಾಸಮಿತಿಯ ವರದಿಯೊಂದೇ ಅಲ್ಲ ನನ್ನ ಮನಸ್ಸಿನಲ್ಲಿರುವುದು, ಇತರ ಹಿಂದೆ ಬಂದಿರುವ ಡಾ॥ ಸಿ. ಆರ್. ರೆಡ್ಡಿಯವರ ವಿದ್ಯಾಭ್ಯಾಸ ಸುಧಾರಣಾವರದಿ, ಡಾ॥ ರಾಧಾಕೃಷ್ಣನ್‌ರವರು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ವಿಷಯದಲ್ಲಿ ತಯಾರಿಸಿಟ್ಟಿರುವ ವರದಿ ಮತ್ತು ಶೀಘ್ರದಲ್ಲೇ ಇಂಡಿಯಾ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಸೆಕೆಂಡರಿ ಎಜ್ಯುಕೇಷನ್ ಬೋರ್ಡಿನವರು ಒಪ್ಪಿಸಲಿರುವ ವರದಿ—ಇವೆಲ್ಲವೂ ನನ್ನ ಗಮನದಲ್ಲಿವೆ. ಹೀಗೆ ನಾನಾ ವರದಿಗಳು ನಮ್ಮ ಮುಂದಿರುವುದರಿಂದ ನಮಗೆ ದಿಗ್ಭ್ರಾಂತಿಯಾಗಿ ಏನು ಹೇಳಬೇಕೋ ಯಾವ ವಿಷಯದಲ್ಲಿ ಸರ್ಕಾರಕ್ಕೆ ಸಹಾಯಮಾಡಬೇಕೋ ನನಗೆ ತೋಚದಾಗಿದೆ. ಶ್ರೀಮಾನ್ ಕೆ. ಚೆಂಗಲರಾಯರೆಡ್ಡಿಯವರು ಈ ಸರ್ಕಾರದಲ್ಲಿದ್ದಾಗ ಅವರು ಡಾ॥ ಸಿ. ಆರ್. ರೆಡ್ಡಿಯವರನ್ನು ಕರೆಸಿ, ಸರ್ಕಾರದ ಹಣವನ್ನು ಬಹಳವಾಗಿ ವೆಚ್ಚಮಾಡಿ ಒಂದು ದೊಡ್ಡ ವರದಿಯನ್ನು ತಯಾರು ಮಾಡಿದರು. ಆ ವರದಿಯೂ ಸಭೆಯ ಗಮನಕ್ಕೆ ತರಲ್ಪಟ್ಟಿತು. ಆ ವರದಿಗನುಸಾರವಾಗಿ ಒಂದು ಮಸೂದೆಯನ್ನು ತಯಾರುಮಾಡಿ ಸದಸ್ಯರುಗಳಿಗೆ ಹಂಚಿದ್ದರು. ಆ ವರದಿಯಲ್ಲಿರುವ ಅನೇಕ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮುಂಚೆ ಬಹಳ ಪ್ರಯತ್ನಪಟ್ಟರು. ಆದರೆ, ಇದ್ದಕ್ಕಿದ್ದಹಾಗೆ ಆಗಿನ ಸರ್ಕಾರದವರು ಆ ಸಲಹೆಗಳನ್ನು ಮೂಲೆಗೊತ್ತಿ ಮೌನವನ್ನು ತಾಳಿದರು. ಆ ರಿಪೋರ್ಟಿನಲ್ಲಿ ನಮೂದಾಗಿದ್ದ ಯಾವ ವಿಷಯವನ್ನೂ ಕೂಡ ಅಧಿಕೃತವಾಗಿ ಆಗಿನ ಸರ್ಕಾರ ಕಾರ್ಯರೂಪಕ್ಕೆ ತರಲಿಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ನಿಜವಾಗಿಯೂ, ಡಾ॥ ಸಿ. ಆರ್. ರೆಡ್ಡಿಯವರ ಸಲಹೆಗಳಲ್ಲಿ ಅನೇಕವು ಚೆನ್ನಾಗಿವೆ. ವಿಶ್ವವಿದ್ಯಾನಿಲಯದ ಬಗ್ಗೆಯೂ ಆಗಿನ ಸರ್ಕಾರದವರು ಕೆಲವು ಸಲಹೆಗಳನ್ನು ಕಾರ್ಯಗತಮಾಡಲು ಸೂಚನೆಗಳನ್ನು ತರುತ್ತಾರೆಂದು ನಂಬಿದ್ದೆವು. ಅದರಂತೆ ನಾವೂ ಚರ್ಚೆ ಮಾಡಲು ಸಿದ್ಧರಾಗಿ ಬಂದಿದ್ದೆವು. ಆದರೆ ನಮ್ಮ ನಿರೀಕ್ಷಣೆಗೆ ಪ್ರತಿಯಾಗಿ ಆ ರಿಪೋರ್ಟನ್ನೇ ಮೂಲೆಗೊತ್ತಿಟ್ಟು ಅದನ್ನು ಪರ್ಯಾಲೋಚನೆಗೇ ತೆಗೆದುಕೊಳ್ಳಲಿಲ್ಲ. ಹೀಗೆ ಡಾ॥ ರೆಡ್ಡಿಯವರ ರಿಪೋರ್ಟ್ ಕಾರ್ಯಗತವಾಗಲಿಲ್ಲ; 'ಆಗಲಿಲ್ಲ ಎಂದು ಪ್ರಾಣವನ್ನು ಬಿಟ್ಟರು! ಅದಕ್ಕೆ ಹಿಂದೆ ಡಾ॥ ರಾಧಾಕೃಷ್ಣನ್‌ರವರು ಕೇಂದ್ರ ಸರ್ಕಾರದಿಂದ ವಿದ್ಯಾಭ್ಯಾಸದ ಬಗ್ಗೆ ಸುಧಾರಣೆಗಳನ್ನು ಸಲಹೆ ಮಾಡಲೋಸುಗ ನೇಮಿಸಲ್ಪಟ್ಟು, ಅವರು ಇಲ್ಲಿಗೂ ಬಂದು, ಅನೇಕ ವಿಷಯಗಳನ್ನು ಶೇಖರಿಸಿ ಒಂದು ಮಹತ್ವವಾದ ರಿಪೋರ್ಟನ್ನು ತಯಾರುಮಾಡಿದ್ದರು. ಆದರೆ ಆ ರಿಪೋರ್ಟಿನ ಪ್ರಕಾ

(ಶ್ರೀ ಜೆ. ಮಹಮದ್ ಇಮಾಂ)

ರವೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಇತ್ತೀಚೆಗೆ ಶ್ರೀಮಾನ್ ಹನುಮಂತಯ್ಯನವರು ಸರ್ಕಾರಕ್ಕೆ ಬಂದ ಮೇಲೆ ಅವರೊಂದು ನೈಜವಾದ ಪ್ರಯತ್ನವನ್ನು ಮಾಡಿ ವಿದ್ಯಾಭ್ಯಾಸದಲ್ಲಿ ಸರಿಯಾದ ಮಾರ್ಪಾಡು ಮಾಡಬೇಕೆಂಬ ಉದ್ದೇಶದಿಂದ ಒಂದು ಸಮಿತಿಯನ್ನು ನೇಮಿಸಿದರು. ಅದೊಂದು ಒಳ್ಳೆಯ ತಜ್ಞರಿಂದ, ಅನುಭವಸ್ಥರಿಂದ ಕೂಡಿದ ದೊಡ್ಡ ಸಮಿತಿಯಾಗಿತ್ತು, ನಾನೂ ಅದರಲ್ಲಿದ್ದೆ. ಆ ಸಮಿತಿಯವರು ಬಹಳ ಶೀಘ್ರವಾಗಿಯೇ ಹೆಚ್ಚಿನ ಶ್ರಮವಹಿಸಿ ಈ ಒಂದು ವರದಿಯನ್ನು ತಯಾರುಮಾಡಿದ್ದಾರೆ. ಆದರೂ, ನನಗೇಕೆ ಭಯವಾಗುತ್ತಿದೆಯೆಂದರೆ, ಕೊನೆಯಲ್ಲಿ ರಾಧಾಕೃಷ್ಣನ್‌ರವರ ರಿಪೋರ್ಟು, ಡಾ|| ಸಿ. ಆರ್. ರೆಡ್ಡಿಯವರ ರಿಪೋರ್ಟುಗಳಂತೆಯೇ ಇದೂ ಎಲ್ಲಿ ಪರಿಣಾಮಹೊಂದುತ್ತದೋ ಎಂದು ನನಗೆ ಯೋಚನೆಯಾಗಿದೆ. ಆ ರೀತಿಯಾಗಿ ಆಗಲಾರದು ಎಂದು ನನ್ನ ನಂಬಿಕೆ. ಏಕೆಂದರೆ, ಒಳ್ಳೆಯ ಘಳಿಗೆಯಲ್ಲಿ ಸರಸ್ವತಿ ಪೂಜೆಮಾಡಿ ನೈಜವಾದ ಭಕ್ತಿಯಿಂದ ಈ ಸಮಿತಿಯವರು ಈ ಕಾರ್ಯವನ್ನು ಆರಂಭಮಾಡಿ ನೆರವೇರಿಸಿದ್ದಾರೆ. ಆದ್ದರಿಂದ ಬಹಳ ಭಕ್ತಿಪೂರ್ವಕವಾಗಿ ನಾವೆಲ್ಲರೂ ಈ ರಿಪೋರ್ಟಿನಲ್ಲಿರತಕ್ಕ ಅಂಶಗಳನ್ನು ಯೋಚನೆಮಾಡೋಣ.

ನಾನೂ ಈ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದೆ, ನನ್ನ ಅಭಿಪ್ರಾಯವನ್ನು ಮತ್ತು ಕೆಲವು ವಿಷಯಗಳಲ್ಲಿ ನನ್ನ ಭಿನ್ನಾಭಿಪ್ರಾಯವನ್ನೂ ಸೂಚಿಸಿ ಅದನ್ನು ಡಿಸೆಂಟಿಂಗ್ ನೋಟ್‌ನಲ್ಲಿ ಬರೆದಿದ್ದೇನೆ. ಈ ವರದಿಯಲ್ಲಿರುವ ಅಂಶಗಳಲ್ಲಿ ಯಾವುವು ಸಾಧು ಯಾವುವು ಅಲ್ಲ ಎಂಬುದನ್ನು ಹೇಳುವುದು ನನ್ನ ಕರ್ತವ್ಯ. ಹಾಗೂ ಬರಿಯ 'ಥಿಯರಿ'ಯಲ್ಲಿ ಯಾವುದು ಸಾಧ್ಯ ಮತ್ತು ಈಗಿನ ಆರ್ಥಿಕಸ್ಥಿತಿಗನುಗುಣವಾಗಿ ಕಾರ್ಯಗತ ಮಾಡಲು ಯಾವುದು ಸಾಧ್ಯ, ಯಾವುದು ಅಸಾಧ್ಯ ಎಂಬುದನ್ನೆಲ್ಲಾ ಹೇಳಿದರೆ ನನ್ನ ಕರ್ತವ್ಯವನ್ನು ನಾನು ಮಾಡಿದಹಾಗಾಗುತ್ತದೆ. ಮುಖ್ಯವಾಗಿ ಈ ವರದಿಯಲ್ಲಿ ಸಮಿತಿಯವರು ಮಾಡಿರುವ ಸಲಹೆಗಳು ಕೇವಲ ನಾಲ್ಕೈದಿವೆ. ವರದಿಯನ್ನು ವಿಮರ್ಶೆ ಮಾಡುತ್ತಾಹೋದರೆ ಮುಂದೆ ಅವುಗಳೇನೆಂಬುದು ಸರಿಯಾಗಿ ಗೊತ್ತಾಗುತ್ತದೆ.

ಈಗ ವಿದ್ಯಾಭ್ಯಾಸ, ಪ್ರೀ-ಪ್ರೈಮರಿ ಅಥವಾ ನರ್ಸರಿ ಶಿಕ್ಷಣ, ಪ್ರಾಥಮಿಕಶಿಕ್ಷಣ, ಮಾಧ್ಯಮಿಕಶಿಕ್ಷಣ, ಸೆಕೆಂಡರಿ ಅಥವಾ ಪ್ರೌಢಶಿಕ್ಷಣ, ವಿಶ್ವವಿದ್ಯಾನಿಲಯಶಿಕ್ಷಣ, ಹೀಗೆ ಐದು ಘಟ್ಟಗಳಲ್ಲಿದೆ. ಸುಧಾರಣಾಸಮಿತಿಯವರು ಮಧ್ಯೆ ಇರುವ ಮಾಧ್ಯಮಿಕ ಶಾಲೆಗಳಲ್ಲಿ ಕೊಡುವ ಶಿಕ್ಷಣವನ್ನು ತೆಗೆದುಹಾಕಿ ನಾಲ್ಕುಭಾಗ ಅಥವಾ ಘಟ್ಟಗಳನ್ನು ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಎರಡನೆಯದಾಗಿ, ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಇದುವರೆಗೂ ಇದ್ದ ನಾಲ್ಕು ವರ್ಷದ ಅವಧಿಯನ್ನು ಆರು ವರ್ಷಕ್ಕೆ ಏರಿಸಬೇಕೆಂಬ ಒಂದು ಸಲಹೆ ಮಾಡಿದ್ದಾರೆ. ಎರಡನೆಯದು, ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಬೇಸಿಕ್ ಎಜ್ಯುಕೇಷನ್, ಎಂದರೆ ಮೂಲ ಶಿಕ್ಷಣವನ್ನು ಅಥವಾ craft education ಜಾರಿಗೆ ತರಬೇಕೆಂದು ಹೇಳಿದ್ದಾರೆ. ಮೂರನೆಯ ಸಲಹೆ 5—6ನೆಯ ತರಗತಿಗಳಲ್ಲಿ ಇಂಗ್ಲಿಷ್ ಶಿಕ್ಷಣ ಕೊಡಬೇಕೆಂಬುದು. ನಾಲ್ಕನೆಯದಾಗಿ, ಮಾಧ್ಯಮಿಕ ಶಾಲೆಯಲ್ಲಿ ನಾಲ್ಕು ವರ್ಷದ ಅವಧಿಯಲ್ಲಿ ಓದಿ ಎಲ್.ಎಸ್. ಮಾಡುವುದನ್ನು ತೆಗೆದುಹಾಕಿ, ಇದರ ಮೊದಲನೆಯ ಅರ್ಧವನ್ನು ಪ್ರಾಥಮಿಕ ವಿದ್ಯಾಭ್ಯಾಸಕ್ಕೂ ಎರಡನೆಯ ಅರ್ಧವನ್ನು ಪ್ರೌಢ ವಿದ್ಯಾಭ್ಯಾಸಕ್ಕೂ ಸೇರಿಸಿರುವುದೊಂದು ಬದಲಾವಣೆ. ಇದುವರೆಗೂ ಸೆಕೆಂಡರಿ ವಿದ್ಯಾಭ್ಯಾಸವೆನ್ನುವುದು ಬರೀ ಹೈಸ್ಕೂಲು ವಿದ್ಯಾಭ್ಯಾಸವಾಗುತ್ತಿದೆ. ಈ ಸಮಿತಿಯ ವರದಿಯ ಪ್ರಕಾರ ಸೆಕೆಂಡರಿ ವಿದ್ಯಾಭ್ಯಾಸ ಆರು ವರ್ಷಕ್ಕೇರಿಸಲ್ಪಟ್ಟಿದೆ. ಎರಡುವರ್ಷ ಮಿಡ್ಲ್ ಸ್ಕೂಲಿನಿಂದ ತೆಗೆದು, ಮೂರುವರ್ಷ ಹೈಸ್ಕೂಲು ಮತ್ತು ಎರಡುವರ್ಷ ಇಂಟರ್‌ಮೀಡಿಯೇಟ್, ಒಟ್ಟು ಏಳು ವರ್ಷವನ್ನು ಆರುವರ್ಷಮಾಡಿ, ಇದನ್ನು ಸೆಕೆಂಡರಿ ಎಜ್ಯುಕೇಷನ್ ಎಂಬುದಾಗಿ ಮಾಡಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಮಾಡಿರುವ ಬದಲಾವಣೆ ಅಷ್ಟು ಮುಖ್ಯವಲ್ಲ. ಅದನ್ನು ಆಮೇಲೆ ಹೇಳುತ್ತೇನೆ.

ಮುಖ್ಯವಾಗಿ, ವಿದ್ಯಾಭ್ಯಾಸದ ಸುಧಾರಣಾ ಸಮಿತಿಯವರು ಟೆಕ್ನಿಕಲ್ ಎಜ್ಯುಕೇಷನ್ ಅಥವಾ ವೃತ್ತಿ ಶಿಕ್ಷಣಕ್ಕೆ ಬಹಳ ಪ್ರಾಧಾನ್ಯತೆ ಕೊಟ್ಟು ಪ್ರಾಥಮಿಕ ವಿದ್ಯಾಭ್ಯಾಸದ ಆರಂಭದಿಂದ ಸೆಕೆಂಡರಿ ವಿದ್ಯಾಭ್ಯಾಸ, ಇಂಟರ್‌ಮೀಡಿಯೆಟ್ ಕೊನೆಯವರೆಗೂ ಪ್ರತಿಯೊಂದು ತರಗತಿಯಲ್ಲಿಯೂ ವೃತ್ತಿಶಿಕ್ಷಣವಿದ್ದೇ ಇರಬೇಕು, ಮೂರನೆಯ ಒಂದುಭಾಗದ ಕಾಲವನ್ನಾದರೂ ಇದಕ್ಕಾಗಿ ವಿನಿಯೋಗಿಸಬೇಕೆಂಬುದು ಸಮಿತಿಯ ಸಲಹೆ. ಸಾಮಾನ್ಯ ವಿದ್ಯಾಭ್ಯಾಸದ ಜೊತೆಗೆ ಸ್ಕೂಲುಗಳಲ್ಲಿ ವೃತ್ತಿಶಿಕ್ಷಣ ಕೊಡುವುದಲ್ಲದೆ, ಹೊರಗೆ ಪ್ರತ್ಯೇಕವಾಗಿ ವೃತ್ತಿಶಿಕ್ಷಣದ ಸಂಸ್ಥೆಗಳನ್ನು ಸ್ಥಾಪನೆಮಾಡಬೇಕೆಂಬ ಸಲಹೆಯೂ ಇದೆ. ಆರ್ಥಿಕ ದೃಷ್ಟಿಯಿಂದ ಇಡೀ ಸಮಿತಿಯ ಸಲಹೆಗಳನ್ನೆಲ್ಲಾ ಕ್ರೋಢೀಕರಿಸಿದರೆ ಎಷ್ಟು ಹಣ ಬೇಕಾಗುತ್ತದೆಂಬುದನ್ನು ನೋಡಬೇಕು. ಒತ್ತಾಯ ಪ್ರಾಥಮಿಕ ವಿದ್ಯಾಭ್ಯಾಸಮಾಡಿ ಪ್ರತಿಯೊಂದು ಹಳ್ಳಿಗೂ ಸ್ಕೂಲು ಕೊಟ್ಟು ಅಲ್ಲಿಗೆಲ್ಲಾ ಸರಿಯಾದ ಉಪಾಧ್ಯಾಯರನ್ನೊದಗಿಸಿ, ಸರಿಯಾದ ಶಿಕ್ಷಣ ಕೊಡುವುದಾದರೆ, ಸಮಿತಿಯ ಶಿಫಾರಸಿನ ಪ್ರಕಾರ ಹತ್ತು ವರ್ಷದ ನಂತರ ಪ್ರತಿ ವರ್ಷವೂ ಕನಿಷ್ಠಪಕ್ಷ ನಾಲ್ಕು ಕೋಟಿ ರೂಪಾಯಿಗಳನ್ನೊದಗಿಸಬೇಕಾಗುತ್ತದೆ. ಇದು ಪ್ರತಿವರ್ಷವೂ ಮಾಡಬೇಕಾಗುವ ವೆಚ್ಚ. ಸಮಿತಿಯವರು ಮಾಡಿರುವುದು ಅಂದಾಜು ಮಾತ್ರ, ಅಖೈರು ಅಥವಾ ನಿರ್ದಿಷ್ಟ ಅಂದಾಜಲ್ಲವೆಂದು ಶ್ರೀಮಾನ್ ಭೀಮಪ್ಪನಾಯಕರು ಹೇಳುತ್ತಾರೆ. ಎರಡನೆಯದಾಗಿ, ವೃತ್ತಿಶಿಕ್ಷಣವು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿಯೂ, ಮೂಲಶಿಕ್ಷಣದಲ್ಲಿಯೂ ಇರುವುದರಿಂದ, ಸಮಿತಿಯವರ ಶಿಫಾರಸಿನ ಪ್ರಕಾರ ಮೊದಲು ಒಂದು ವರ್ಷ non-recurring expenditure 50 ಲಕ್ಷ ರೂಪಾಯಿ, ಅನಂತರ ಪ್ರತಿವರ್ಷವೂ ಒಂದು ಕೋಟಿ ರೂಪಾಯಿ ಖರ್ಚಾಗುತ್ತದೆ. ಇದನ್ನೆಲ್ಲಾ ನಾವು ಜಾರಿಗೆ ತರುವುದಾದರೆ, ಸರ್ಕಾರಕ್ಕೆ ಪ್ರತಿವರ್ಷವೂ ಹೆಚ್ಚು ಖರ್ಚಾಗುವುದು ಕನಿಷ್ಠಪಕ್ಷ 6 ಅಥವಾ $6\frac{1}{2}$ ಕೋಟಿ ರೂಪಾಯಿ ಅಥವಾ ಇನ್ನೂ ಸ್ವಲ್ಪ ಹೆಚ್ಚಾದರೂ ಆಗಬಹುದು. ಏಕೆಂದರೆ ಇದು ನನ್ನ conservative estimate. ಈಗ ವಿದ್ಯಾಭ್ಯಾಸಕ್ಕಾಗಿ ಖರ್ಚಾಗುತ್ತಿರುವ ಮೂರೂವರೆ ಕೋಟಿ ರೂಪಾಯಿಗಳೇ ಅಲ್ಲದೆ ಇನ್ನೂ ಆರು ಕೋಟಿ ರೂಪಾಯಿ ಬೇಕಾಗುತ್ತದೆ! ಈ ಸುಧಾರಣಾ ಸಮಿತಿಯವರು ಮಾಡಿರುವ ಸಲಹೆ ಬಹಳ ಒಳ್ಳೆಯದು ಮತ್ತು ಅಮೂಲ್ಯವಾದುದು. ಆದರೆ ಇವುಗಳೆಲ್ಲವನ್ನೂ ಕಾರ್ಯಗತಮಾಡಲು ಬೇಕಾಗುವ ಹಣವನ್ನೆಲ್ಲಿಂದ ತರುವುದು ಎಂಬ ಯೋಚನೆ ನನ್ನನ್ನು ಬಾಧಿಸುತ್ತಿದೆ. ಹಣವನ್ನೊದಗಿಸಿಕೊಳ್ಳುವ ವಿಚಾರವಾಗಿಯೂ ಕೆಲವು ಸಲಹೆಗಳನ್ನು ಸಮಿತಿಯವರು ಮಾಡಿದ್ದಾರೆ; ಆದರೆ ಪೂರ್ತಿ ಮಾಡಿಲ್ಲ. ಕೆಲವು ತೆರಿಗೆಗಳನ್ನು ಹೆಚ್ಚಿಸಬೇಕೆಂದೂ,

ಕೆಲವನ್ನು ಹೊಸದಾಗಿ ಹಾಕಬೇಕೆಂದೂ ಸಲಹೆ ಮಾಡಿದ್ದಾರೆ. ಇದನ್ನು ಮುಖ್ಯವಾಗಿ ಸಭೆ ಗಮನಿಸಬೇಕು. ವಿದ್ಯಾಭ್ಯಾಸದ ಸೆಸ್ಸನ್ನು ಮೂರರಷ್ಟು ಹೆಚ್ಚಿಸುವುದು ಮತ್ತು ಕೈಗಾರಿಕೆಗಳು ಮತ್ತು ವ್ಯಾಪಾರೋದ್ಯಮಗಳಿಂದಬರುವ ಲಾಭಗಳ ಮೇಲೆ ವಿದ್ಯಾಭ್ಯಾಸದ ಸೆಸ್ ವಿಧಿಸುವುದು ಮತ್ತು ಲಾಭದಾಯಕ ಬೆಳೆಗಳ (commercial crops) ಮೇಲೆ ತೆರಿಗೆಯನ್ನು ವಿಧಿಸುವುದು, ಮುಂತಾದುವುಗಳನ್ನು ಸೂಚಿಸಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಎಲ್ಲವನ್ನೂ ಹೇಳಿ, ಎಲ್ಲರೂ ತಿಳಿದುಕೊಳ್ಳಲಿ. Let them keep their eyes open.

ಶ್ರೀ ಜೆ. ಮಹಮ್ಮದ್ ಇಮಾಂ.—ಸ್ಕೂಲು ಕಾಲೇಜುಗಳ ಫೀಜುದರ ಹೆಚ್ಚಿಸುವುದು, taxes on commercial crops ಮುಂತಾದವುಗಳನ್ನು ಸೂಚಿಸಿದ್ದಾರೆ. ನೂರು ಜನರಿಗಿಂತ ಹೆಚ್ಚು ಕೆಲಸಗಾರರನ್ನು ನೇಮಕ ಮಾಡಿಕೊಳ್ಳುವ ಕೈಗಾರಿಕೆಗಳ ಮೇಲೆ ತೆರಿಗೆ ಹಾಕುವುದಲ್ಲದೆ, ನಿರ್ಬಂಧಕ ವಿದ್ಯಾಭ್ಯಾಸ, ಬೇಸಿಕ್ ವಿದ್ಯಾಭ್ಯಾಸ, ಹಿಂದಿ ಪ್ರಚಾರ, ಪೋಸ್ಟ್ ಗ್ರ್ಯಾಜುಯೇಟ್ ರಿಸರ್ಚ್, ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸಂಶೋಧನೆ, ನ್ಯಾಷನಲ್ ಕೆಡೆಟ್‌ಕೋರ್ ದಳಗಳು, ವಿದ್ಯಾಪೀಠಗಳು ಇತ್ಯಾದಿ ವೆಚ್ಚದ ಬಾಬುಗಳಿಗೆ ಕೇಂದ್ರ ಸರ್ಕಾರದವರಿಂದಲೂ ದ್ರವ್ಯಸಹಾಯ ಪಡೆಯಬೇಕೆಂದು ಸೂಚಿಸಿದ್ದಾರೆ. ಅಲ್ಲದೆ ಸಂಸ್ಥಾನದ ಸರ್ಕಾರ ಕೊಡುವ ಹಣದ ಜೊತೆಗೆ ಸಾರ್ವಜನಿಕರಿಂದ ಚಂದಾ ಹಣವನ್ನು ವಸೂಲು ಮಾಡುವುದನ್ನೂ ಸಲಹೆ ಮಾಡಿದ್ದಾರೆ. ಇದಕ್ಕಿಂತ ಹೆಚ್ಚು ಸಲಹೆ ಮಾಡಲು ಸಮಿತಿಯ ಸದಸ್ಯರು ಶಕ್ತರಲ್ಲವೆಂದು ಹೇಳಬಹುದು. Nightmare of finance ಎಂಬುದನ್ನು ನಾನು ನನ್ನ 'ಡಿಸೆಂಟಿಂಗ್' ನೋಟ್'ನಲ್ಲಿ ಹೇಳಿದ್ದೇನೆ. ಉಚಿತ ಪ್ರಾಥಮಿಕ ವಿದ್ಯಾಭ್ಯಾಸವನ್ನು ಎಲ್ಲ ಪ್ರಜೆಗಳಿಗೂ ಕೊಡುವುದು ರಾಜ್ಯಾಂಗದ ಪ್ರಕಾರ ಮೈಸೂರು ಮತ್ತು ಕೇಂದ್ರ ಸರ್ಕಾರಗಳ ಮೇಲೆ ಬಿದ್ದಿರುವ ಜವಾಬ್ದಾರಿ. ಕೇಂದ್ರ ಸರ್ಕಾರಕ್ಕೆ ಸುಮಾರು ಹತ್ತು ಕೋಟಿಯವರೆಗೆ ತೆರಿಗೆಯ ರೂಪದಲ್ಲಿ ಕೊಡುತ್ತಿದ್ದೇವೆ. ಹೀಗಿರುವಾಗ ಕೇಂದ್ರ ಸರ್ಕಾರ, ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನ 14ನೆಯ ವಿಧಿಯ ಪ್ರಕಾರ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಸಹಾಯ ಮಾಡಬೇಕು. ಈ ವಿಷಯದಲ್ಲಿ ಎಲ್ಲರಿಗೂ ಸಹಾನುಭೂತಿಯಿದೆ. ಕೇಂದ್ರಸರ್ಕಾರ ನಮ್ಮ ಸಹಾಯಕ್ಕೆ ಬಾರದೆ, ನಮಗೆ ಆರ್ಥಿಕ ನೆರವು ನೀಡದೇ ಹೋದರೆ, ಈ ಸುಧಾರಣೆಗಳನ್ನು ಜಾರಿಗೆ ತರುವುದು ಬಹಳ ಕಷ್ಟ. ನಮ್ಮಲ್ಲಿ ಬಡತನ ಹೆಚ್ಚುತ್ತಿರುವಾಗ, ಜನರ ಜೀವನ ಮಟ್ಟ ಕಡಮೆಯಾಗುತ್ತಿರುವಾಗ, ಇವರ ಮೇಲೆ ಹೊಸ ತೆರಿಗೆಗಳನ್ನು ಹಾಕಬೇಕೆಂದರೆ ಅದನ್ನು ಯಾರೂ ಒಪ್ಪುವುದಿಲ್ಲವೆಂದು ಹೇಳಿದರೆ ಇದನ್ನು ತಾವೂ ಒಪ್ಪುತ್ತೀರೆಂದು ನಂಬಿದ್ದೇನೆ ಇದು ಸರ್ಕಾರದವರ ಗಮನದಲ್ಲಿಯೂ ಕೂಡ ಇದೆ. ಶ್ರೀಮಾನ್ ಹನುಮಂತಯ್ಯನವರು ಟಿ. ನರಸೀಪುರದಲ್ಲಿ ಇದರ ವಿಷಯ ಪ್ರಸ್ತಾಪಮಾಡಿದನಂತರ ನಾನು ಅವರನ್ನು ಕೇಳಿದೆ; ಅದಕ್ಕೆ ಅವರು 'do not worry about money' ಎಂದು ಹೇಳಿದರು. ಟಿ ನರಸೀಪುರದಲ್ಲಿ, ಯಾರ ಮೇಲೂ ತೆರಿಗೇ ಹಾಕುವುದಿಲ್ಲದೆಂದು ಅವರು ಹೇಳಿದರು. ಅಲ್ಲದೆ ಮೊನ್ನೆತಾನೇ ಹೆಸರು ಘಟ್ಟದಲ್ಲಿಯೂ ಕೂಡ ಹಾಗೆಯೇ ಹೇಳಿದರೆಂದು ಕಾಣುತ್ತದೆ. ನಮ್ಮನ್ನು ನಿಮ್ಮ ನಂಬಿಕೆಗೆ ತೆಗೆದುಕೊಳ್ಳಿ, ಈ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಹೇಗೆ ಮಾಡುತ್ತೀರೆಂಬುದನ್ನು ನಮಗೆ ವಿಶದವಾಗಿ ತಿಳಿಸಿ ಎಂದು ನಾನು ಕೇಳಿದೆ. ಆದರೆ ಅವರು ನಮಗೆ ಇನ್ನೂ ಏನನ್ನೂ ಹೇಳುತ್ತಿಲ್ಲ.

ಈಗ ನಮಗೆ ಮುಖ್ಯವಾಗಿ ಇರತಕ್ಕ ಪ್ರತಿಬಂಧಕ ಯಾವುದೆಂದರೆ ನಮ್ಮ ಆರ್ಥಿಕಪರಿಸ್ಥಿತಿ. ನಾವೀಗ ಈ ವಿದ್ಯಾಭ್ಯಾಸದ ಸುಧಾರಣೆಗಳನ್ನು ಜಾರಿಗೆ ತರಬೇಕೆಂದರೆ ನಮಗೆ ಸುಮಾರು 6 ರಿಂದ 8 ಕೋಟಿ ರೂಪಾಯಿಗಳವರೆಗೂ ದುಡ್ಡುಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ಮತ್ತೊಂದು ಅಂಶವನ್ನು ತರಲಿಚ್ಛಿಸುತ್ತೇನೆ, ನಮಗೆ ಹಾಗೆ ಬೇಕಾಗುವ 6—8 ಕೋಟಿ ರೂಪಾಯಿಗಳ ಮೊಬಲಗು ಒಂದೇ ಸಾರ್ತಿಗೆ ಬೇಕಾಗಿರುವುದಿಲ್ಲ. ಆ ಮೊಬಲಗು 10 ವರ್ಷಗಳ ಆಖೈರಿನಲ್ಲಿ ಅಷ್ಟಾಗುತ್ತದೆಂದು ನಾವು ಲೆಕ್ಕಹಾಕಿಕೊಂಡಿದ್ದೇವೆ. ಆದುದರಿಂದ We must be prepared to find out sources and means for six to eight crores of rupees for its implementation. ಆದುದರಿಂದ ನಮಗೆ ಇದರ ಜವಾಬ್ದಾರಿ ಮೊದಲನೆಯ ಒಂದು ವರ್ಷದಲ್ಲಿ ಒಂದು ಕೋಟಿ ರೂಪಾಯಿಗಳು ಹೆಚ್ಚಿಗೆ ಬೇಕಾಗಿದ್ದರೆ, 2ನೆಯ ವರ್ಷದಲ್ಲಿ 2 ಕೋಟಿ ರೂಪಾಯಿಗಳು ಹೆಚ್ಚಿಗೆ ಬೇಕಾಗುತ್ತದೆ. 3ನೆಯ ವರ್ಷದಲ್ಲಿ 3 ಕೋಟಿ ರೂಪಾಯಿಗಳು, ನಾಲ್ಕನೆಯ ವರ್ಷದಲ್ಲಿ 4 ಕೋಟಿ ರೂಪಾಯಿಗಳೂ ಹೀಗೆ ಹೆಚ್ಚುತ್ತಾ ಹೋಗುತ್ತದೆ. ಆದುದರಿಂದ ನಮಗೆ ಇಷ್ಟೊಂದು ದುಡ್ಡೂ ಒಂದೇ ವರ್ಷಕ್ಕೇನೂ ಬೇಕಾಗಿರುವುದಿಲ್ಲ. ಆದರೆ ಈ ವಿಷಯದಲ್ಲಿ ಸರ್ಕಾರದವರಿಗೆ ನಾನು ಸಲಹೆ ಕೊಡಬೇಕೆಂದರೆ ಅದು ನನಗೆ ಬಹಳ ಕಷ್ಟವಾಗಿದೆ. ಆದರೆ ನಾನೊಂದು ಅಂಶವನ್ನು ತಮಗೆ ಹೇಳುವುದಾದರೆ, ನನ್ನ ಒಂದು ಸಲಹೆ ಏನಿರುತ್ತೆಂದರೆ, ತಾವು ಈ ವಿದ್ಯಾಭ್ಯಾಸದ ಖರ್ಚುವೆಚ್ಚಗಳೆಲ್ಲವನ್ನೂ ಕೇಂದ್ರ ಸರ್ಕಾರದವರ ಮೇಲೆ ಹಾಕುವುದು ಸೂಕ್ತವಾದುದೆಂದು ತಿಳಿಸಲಿಚ್ಛಿಸುತ್ತೇನೆ. ಆದರೆ ತಾವು ಹಾಗೆ ಮಾಡದಿದ್ದರೆ ಇಂದು ಇದರ ಖರ್ಚನ್ನು ಜನರ ಮೇಲೆ ಹಾಕುವ ಹಾಗಿಲ್ಲ. ಆ ರೀತಿ ಮಾಡತಕ್ಕದ್ದೂ ಕೂಡ ಸರಿಯಾದುದಲ್ಲ. ಹಾಗೂ ಒಂದು ವೇಳೆ ತಾವು ಜನರ ಮೇಲೆ ಈ ಹೊರೆಯನ್ನು ಹೇರುವುದಾದರೆ ತಮಗೆ ಅವರಿಂದ ಸಾಕಷ್ಟು ಹಣವೂ ಬರುವುದಿಲ್ಲ. ಇದರಿಂದ ಜನರಿಗೆ ಒಂದು ಹೆಚ್ಚಿನ ಕಿರುಕುಳವಾಗಲು ಅವಕಾಶವಾಗುತ್ತದೆಯೇ ಹೊರತು ನೀವು ನಿಮ್ಮ ಕಾರ್ಯಸಾಧನೆ ಮಾಡಿದಂತಾಗುವುದಿಲ್ಲ. ತಾವು ಹೋದ ಸಾರ್ತಿಯೇ ಈ ವಿದ್ಯಾಭ್ಯಾಸದ ಸೆಸ್ಸನ್ನು ಒಂಭತ್ತು ಪೈಗಳಿಂದ ಒಂದೂವರೆಯಾಣೆಗೆ ಏರಿಸಬೇಕೆಂದು ಒಂದು ಉದ್ದೇಶವನ್ನಿಟ್ಟುಕೊಂಡಿದ್ದಿರಿ. ಅದಕ್ಕೆ ನಮ್ಮ ಪಕ್ಷದವರೂ ಮತ್ತು ಇನ್ನು ಅನೇಕ ಮಾನ್ಯ ಸದಸ್ಯರುಗಳೂ ಬಹಳ ತೀವ್ರವಾಗಿ ವಿರೋಧಿಸಿದರು, ಮತ್ತು ಪ್ರತಿಭಟಿಸಿದರು. That is a first step towards taxation. ಆದರೆ ತಾವು ಅದನ್ನು ಜಾರಿಗೆ ತರುವುದಿಲ್ಲವೆಂದು ನಾವು ನಂಬಿದ್ದೇವೆ. ಆದರೂ ತಾವು ಅದನ್ನು ಜಾರಿಗೆ ತರತಕ್ಕಂಥ ಒಂದು ಅಧಿಕಾರವನ್ನು ತೆಗೆದುಕೊಂಡಿದ್ದೀರಿ ಆದುದರಿಂದ ತಾವು ಏನು ಮಾಡುತ್ತೀರೆಂದು ನಾವು ಈಗಲೇ ಹೇಳುವುದಕ್ಕಾಗುವುದಿಲ್ಲ.

ಇನ್ನು ನಾನು ಈ ಸಮಿತಿಯವರು ಮಾಡಿರತಕ್ಕ ವರದಿಯ ಬಗ್ಗೆ ಒಂದು ಅಂಶವನ್ನು ತಿಳಿಸುವುದಾದರೆ, ಅವರು ಕೆಲವು ಬಹುಮುಖ್ಯವಾದಂಥ ಮತ್ತು ಸುಲಭವಾಗಿ ಕಾರ್ಯರೂಪಕ್ಕೆ ತರುವಂಥ ಅಮೂಲ್ಯವಾದ ಸಲಹೆಗಳನ್ನು ಮಾಡಿದ್ದಾರೆ. ಈ ಸಲಹೆಗಳಲ್ಲಿ ಮೊದ

(ಶ್ರೀ ಜೆ. ಮಹಮ್ಮದ್ ಇಮಾಂ)

ಲನೆಯದು, ಈಗಿನ ಪ್ರಾಥಮಿಕ ವಿದ್ಯಾಭ್ಯಾಸವನ್ನು 4 ವರ್ಷಗಳಿಂದ 6 ವರ್ಷಗಳಿಗೆ ಹೆಚ್ಚು ಮಾಡಬೇಕು ಎಂಬುದೇ ಆಗಿದೆ, ಈ ಅಭಿಪ್ರಾಯವನ್ನು ಕೆಲವರು ವಿರೋಧಿಸಿದ್ದಾರೆ. ಈ ಸಮಿತಿಯು ಮೊಟ್ಟಮೊದಲನೆಯದಾಗಿ ಸೇರುವುದಕ್ಕೆ ಮುಂಚೆ ಈ ವಿದ್ಯಾಭ್ಯಾಸದ ವಿಷಯ ಚರ್ಚೆಗೆ ಬಂದಾಗ ನಾನು ಈ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು 4 ವರ್ಷಗಳಿಂದ 6 ವರ್ಷಗಳಿಗೆ ಹೆಚ್ಚಿಸಬೇಕೆಂದು ಎರಡು ಕಾರಣಗಳಿಂದ ಒಂದು ಸಲಹೆ ಮಾಡಿದ್ದೆನು. ಏತಕ್ಕಾಗೆಂದರೆ ಮೊದಲನೆಯದಾಗಿ ಈಗ ನಾವು ಈ ಚಿಕ್ಕವಯಸ್ಸಿನ ಬಾಲಕರಿಗೆ 4 ವರ್ಷದ ಅವಧಿಯಲ್ಲಿ ಕೊಡುತ್ತಿರುವ ಶಿಕ್ಷಣದಿಂದ ಅವರಿಗೆ ಸರಿಯಾದ ಜ್ಞಾನಾರ್ಜನೆಯಾಗುವುದಿಲ್ಲ. ನಾವು ಅವರಿಗೆ ಕೇವಲ ಕೆಲವು ವಿಷಯಗಳಲ್ಲಿ ಮಾತ್ರ ತಿಳಿವಳಿಕೆ ಕೊಡುತ್ತೇವೆಯೇ ಹೊರತು ಅವರಿಗೆ ಬಾಕಿ ಪ್ರಾಪಂಚಿಕ ವಿಷಯವೇನೂ ಗೊತ್ತಾಗಿರುವುದಿಲ್ಲ. ಆದಕಾರಣ ಅವರಿಗೆ ಬಲಾತ್ಕಾರವಾಗಿ ಈ ವಿದ್ಯಾಭ್ಯಾಸವನ್ನು 6 ವರ್ಷ ಕಾಲವಾದರೂ ಕೊಟ್ಟರೆ ಅವರಿಗೆ ಒಂದು ಸಾಧಾರಣ ರೀತಿಯಲ್ಲಿ ಪ್ರಪಂಚ ಜ್ಞಾನ ಉದಯವಾದೀತು. ಹಾಗೆ ಮಾಡಿದಲ್ಲಿ they may be considered as being fairly educated. ಇದರಿಂದ ಅವರಿಗೆ ಈ ಪ್ರಜಾಪ್ರಭುತ್ವ ಯುಗದಲ್ಲಿ ಏನು ನಡೆಯುತ್ತಿದೆ, ರಿಪಬ್ಲಿಕ್ ಎಂದರೇನು, ಇತ್ಯಾದಿ ಕೆಲವು ಪ್ರಾಮುಖ್ಯ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಒಂದು ಶಕ್ತಿಯುಂಟಾಗುತ್ತದೆ. ಇದನ್ನು 6 ವರ್ಷಗಳಿಗೆ ಹೆಚ್ಚಿಸುವುದಕ್ಕೆ ಇದೂ ಒಂದು ಕಾರಣ. ಇನ್ನು ಎರಡನೆಯ ಕಾರಣವೆಂದರೆ, ನಮ್ಮ ಕಾನ್ಸ್ಟಿಟ್ಯೂಷನ್ನಿನಲ್ಲಿ ಹೇಳಿರುವ ಪ್ರಕಾರ 14 ವರ್ಷಗಳ ವಯಸ್ಸಿನವರೆಗೆ ದೇಶದಲ್ಲಿರತಕ್ಕ ಪ್ರತಿಯೊಬ್ಬ ಹುಡುಗರಿಗೂ ಉಚಿತ ಮತ್ತು ಒತ್ತಾಯ ಶಿಕ್ಷಣವನ್ನು ಕೊಡಬೇಕಾಗಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ತಾವು ಇದನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಕಂಡುಬರುತ್ತಿದೆ : ಅದಕ್ಕೆ ಮುಖ್ಯ ಕಾರಣ ತಮಗಿರತಕ್ಕ ಆರ್ಥಿಕ ಅಡಚಣೆಗಳು. ಅದುದರಿಂದ ತಾವು ಹಾಗೆ ಆ 14 ವರ್ಷಗಳತನಕ ಈ ವಿದ್ಯಾಭ್ಯಾಸವನ್ನು ಕೊಡಲು ಸಾಧ್ಯವಾಗುವುದಿಲ್ಲವೆಂದು ಕಂಡುಬರುತ್ತಿರುವುದರಿಂದ ಈ ಅವಧಿಯನ್ನು 6 ವರ್ಷಗಳವರೆಗಾದರೂ ಕಡ್ಡಾಯವಾಗಿ ಕೊಟ್ಟಪಕ್ಷದಲ್ಲಿ ಇದರಿಂದ ಮುಂದಕ್ಕೆ ಅವರಿಗೆ ಆ ಸೆಕಂಡರಿ ಎಜ್ಯುಕೇಷನ್ ಸ್ಟೇಜಿನಲ್ಲಾದರೂ ಒಂದು ಸಹಾಯ ಬಹಳಮಟ್ಟಿಗೆ ಆಗುತ್ತದೆಂಬುದು ನನ್ನ ಅಭಿಪ್ರಾಯ ಈ ಅಭಿಪ್ರಾಯದಿಂದ ಲಾಜಿಕಲ್ ಆಗಿ 6 ವರ್ಷಗಳ ಮೇಲೆ ಈ ಮಿಡಲ್ ಸ್ಕೂಲ್ ಪರೀಕ್ಷೆಯನ್ನು ತೆಗೆದುಹಾಕಿದ್ದಾರೆ. ಆದರೆ ಅನೇಕರು ಇದನ್ನು ಒಪ್ಪಿರುವುದಿಲ್ಲ. ಈ ಮಿಡಲ್ ಸ್ಕೂಲ್ ಪರೀಕ್ಷೆಯ ಚರಿತ್ರೆಯೇನೆಂಬುದನ್ನು ನಾನು ಹೇಳಬೇಕಾದರೆ—ನಾನು ಈ ಹಿಂದೆ ಮಂತ್ರಿಯಾಗಿದ್ದಾಗ ಎಂದರೆ 1942-43ರ ರಲ್ಲಿ ಮತ್ತು ಕಾಂಗ್ರೆಸ್ ಪಕ್ಷದವರು ವಿರೋಧಪಾರ್ಟಿಯಲ್ಲಿದ್ದಾಗ ಈ ಲೋಯರ್‌ಸೆಕಂಡರಿ ಪರೀಕ್ಷೆಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಒಂದು ನಿರ್ಣಯವನ್ನೇ ತೆಗೆದುಕೊಂಡುಬಂದಿದ್ದರು. ಆಗ ಈ ವಿಷಯ ಬಹಳ ತೀವ್ರವಾಗಿ ಚರ್ಚೆ ಆಯಿತು. ಆಗ ಸಭೆಯಲ್ಲಿದ್ದವರೆಲ್ಲರೂ ಈ ಪರೀಕ್ಷೆಯನ್ನು ತೆಗೆಯುವುದಕ್ಕೆ ಒಪ್ಪಿದರು. ಆದಾಗ್ಯೂ ಸರ್ಕಾರದವರು ಇದಕ್ಕೆ ಒಪ್ಪದೆ ಇದನ್ನು ಹಾಗೆಯೇ ಸಂಪೂರ್ಣವಾಗಿ ತೆಗೆದುಹಾಕುವುದರ ಬದಲು ಇದನ್ನು ಸ್ತ್ರೀಯರ ವಿಷಯದಲ್ಲಿ ಮಾತ್ರ ಅವರ ಆಪ್ಷನ್ನಿಗೆ ಬಿಟ್ಟು, ಅವರು ಬೇಕಾದರೆ ಪಬ್ಲಿಕ್ ಪರೀಕ್ಷೆಗೆ ಕುಳಿತುಕೊಳ್ಳಬಹುದು, ಬೇಡವಾದರೆ ಹಾಗೇ ಕ್ಲಾಸ್ ಪ್ರಮೋಷನ್ ಮೇಲೆ ಮುಂದೆ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಹೋಗಬಹುದು ಎಂದು ಆರ್ಡರನ್ನು ಹೊರಡಿಸಲಾಗಿತ್ತು, ಆಗಿನ ಲಾಗಾಯ್ತಿನಿಂದಲೂ ಈ ಮಿಡಲ್ ಸ್ಕೂಲು ಪರೀಕ್ಷೆಯೆಂಬುದು ಮೈಸೂರು ಸಂಸ್ಥಾನದಲ್ಲಿ ಉಳಿದುಕೊಂಡು ಬಂದಿರುತ್ತದೆ. ಆದರೆ ಬಾಕಿ ಇನ್ನು ಯಾವ ಸ್ಟೇಟಿನಲ್ಲಿಯೂ ಈ ರೀತಿಯ ಒಂದು ಮಿಡಲ್‌ಸ್ಕೂಲು ಪರೀಕ್ಷೆಯಿರುವುದಿಲ್ಲ. ಈಗ ಈ ಎಲ್. ಎಸ್. ಪರೀಕ್ಷೆ ಇರತಕ್ಕದ್ದು ಅನಾವಶ್ಯಕ, ಮುಂದೆ ಮುಂದೆ ಬೇಗ ಓದಿಕೊಂಡು ಹೋಗಬೇಕೆಂಬ ವಿದ್ಯಾರ್ಥಿಗಳಿಗೆ ಇದೊಂದು ಪ್ರತಿಬಂಧಕವೆಂದು ಭಾವಿಸಲಾಗಿದೆ, ನಿರಾಯಾಸವಾಗಿ ಬಾಲಕರಿಗೆ 6 ವರ್ಷದಿಂದ 14 ವರ್ಷದತನಕ ವಿದ್ಯಾಭ್ಯಾಸವನ್ನು ಒಂದು ಸುಲಲಿತಮಾರ್ಗದಲ್ಲಿ ಅವರಿಗೆ ದೊರೆಯುವಂತೆ ಮಾಡಬೇಕೆಂಬುದಿರುವಾಗ, ಇಂಥ ಒಂದು ಉದ್ದೇಶ ಎಲ್ಲರ ಮನಸ್ಸಿನಲ್ಲಿಯೂ ಮೂಡಿರುವಾಗ, ಈ ಎಲ್. ಎಸ್. ಎಂಬುದೊಂದು ಪರೀಕ್ಷೆಯನ್ನು ಈ ಮಧ್ಯೆ ಹುಡುಗರಿಗೆ ತಂದುಹಾಕಿದರೆ ಇದರಿಂದ ಅನೇಕರು ಫೈಲ್ ಆಗಿ ಅವರಲ್ಲಿ ಅನೇಕರಿಗೆ ಉತ್ಸಾಹವೆಲ್ಲಾ ಕುಗ್ಗಿಹೋಗಿ ಅವರ ವಿದ್ಯಾಭ್ಯಾಸ ಅಷ್ಟಕ್ಕೇ ಮುಕ್ತಾಯವಾಗಿಬಿಡುತ್ತದೆ. ಹೀಗೆ ಅನೇಕರಿಗೆ ಇದರಿಂದ ಒಂದು ತೊಂದರೆಯಿರುತ್ತದೆ. ಈ ದಿವಸ ಈ ವಿದ್ಯಾಭ್ಯಾಸನನ್ನು ನಾವು ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ಕೊಡಲೇಬೇಕೆಂಬುದು ನಮ್ಮೆಲ್ಲರ ಮುಖ್ಯೋದ್ದೇಶವಾಗಿರುವಾಗ, ಈ ಮಿಡಲ್ ಸ್ಕೂಲುಗಳನ್ನೆಲ್ಲಾ ವಜಾ ಮಾಡಿಬಿಟ್ಟು, ಈ ಮಾಧ್ಯಮಿಕ ವಿದ್ಯಾಭ್ಯಾಸದ ಅವಧಿಯ 4 ವರ್ಷಗಳ ಪೈಕಿ 2 ವರ್ಷಗಳನ್ನು ಪ್ರಾಥಮಿಕ ವಿದ್ಯಾಭ್ಯಾಸಕ್ಕೂ ಮತ್ತು ಬಾಕಿ 2 ವರ್ಷಗಳನ್ನು ಹೈಸ್ಕೂಲು ವಿದ್ಯಾಭ್ಯಾಸಕ್ಕೂ ಸೇರಿಸಬಹುದು ಎಂಬುದಾಗಿ ಯೋಚಿಸಿ, they have raised the last two years of the middle school education to the level of the secondary education and brought down the first two years to the level of the primary education. ಆದರೆ ಇದನ್ನು ಸಾರ್ವಜನಿಕರ ಅಭಿಪ್ರಾಯ ಪಡೆದು ಮಾಡಬೇಕಾಗಿದೆ, ಹೀಗೆ ಮಾಡುವುದರಿಂದ ಏನೂ ಅಷ್ಟು ಪ್ರತಿಬಂಧಕವಾಗುವುದಿಲ್ಲ. ಈ ಅಂಶವನ್ನು ವಿದ್ಯಾವಂತರಾದ ತಾವುಗಳೆಲ್ಲರೂ ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಮೊನ್ನೆ ಒಬ್ಬ ಮಹನೀಯರು ಹೇಳಿದರು.—ಈ ಮಾಧ್ಯಮಿಕ ವಿದ್ಯಾಭ್ಯಾಸದ ಅವಧಿಯಲ್ಲಿ 2 ವರ್ಷಗಳನ್ನು ಪ್ರೌಢವಿದ್ಯಾಭ್ಯಾಸಕ್ಕೆ ಸೇರಿಸಿರುವುದರಿಂದ, ಇಲ್ಲಿಯತನಕ ಹುಡುಗರಿಗೆ ಉಚಿತವಾಗಿ ಲಭ್ಯವಾಗುತ್ತಿದ್ದಂಥ ಸ್ಕೂಲು ಫೀಜಿನ ಒಂದು ರಿಯಾಯಿತಿಯು ತಪ್ಪಿಹೋಗಿ ಇನ್ನು ಮುಂದಕ್ಕೆ ಅವರೆಲ್ಲರೂ ಸ್ಕೂಲು ಫೀಜನ್ನು ಕೊಡಬೇಕಾಗಿ ಬರುತ್ತದೆ ಎಂದು ತಿಳಿಸಿದರು. ಆದರೆ ಕಾನ್ಸ್ಟಿಟ್ಯೂಷನ್ ಪ್ರಕಾರ 2 ವರ್ಷ ಆ ಸೆಕೆಂಡರಿ ವಿದ್ಯಾಭ್ಯಾಸದ ಮಟ್ಟದಲ್ಲಿ ಈ ಹುಡುಗರಿಗೆ ಆ ವಿನಾಯಿತಿ ದೊರೆಯಬೇಕೆಂದು ಹೇಳುವುದಷ್ಟೇ ಅಲ್ಲ : ನನ್ನ ಅಭಿಪ್ರಾಯದ ಪ್ರಕಾರ ಹೇಳುವುದಾದರೆ, ಆ ಸೆಕಂಡರಿ ವಿದ್ಯಾಭ್ಯಾಸದ ಅವಧಿ ಸಂಪೂರ್ಣವಾಗಿ ಪೂರೈಸುವ ತನಕ ಇದನ್ನು ಸಂಪೂರ್ಣವಾಗಿ it must be free education ಆಗಿ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿಯತನಕ ಈ ವಿದ್ಯಾರ್ಥಿಗಳಿಗೆ ಈ ಮಿಡಲ್ ಸ್ಕೂಲ್ ಸ್ಟೇಜಿನಲ್ಲಿ ಏನೊಂದು ಅನುಕೂಲ ಅಥವಾ ಅವರಿಗೆ ಯಾವ ಯಾವ ರಿಯಾಯಿತಿಗಳು ಇರುತ್ತಿದ್ದವೋ ಆ ರಿಯಾಯಿತಿಗಳೇ ಇನ್ನು

ಮುಂದಕ್ಕೂ ಕರೆಸ್‌ಪಾಂಡಿಂಗ್ ಅವಧಿಯತನಕ ಅವರಿಗೆ ಕಡ್ಡಾಯವಾಗಿ ದೊರೆಯಲೇಬೇಕೆಂದು ನಾನು ಹೇಳತಕ್ಕವನಾಗಿದ್ದೇನೆ. ಅಂತೂ ನನ್ನ ಅಭಿಪ್ರಾಯದಲ್ಲಿ ಈಗ ಮಿಡಲ್‌ಸ್ಕೂಲು ಎಗ್ಸಾಮಿನೇಷನನ್ನು ತೆಗೆದುಹಾಕಿರುವುದು a step in the right direction ಎಂದು ಭಾವಿಸಿದ್ದೇನೆ. ಹೀಗೆ ಮಾಡುವುದರಿಂದ ಈ ಪ್ರಾಥಮಿಕ ವಿದ್ಯಾಭ್ಯಾಸದ ಲೆವಲ್ಲನ್ನು ಪ್ರೌಢ ವಿದ್ಯಾಭ್ಯಾಸದ ಲೆವಲ್ಲಿಗೆ ತಂದು ದೇಶದಲ್ಲಿ ವಿದ್ಯಾ ಪ್ರಸಾರಕ್ಕೆ ಅನುಕೂಲಮಾಡಲು ಸಹಾಯಕವಾಗಿರುತ್ತದೆಂದು ನಾನು ಭಾವಿಸುತ್ತೇನೆ.

Basic education ವಿಚಾರವಾಗಿ ಆ ಸ್ಪೀಚಿನಲ್ಲೇ ಈ ವೃತ್ತಿ ಶಿಕ್ಷಣ ಕೊಡುವ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಾನು ಮೊದಲೇ ಹೇಳಿದ ಹಾಗೆ, ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಮೊದಲನೆಯ ಘಟ್ಟದಿಂದ ಹಿಡಿದು ಸೆಕೆಂಡರಿ ಎಜ್ಯುಕೇಷನ್ ಘಟ್ಟದವರೆಗೂ ಈ ಸಮಿತಿಯವರು ವೃತ್ತಿ ಶಿಕ್ಷಣ ಕೊಡಬೇಕೆಂದು ಒತ್ತಿ ಒತ್ತಿ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ವೃತ್ತಿ ಶಿಕ್ಷಣವನ್ನು ಹೀಗೆ ಮೊದಲಿಂದ ಕೊನೆಯವರೆಗೂ ಕೊಡಬೇಕೆಂದು ಹೇಳಿ ಇದನ್ನು ಆ ಮೂಲ ಶಿಕ್ಷಣಕ್ಕೆ ಸೇರಿಸಿರತಕ್ಕದ್ದು ಅಷ್ಟು ಸರಿಯಾಗಿರುವಂತೆ ಕಾಣುವುದಿಲ್ಲ ಮತ್ತು ಅಂಥ ಆವಶ್ಯಕತೆ ಕೂಡ ಇಲ್ಲವೆಂದು ಕಾಣುತ್ತದೆ. ಆದರೆ ಇದು ನನ ಸ್ವಂತ ಅಭಿಪ್ರಾಯ. ಏತಕ್ಕೆಂದರೆ ಈ ಬೇಸಿಕ್ ಎಜ್ಯುಕೇಷನ್ನಿಗೆ ಸೇರುವಂಥ ಹುಡುಗರು ಬಹಳ ಚಿಕ್ಕವಯಸ್ಸಿನವರಾಗಿರುವ ಕಾರಣದಿಂದ ಅವರಿಗೆ ಇಂಥ ಕಷ್ಟಕರವಾದ ಮತ್ತು ತೊಂದರೆಗಳನ್ನೊಳಗೊಂಡಂಥ ಈ ವೃತ್ತಿ ಶಿಕ್ಷಣವನ್ನು ಕೊಡಬೇಕೇ, ಬೇಡವೇ ಎನ್ನುವುದೊಂದು ಮುಖ್ಯ ಪ್ರಶ್ನೆ. ಆದರೆ ಕಾಂಗ್ರೆಸ್ ಸಂಸ್ಥೆಯವರು ಇದನ್ನೊಂದು ಐಡಿಯಾಲಜಿಯಾಗಿಟ್ಟುಕೊಂಡು ಮತ್ತು ಇದನ್ನೊಂದು ನ್ಯಾಷನಲ್ ಪ್ರಿನ್ಸಿಪಲ್ ಎಂಬುದಾಗಿ ಒಪ್ಪಿಕೊಂಡು ಬಂದಿದ್ದಾರೆ. ಈ ಬಗ್ಗೆ ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವುದಾದರೆ, ಇಂಥ ಬೇಸಿಕ್ ಸ್ಕೂಲುಗಳನ್ನು ನಾವೀಗಾಗಲೇ ಒಂದಲ್ಲ ನೂರಾರು ಶಾಲೆಗಳನ್ನು ಏರ್ಪಡಿಸಿದ್ದೇವೆ. ಆದರೆ ಇಲ್ಲಿಯತನಕ ಈ ಪಾಠಶಾಲೆಗಳಿಂದ ಬಂದಿರತಕ್ಕ ವರದಿಗಳನ್ನು ನೋಡಿದರೆ ಇವು ಅಷ್ಟು ಸಮರ್ಪಕವಾದ ರೀತಿಯಲ್ಲಿ ನಡೆದುಕೊಂಡು ಬರುತ್ತಿವೆಯೆಂದು ಕಂಡುಬರುತ್ತಿಲ್ಲ. ನಾನು ಇದು ಅಷ್ಟು ಅಗತ್ಯವಾಗಿಲ್ಲವೆಂದು ಹೇಳುವುದಕ್ಕೆ ಇದೂ ಒಂದು ಕಾರಣ. ಆದರೆ ನಾನು ಈ ತತ್ವವನ್ನೇನೋ ಒಪ್ಪಿಕೊಳ್ಳುತ್ತೇನೆ. ಆದರೆ ಈ ಬೇಸಿಕ್ ಎಜ್ಯುಕೇಷನ್ ಎಂಬುದು, it is a training for life through life ಎಂಬುದಾಗಿ ಒಂದು ಒಳ್ಳೆಯ ಥಿಯರಿಯನ್ನು ಹೇಳಿದ್ದಾರೆ. ಆದರೆ ಇದನ್ನು ಕಾರ್ಯರೂಪಕ್ಕೆ ತರಬೇಕೆಂದಾಗ ಬಹಳ ತೊಂದರೆಗಳು ಬರುತ್ತವೆ. ಇನ್ನು ಎರಡನೆಯ ಕಾರಣವೇನೆಂದರೆ, ಇಂಥ ಚಿಕ್ಕ ವಯಸ್ಸಿನ ಬಾಲಕರಿಂದ ನೂಲುವುದು, ನೆಯ್ಯುವುದು, ಮರಗೆಲಸ, ವ್ಯವಸಾಯ ಇತ್ಯಾದಿ ಕಸಬುಗಳನ್ನು ಮಾಡಿಸುವುದೆಂದರೆ ನಿಜವಾಗಿಯೂ ಬಹಳ ಕಷ್ಟವಾಗುತ್ತದೆ. ಅವರ ಆರೋಗ್ಯಕ್ಕೆ ಧಕ್ಕೆಬರಬಹುದು. ಆ ಬಾಲಕರ ತಂದೆತಾಯಿಗಳು ಬಹುಶಃ ಇದಕ್ಕೆಲ್ಲಾ ಒಪ್ಪಲಾರರು. ಈ ಬೇಸಿಕ್ ಶಾಲೆಗಳನ್ನು ಎಲ್ಲ ಕಡೆಯೂ ಪ್ರಾರಂಭ ಮಾಡುವುದೆಂದರೆ, it is a very costly affair. 50 ರೂಪಾಯಿ ಸಂಬಳದ ಉಪಾಧ್ಯಾಯರೇ ಬೇಕೆಂದು ಹೇಳಿದ್ದಾರೆ. ಆದರೆ ನಾನು ಇಂಥದನ್ನೆಲ್ಲಾ ಒಪ್ಪಲಾರೆ. ಈ ಬೇಸಿಕ್ ಎಜ್ಯುಕೇಷನ್ ಕೊಡತಕ್ಕಂಥ ಟೀಚರ್ಸ್ ದೊರೆಯಬೇಕಾಗಿದ್ದರೆ ತಾವು ಮೊದಲು ಅವರಿಗೆ ಶಿಕ್ಷಣ ಕೊಡಲು ಒಂದು ಟ್ರೈನಿಂಗ್ ಕಾಲೇಜನ್ನು ತೆರೆಯಬೇಕಾಗುತ್ತದೆ. ಈ ವಿದ್ಯಾಭ್ಯಾಸಕ್ಕೆ ತಮಗೆ ಸುಮಾರು 20 ಸಾವಿರ ಜನ ಟೀಚರುಗಳು ಈಗ ಬೇಕಾಗಬಹುದೆಂದು ತೋರುತ್ತದೆ. ಆದುದರಿಂದ ಇದು ಒಂದ ಬಹಳ ದೊಡ್ಡ ಖರ್ಚಿನ ಬಾಬಾಯಿತು, apart from its educational value. ಆದುದರಿಂದ ಈಗಿನ ಸಂದರ್ಭದಲ್ಲಿ ಇದನ್ನು ಸಧ್ಯಕ್ಕೆ ಡೆಫರ್ ಮಾಡುವುದು ಅನುಕೂಲವೆಂದು ಹೇಳುತ್ತೇನೆ. ಇದು ನನ್ನ ಭಾವನೆ. ಆದುದರಿಂದ ಈ ಬೇಸಿಕ್ ಎಜ್ಯುಕೇಷನ್ನನ್ನು ಈ ಪ್ರಾಥಮಿಕ ಅಭ್ಯಾಸದ ಅವಧಿಯಲ್ಲಿ ತೆಗೆದುಕೊಳ್ಳಬೇಕಾಗಿಲ್ಲವೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಈ ವಯಸ್ಸಿನಲ್ಲಿ ಬಾಲಕರಿಗೆ ಮುಖ್ಯವಾಗಿ ಬೇಕಾದದ್ದೇನು ? ಓದುವುದು, ಬರೆಯುವುದು. ಇಂಥಾವುಗಳಿಗೆ ಆವಶ್ಯಕವಾದಂಥ ಒಂದ ಜನರಲ್ ಎಜ್ಯುಕೇಷನ್ ಕೊಟ್ಟು ಅವರಿಗೆ ಜ್ಞಾನಾರ್ಜನೆಯಾಗುವಂತೆ ಮಾಡಿದರೆ ಸಾಕು. ಇದರಿಂದ ನಾವು ಮಾಡಬೇಕಾದ ನಮ್ಮ ಮುಖ್ಯ ಕರ್ತವ್ಯವನ್ನು ಮಾಡಿದಂತಾಗುತ್ತದೆ.

2 P.M.

ಇನ್ನೊಂದು ವಿಷಯ. ಪ್ರೈಮರಿ ಕೋರ್ಸಿನಲ್ಲಿ ಬೇಸಿಕ್ ಎಜುಕೇಷನ್ ಕೊಡಬೇಕೆಂಬ ಹಂಬಲ ಇಂಡಿಯಾ ದೇಶದಲ್ಲಿ ಮಾತ್ರ ಇದೆಯೇ ಹೊರತು ಇಂಗ್ಲೆಂಡ್ ಅಥವಾ ಅಮೇರಿಕಾದಲ್ಲಿ ಇಲ್ಲ. ಈ ರೀತಿ ಬೇಸಿಕ್ ಎಜುಕೇಷನ್ ಚಿಕ್ಕ ಹುಡುಗರಿಗೆ ಕೊಡಬೇಕು, ವೃತ್ತಿ ಶಿಕ್ಷಣ ಕೊಡಬೇಕು ಎಂಬ ಹಂಬಲ ಇತರ ದೇಶಗಳವರಿಗೆ ಇರುವ ಹಾಗೆ ಕಾಣುವುದಿಲ್ಲ. ಇಂಡಿಯಾ ದೇಶದಲ್ಲಿ ಇದು ಕೆಲವು ಕಡೆ ಇದೆಯಾದರೂ ಅದನ್ನು ಕಾರ್ಯರೂಪಕ್ಕೆ ತಂದಿರುವ ಕಡೆ ಅಷ್ಟು ಪರಿಣಾಮಕಾರಿಯಾಗಿಲ್ಲ. ಆದ್ದರಿಂದ ಈಗ ಸದ್ಯಕ್ಕೆ ಬೇಸಿಕ್ ಎಜುಕೇಷನ್ ಒಂದನ್ನು ಬಿಟ್ಟು ಬಾಕಿ ಕೆಲಸ ಮಾಡಬಹುದು.

ಅನಂತರ ಸೆಕೆಂಡರಿ ಎಜುಕೇಷನ್, ಮದ್ರಾಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಿಲ್ಲ. ಈಗ ಸೆಕೆಂಡರಿ ಎಜುಕೇಷನ್ ಎಂದರೇನು ಎಂಬುದನ್ನು ಡಿಫೈನ್ ಮಾಡಬೇಕು. ಇದುವರೆಗೆ ಅದು 3 ವರ್ಷಗಳು ಮಾತ್ರ ಇತ್ತು. Only High School education was considered as Secondary Education. ಮಿಡ್ಲ್ ಸ್ಕೂಲು ವಿದ್ಯಾಭ್ಯಾಸವಾದಮೇಲೆ ಹೈಸ್ಕೂಲು ಅಥವಾ ಸೆಕೆಂಡರಿ ವಿದ್ಯಾಭ್ಯಾಸ, ಆಮೇಲೆ ಕಾಲೇಜು ಎಂದು ಇದುವರೆಗಿತ್ತು. ಈಗ ಆರು ವರ್ಷ ಸೆಕೆಂಡರಿ ವಿದ್ಯಾಭ್ಯಾಸ ಇರಬೇಕೆಂದು ಮಾಡಿದ್ದಾರೆ. 2 ವರ್ಷದ ಮಿಡ್ಲ್ ಸ್ಕೂಲು ವಿದ್ಯಾಭ್ಯಾಸ 2 ವರ್ಷದ ಕಾಲೇಜು ವಿದ್ಯಾಭ್ಯಾಸ ಸೇರಿಸಿ 6 ವರ್ಷ ಸೆಕೆಂಡರಿ ಎಜುಕೇಷನ್ ಎಂದು ಮಾಡಿದ್ದಾರೆ. ಈ ವಿಷಯದಲ್ಲಿ ಕೇಂದ್ರದ ಸೆಕೆಂಡರಿ ಎಜುಕೇಷನ್ ಕಮಿಟಿಯ ಸಲಹೆಯನ್ನು ನೋಡುವುದು ಅತ್ಯಾವಶ್ಯಕ. ಯಾವ ರೀತಿ ಅಲ್ಲಿಂದ ಸಲಹೆ ಬರುತ್ತದೆಯೋ ನೋಡಬೇಕು. ಅವರ ಸಲಹೆ ನಮ್ಮ ಮೇಲೆ ಒತ್ತಾಯವಾಗಿರುತ್ತದೆಯೆ, ಅವರೇ ಬೇರೆ ಡೆಫಿನಿಷನ್ ಕೊಡುತ್ತಾರೆಯೆ ಎಂಬುದನ್ನು ಗಮನಿಸಬೇಕು. ನಮ್ಮದೇ ಒಂದು ತರಹ ಅವರದೇ ಒಂದು ತರಹ ಸೆಕೆಂಡರಿ ಎಜುಕೇಷನ್ ಆದರೆ ಆಗ ಓವರ್ ಸ್ಟ್ರಕ್ಚರ್ ಆಗುತ್ತದೆ, ಆಗ ಎಲ್ಲಾ ಹೋಗುತ್ತದೆ. ಈ ಮಧ್ಯೆ, ತಾವು ಹೇಳಿರುವ ಹಾಗೆ ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಟೆಕ್ನಿಕಲ್ ಎಜುಕೇಷನ್

(ಶ್ರೀ ಜೆ. ಮಹಮ್ಮದ್ ಇಮಾಂ.)

ಬರುತ್ತದೆ. ಅದು ಸಾಧುವಾದುದಾಗಿರಬಹುದು, ಪ್ರಾಕ್ಟಿಕಲ್ ಆಗಿರಬಹುದು. ಅದು ಒಳ್ಳೆಯದೂ ಆಗಿರಬಹುದು. ಆದರೆ ಒಂದು ವಿಷಯ ಗಮನಿಸಬೇಕಾಗಿದೆ. ಸೆಕೆಂಡರಿ ಎಜುಕೇಷನ್ನಿಗೆ ಸಂಬಂಧಪಟ್ಟ ಕೇಂದ್ರ ಸಮಿತಿ ಯಾವ ರೀತಿಯಲ್ಲಿ ಶಿಫಾರ್ಸು ಮಾಡುತ್ತದೆ, ಅದಕ್ಕೆ ಏನು ಡೆಫಿನಿಷನ್ ಕೊಡುತ್ತದೆ ಎಂಬುದನ್ನು ನೋಡಿ ಮುಂದುವರಿಯಬೇಕು. It is a preparatory course to enter the higher course—the college. It is a preparatory course to enter a technical course ಎಂದು ಡೆಫಿನೇಷನ್ ಕೊಟ್ಟಿದೆ. ಈಗ ಟೆಕ್ನಿಕಲ್ ಟ್ರೈನಿಂಗ್ ಸೆಕೆಂಡರಿ ಎಜುಕೇಷನ್ ಜೊತೆಯಲ್ಲೇ ಮಾಡಬೇಕೆ ಅಥವಾ ಅದೇ ಬೇರೆ ಮಾಡಬೇಕೆ ಎಂಬ ಪ್ರಶ್ನೆಯಿದೆ. ಇಂಗ್ಲೆಂಡಿಗೆ ಹೋಗಿದ್ದಾಗ ನಾನು ಅಲ್ಲಿ ನೋಡಿದ ಹಾಗೆ ಗ್ರಾಮರ್ ಸ್ಕೂಲು ಮತ್ತು ಮಾಡರ್ನ್ ಸ್ಕೂಲು ಎಂದು ಎರಡು ತರಹ ಇದೆ. ಕಾಲೇಜಿಗೆ ಹೋಗುವವರು ಗ್ರಾಮರ್ ಸ್ಕೂಲಿಗೆ ಸೇರುತ್ತಾರೆ. ಮಾಡರ್ನ್ ಸ್ಕೂಲುಗಳು 2—3 ಮಾತ್ರ ಇವೆ; ಅಲ್ಲಿ ವೃತ್ತಿಶಿಕ್ಷಣ ಕೊಡುತ್ತಾರೆ. ಗ್ರಾಮರ್ ಸ್ಕೂಲುಗಳೇ ಜಾಸ್ತಿ. ಸೆಕೆಂಡರಿ ಎಜುಕೇಷನ್ ಆದಮೇಲೆ ಪ್ರತಿಯೊಬ್ಬರೂ ಯೂನಿವರ್ಸಿಟಿಗೆ ಹೋಗುವುದಿಲ್ಲ. ಅಲ್ಲಿ ಫರ್ದರ್ ಎಜುಕೇಷನ್ ಅಂದರೆ ಯೂನಿವರ್ಸಿಟಿ ಎಜುಕೇಷನ್ ಮಾತ್ರವಲ್ಲ, ಟೆಕ್ನಿಕಲ್ ಇನ್ಸ್ಟಿಟ್ಯೂಟ್ಸ್ ಬೇಕಾದಷ್ಟಿವೆ. ಶೇಕಡ 90 ಭಾಗ ಟೆಕ್ನಿಕಲ್ ಟ್ರೈನಿಂಗ್ ಇದೆ. ಉಳಿದ 10 ಭಾಗದವರು ಕಾಲೇಜು ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಲಾಯಕ್ಕಾದವರು ಮಾತ್ರ ಕಾಲೇಜಿಗೆ ಹೋಗುತ್ತಾರೆ. ಅಲ್ಲಿ ಸೆಕೆಂಡರಿ ವಿದ್ಯಾಭ್ಯಾಸದ ಜೊತೆಯಲ್ಲೇ ವೃತ್ತಿ ಶಿಕ್ಷಣ ಕೊಡುವುದರಿಂದ ಜನರಲ್ ಎಜುಕೇಷನ್ ಸಫರ್ ಆಗುತ್ತದೆ ಎಂಬ ಅಭಿಪ್ರಾಯವಿದೆ. ವೃತ್ತಿಶಿಕ್ಷಣವೂ ಸಫರ್ ಆಗುತ್ತದೆ, Jack of all, master of none ಎಂದ ಹಾಗೆ ಆಗುತ್ತದೆ ಎಂಬ ಭಾವನೆಯಿದೆ. ಇನ್ನು ಕೆಲವರ ಅಭಿಪ್ರಾಯ, 'ಈ ರೀತಿಯಲ್ಲಿ ವೃತ್ತಿ ಶಿಕ್ಷಣ ಕೊಡುವುದರಿಂದ ಎಜುಕೇಷನ್ ಬಯಾಸ್ ಕೊಟ್ಟ ಹಾಗಾಗುತ್ತದೆ, ತರಪೇತು ಕೊಟ್ಟ ಹಾಗಾಗುತ್ತದೆ ಈ ಜ್ಞಾನದಿಂದ ಇನ್ಸ್ಟಿಟ್ಯೂಟಿನಲ್ಲಿ ಚೆನ್ನಾಗಿ ಶಿಕ್ಷಣ ಪಡೆಯುತ್ತಾನೆ' ಎಂಬುದು. ಆದರೆ ನನ್ನ ಅಭಿಪ್ರಾಯ, ಈಗಿನ ಪರಿಸ್ಥಿತಿಯಲ್ಲಿ, ಈಗಿನ ಹಣಕಾಸಿನ ಕೊರತೆಯಿರುವ ಸಂದರ್ಭದಲ್ಲಿ ಈ ಸ್ಕೂಲುಗಳಲ್ಲಿ ವೃತ್ತಿ ಶಿಕ್ಷಣ ಕೊಡುವುದಕ್ಕೆ ಬದಲಾಗಿ ಬೇಕಾದರೆ ಹೊರಗಡೆ ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟ್‌ಗಳನ್ನು ಇನ್ನೂ ಹೆಚ್ಚಿಸೋಣ ಎಂಬುದು. ಈಗಿರುವ ಆರ್ಥಿಕ ದುಸ್ಥಿತಿಯಲ್ಲಿ ಸೆಕೆಂಡರಿ ವಿದ್ಯಾಭ್ಯಾಸದ ಜೊತೆಯಲ್ಲಿ ವೃತ್ತಿಶಿಕ್ಷಣ ಕೊಡಬೇಕೆಂಬುದು, it is impossible and impracticable. ಪ್ರತಿಯೊಂದು ವರ್ಷವೂ 50 ಸಾವಿರ ರೂಪಾಯಿಗಳ ರಿಕರಿಂಗ್ ಎಕ್ಸ್‌ಪೆಂಡಿಚರ್ ಜೊತೆಗೆ ನಾನ್ ರಿಕರಿಂಗ್ ಎಕ್ಸ್‌ಪೆಂಡಿಚರ್ ಬಹಳವಾಗಿದೆ. ಸಂಸ್ಥಾನದಲ್ಲಿರುವ ಎಲ್ಲಾ ಸ್ಕೂಲುಗಳಲ್ಲೂ ಇದನ್ನು ಜಾರಿಗೆ ತರುವುದು ಕಷ್ಟ. ಇದನ್ನು ಸದ್ಯಕ್ಕೆ ಬಿಟ್ಟು ಈಗ ಬರೀ ಸೆಕೆಂಡರಿ ಜನರಲ್ ಎಜುಕೇಷನ್ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಹೊರಗಡೆ ಹಣದ ಅನುಕೂಲ ದೊರೆತರೆ ಹೆಚ್ಚು ಇನ್ಸ್ಟಿಟ್ಯೂಟುಗಳನ್ನು ಮಾಡಿ ಅಲ್ಲಿಗೆ ಬೇಕಾದರೆ ಕಳುಹಿಸಬಹುದು. ಲಂಡನ್ನಿನಲ್ಲಿರುವಾಗ Institute of Barbers, Hair-dressing and Shaving ಎಂದು ಬೇರೆ ಇರುವುದನ್ನು ನೋಡಿದೆ. ದೇಶದ ಸ್ಥಿತಿಗತಿ ನೋಡಿ, ಯಾವ ವಿಧವಾದ ಮಾರ್ಗವನ್ನನು ಸರಿಸಿದರೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ನೋಡಿ ಬೇರೆ ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟುಗಳನ್ನು ಮಾಡಿದರೆ ಎಲ್ಲಾ ಸರಿಹೋಗಬಹುದು. That seems to be more practicable from the beginning of the compulsory education till the end of the secondary education. ವೃತ್ತಿಶಿಕ್ಷಣ ಕೊಡುವುದಾದರೆ ಎಜುಕೇಷನಲ್ ಬಯಾಸ್ ಕೊಡುವುದಕ್ಕೆ ಮಾತ್ರ ಮಾಡಿದಂತಾಗುತ್ತದೆ, ಖರ್ಚು ಬಹಳ ಜಾಸ್ತಿ ಮತ್ತು ಅದರಿಂದ ಜನರಲ್ ಎಜುಕೇಷನ್ನಿಗೆ ತೊಂದರೆ.

ಎರಡನೆಯದು, ಮೊದಲು ಮಿಡ್ಲ್ ಸ್ಕೂಲು 4 ವರ್ಷ, ಹೈಸ್ಕೂಲು 3 ವರ್ಷ, ಇಂಟರ್‌ಮೀಡಿಯಟ್ 2 ವರ್ಷ ಇತ್ತು ? ಒಟ್ಟು ಇದೆಲ್ಲಾ ಸೇರಿ 9 ವರ್ಷವಾಗುತ್ತಿತ್ತು. ಈಗ ಸೆಕೆಂಡರಿ ಎಜುಕೇಷನ್ ಆರು ವರ್ಷ ಮಾಡಿದ್ದಾರೆ. ಕಾನ್ಸ್ಟಿಟ್ಯೂಷನ್ ಪ್ರಕಾರ ಸೆಕೆಂಡರಿ ವಿದ್ಯಾಭ್ಯಾಸವಾದಮೇಲೆ ಕಾಲೇಜಿಗೆ ಹೋಗುತ್ತಾರೆ. ಈಗಿರುವ ಹಾಗೆ 7 ವರ್ಷ ಶಿಕ್ಷಣ ಪಡೆದು ಕಾಲೇಜಿಗೆ ಬರುವ ಹುಡುಗರೇ very poor material ಅವರಿಗೆ ಸರಿಯಾದ ಜ್ಞಾನ ಇರುವುದಿಲ್ಲ. ಕಾಲೇಜಿಗೆ ಬಂದಮೇಲೆ, they cut a very sorry figure, ಅದಕ್ಕೇ ಫೈಲ್ ಆಗುತ್ತಾರೆ ಎಂಬ ಥಿಯರಿ ಇದೆ, ನಿಜ. ಆಮೇಲೆ ಇಂಗ್ಲೀಷು ವಿದ್ಯಾಭ್ಯಾಸ ಮೊದಲು 9 ವರ್ಷಗಳಿದ್ದುದು ಈಗ 8 ವರ್ಷಗಳಾಗಿದೆ. ಒಂದು ವರ್ಷ ಹೀಗೆ ಕಡಮೆಯಾದರೆ ಇನ್ನೂ ಪೂರ್ ಮೆಟೀರಿಯಲ್ ಕಾಲೇಜಿಗೆ ಬರುತ್ತದೆ. ಆದ್ದರಿಂದ ಹೀಗೆ 7 ರಿಂದ 6 ವರ್ಷ ಮಾಡಿರುವುದನ್ನು ಬಹುಶಃ ಪುನರಾಲೋಚನೆ ಮಾಡಬೇಕಾಗಿದೆ. ಅಲ್ಲದೆ ಸೆಕೆಂಡರಿ ಎಜುಕೇಷನ್ ಸಮಿತಿಯವರ ವರದಿಯು ಕೇಂದ್ರದಿಂದ ಬಂದಮೇಲೆ ಅದನ್ನು ನೋಡಿ ಮಾರ್ಪಾಡು ಮಾಡಬೇಕಾಗುತ್ತದೆ.

ಇನ್ನು ಯೂನಿವರ್ಸಿಟಿ ವಿದ್ಯಾಭ್ಯಾಸದ ವಿಚಾರದಲ್ಲಿ ಕೆಲವು ಮಾತು ಹೇಳಬೇಕಾಗಿದೆ. ನಿನ್ನೆ ಕೆಲವು ಮಾನ್ಯರು, 'ವಿಶ್ವವಿದ್ಯಾನಿಲಯದಲ್ಲಿ ಮೊರೇಲ್ ಬಹಳ ಕಡಮೆಯಾಗಿದೆ, ಹುಡುಗರಿಗೆ ಎಂಥೂಸಿಯಾಸಂ ಇಲ್ಲ, ಸಮರ್ಪಕವಾಗಿ ವಿದ್ಯಾಭ್ಯಾಸ ನಡೆಯುತ್ತಿಲ್ಲ' ಎಂದು ಹೇಳಿದರು. ಇದನ್ನು ನಾನೂ ಒಪ್ಪುತ್ತೇನೆ. ಯೂನಿವರ್ಸಿಟಿಯಲ್ಲಿ ಒಂದೇ ಒಂದು ವಿಷಯದಲ್ಲಿ ಮಾತ್ರ ಬಹಳ ಪಾಲಿಟಿಕ್ಸ್ ಇದೆ. ಅದಾವುದೆಂದರೆ ಸರ್ವಿಸಸ್, ಅಪಾಯಿಂಟ್‌ಮೆಂಟ್ಸ್ ಮತ್ತು ಪ್ರಮೋಷನ್ಸ್ ವಿಷಯದಲ್ಲಿ. ಈ ವಿಷಯದಲ್ಲಿ ಕೆಲವು ಅಭಿಪ್ರಾಯಗಳು ಬಂದಿವೆ. ಮೆರಿಟ್ ಪ್ರಕಾರ ಕೊಟ್ಟರೆ ಬಹಳ ಒಳ್ಳೆಯದು ಮತ್ತು ಗಣ್ಯರಾದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಬರುತ್ತಾರೆ, ಕಮ್ಯೂನಲ್ ರೆಪ್ರೆಸೆಂಟೇಷನ್ ಪ್ರಕಾರ ಬಂದರೆ ಸೀನಿಯಾರಿಟಿ ಓವರ್ ಲುಕ್ ಮಾಡಿ ಬಹಳ ಜೂನಿಯರ್ಸ್ ಬರುತ್ತಾರೆ, ಹೀಗೆ ಜೂನಿಯರ್ಸ್ ಮೇಲಕ್ಕೆ ಬರುವುದರಿಂದ ಡಿಸ್‌ಕಂಟೆಂಟ್‌ಮೆಂಟ್ ಮತ್ತು ಇನ್ಎಫಿಷಿಯನ್ಸಿ ಹೆಚ್ಚುತ್ತದೆ ಎಂಬ ಅಭಿಪ್ರಾಯವಿದೆ. ಒಂದುಕಡೆ ಕಮ್ಯೂನಲ್ ಆಟಿಟ್ಯೂಡ್ ಸ್ಯಾಟಿಸ್‌ಫೈ ಮಾಡುವುವಕ್ಕೆ ಹೋದರೆ ಇನ್ನೊಂದು ಕಡೆ ಮತ್ತೊಂದು ತರಹ ಕಷ್ಟ ಬರುತ್ತದೆ. ಈ ವಿಷಯವನ್ನು ಗಮನಿಸಬೇಕು. ಇದನ್ನು ಯಾವ ರೀತಿ ಮಾಡಬೇಕೆಂದು ಯೋಚನೆ ಮಾಡಬೇಕು. ಯಾವಾಗ ಕಷ್ಟ ಬರುತ್ತದೆ ಅಂದರೆ ಲೆಕ್ಚರರುಗಳನ್ನು ಅಸಿಸ್ಟೆಂಟ್ ಪ್ರೊಫೆಸರುಗಳಾಗಿಯೂ

ಅಸಿಸ್ಟೆಂಟ್ ಪ್ರೊಫೆಸರುಗಳನ್ನು ಪ್ರೊಫೆಸರುಗಳಾಗಿಯೂ ಪ್ರಮೋಷನ್ ಕೊಡುವಾಗ, ಇದಕ್ಕಾಗಿಯೇ ಒಂದು ರೀ-ಆರ್ಗನೈಜೇಷನ್ ಪ್ರಪೋಸಲ್ ಇದೆ. ಒಬ್ಬ ಲೆಕ್ಚರರ್ ಆಗಿ ಬಂದಮೇಲೆ 350 ರಿಂದ 400 ರೂಪಾಯಿಗಳ ತಲಬು ಬರುವವರೆಗೂ ಏನೂ ತೊಂದರೆ ಇರುವುದಿಲ್ಲ. It is only when he reaches Rs. 350 or 400, I do not remember which, then there will be selection. 350 ಅಥವಾ 400 ರೂಪಾಯಿಗಳ ಸಂಬಳ ಬರುವವರೆಗೆ ಸಮಾಧಾನವಿರುತ್ತದೆ. ಅಲ್ಲಿಂದಾಚೆಗೆ ಬಡ್ತಿ ಸಿಕ್ಕದೆ, a lot of discontentment and inferiority complex ಉಂಟಾಗುತ್ತದೆ. ರೀ-ಆರ್ಗನೈಜೇಷನ್ ಪ್ರಪೋಸಲ್ಸ್ ಬಹಳ ದಿವಸಗಳಿಂದ ಸರ್ಕಾರದಮುಂದಿವೆ ಅದನ್ನು ಸೆನೇಟ್ ಕೂಡ ಒಪ್ಪಿದೆ. ಅದರಿಂದ ಸರ್ಕಾರಕ್ಕೆ ವರ್ಷಕ್ಕೆ $2\frac{1}{2}$ ಲಕ್ಷ ರೂಪಾಯಿಗಳು ಖರ್ಚಾಗಬಹುದು. ಹಾಗೆ ಅಷ್ಟು ಖರ್ಚಾದರೆ ಅತೃಪ್ತಿ, ಓವರ್ ಲುಕಿಂಗ್ ಆಫ್ ಸೀನಿಯಾರಿಟಿ ಮಾಯವಾಗಿ ಅಲ್ಲಿರುವ ಅಟ್‌ಮೊಸ್ಪಿಯರ್ ಚೆನ್ನಾಗಿರುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಬೇಕಾಗಿದೆ. ಇದನ್ನು ಜಾಗ್ರತೆ ಪರಿಶೀಲನೆ ಮಾಡಬೇಕು.

ಯೂನಿವರ್ಸಿಟಿ ವಿದ್ಯಾಭ್ಯಾಸ ಕ್ರಮದ ವಿಚಾರವಾಗಿ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ. ಇದುವರೆಗೂ ಎರಡು ವರ್ಷದ ಇಂಟರ್‌ಮೀಡಿಯಟ್ course ಯೂನಿವರ್ಸಿಟಿಗೇ ಸೇರಿತ್ತು. ಈ ವಿದ್ಯಾಸುಧಾರಣಾ ಸಮಿತಿಯ ಶಿಫಾರಸಿನ ಪ್ರಕಾರ ಇದನ್ನು secondary educationಗೆ ಸೇರಿಸಿದೆ. ಇದನ್ನು ನಾನು ಎಷ್ಟು ಮಾತ್ರವೂ ಒಪ್ಪಲಾರೆ We can agree to bring to a higher level a certain lower category of education. But as regards the Intermediate, I cannot agree to bring it down. ಯೂನಿವರ್ಸಿಟಿಯ ವಾತಾವರಣ ಮತ್ತು ಅದರ ಘನತೆಯೇ ಬೇರೆ ರೀತಿ, ಅಲ್ಲಿನ influence ಬೇರೆ ರೀತಿ. ನನಗೆ ತಿಳಿದ ಹಾಗೆ ಪ್ರಾರಂಭದಲ್ಲಿ Collegiate High School ಎಂದಿತ್ತು, ಆಗ University Entrance Examination ಎಂದಿತ್ತು. ಆಗ ಹೈಸ್ಕೂಲು ಕೆಲಸ ಸಮರ್ಪಕವಾಗಿ ನಡೆಯುತ್ತಿರಲಿಲ್ಲ. ಆದುದರಿಂದ ಅದನ್ನು ತೆಗೆದು ಹಾಕಿ ಎರಡು ವರ್ಷ ಇಂಟರಮೀಡಿಯಟ್, ಎರಡ ವರ್ಷ ಬಿ.ಎ. ಎಂದು ನಿರ್ದಿಷ್ಟವಾಗಿ ಮಾಡಿ, ಯೂನಿವರ್ಸಿಟಿ ಆಡಳಿತಕ್ಕೆ ಅದನ್ನು ವಹಿಸಿದ್ದಾಯಿತು. ಅಂದಿನಿಂದಲೂ ಕೆಲಸ ಕಾರ್ಯವು ತೃಪ್ತಿಕರವಾಗಿ ನಡೆದುಕೊಂಡು ಬರುತ್ತಿದೆ. ಈಗ ಕಾಲೇಜ್ education ಎಂದು ಪರಿಗಣಿಸಲ್ಪಟ್ಟಿದ್ದನ್ನು Secondary Education ಎಂದು ಕರೆಯುವುದು ತೃಪ್ತಿಕರವಾದುದಲ್ಲ, ಸಮಂಜಸವಾದುದಲ್ಲ ಇಂಡಿಯಾ ಸರ್ಕಾರದವರಾದರೂ ಇದನ್ನು ಏತಕ್ಕಾಗಿ ಈ ರೀತಿ ಪರಿಗಣಿಸಿರುತ್ತಾರೆಯೋ ಗೊತ್ತಿಲ್ಲ. It is an open question. But personally I feel, ಇಂಟರ್‌ಮೀಡಿಯಟ್ ಕೋರ್ಸ್‌ನ್ನು ಹೈಸ್ಕೂಲುಮಟ್ಟಕ್ಕೆ ಎಂದರೆ Secondary Education ಆಡಳಿತಕ್ಕೆ ಒಳಪಡಿಸುವುದೆಂದರೆ, that will have an adverse effect on our students and they will be dejected.

ಎರಡನೆಯದಾಗಿ academic control ವಿಚಾರ ಬಹಳ ಕಷ್ಟವಾಗುತ್ತದೆ; you have what is called the administrative control and academic control. Administrative control ಎಂಬುದು ವಿದ್ಯಾ ಇಲಾಖೆಯ ಡೈರೆಕ್ಟರವರ ಹಿಡಿತಕ್ಕೂ academic control ಎಂಬುದು ಯೂನಿವರ್ಸಿಟಿಯ ಹಿಡಿತಕ್ಕೂ ಸಿಕ್ಕಿ ಅದರಿಂದ ಬಹಳ ಕಷ್ಟ ಪ್ರಾಪ್ತವಾಗುತ್ತದೆ. The Lecturers, Assistant Professors and the Professors are part of the University. For the purpose of promotion and pay, they take a place and grade along with the staff of the University. ಈಗಾಗಲೇ ಕೆಲವೆಡೆಗಳಲ್ಲಿ First Grade Colleges ಸ್ಥಾಪನೆಯಾಗಿವೆ. ಅಲ್ಲಿ ಕೆಲಸದಲ್ಲಿರುವ ಅಸಿಸ್ಟೆಂಟ್ ಪ್ರೊಫೆಸರುಗಳು by merit and seniority ಯಿಂದ ಬಂದಿದ್ದಾರೆ. ಇವುಗಳ ಬಗ್ಗೆ ಯಾವ ರೀತಿಯ ತೊಂದರೆಯೂ ಯಾರಿಗೂ ಆಗದ ಹಾಗೆ ವ್ಯವಸ್ಥೆಮಾಡಬೇಕಾದುದು ಅತ್ಯಗತ್ಯ.

ಮುಖ್ಯವಾಗಿ ನಾನು ವಿದ್ಯಾಸುಧಾರಣೆಗೆ ಅಡ್ಡಿಬರುವವನಲ್ಲ. ಸಂಸ್ಥಾನದಲ್ಲಿ ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ಈಗ ಸಂಸ್ಥಾನದಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡಾ 20ರಷ್ಟು. ಉಳಿದ ಶೇಕಡಾ 80ರಷ್ಟು ಮಂದಿ ಅನಕ್ಷರಸ್ಥರು. ಆದಕಾರಣ ನಮ್ಮ ದೇಶದಲ್ಲಿ ಜನಗಣನೆಯಲ್ಲಿ ಈ ಅನಕ್ಷರತೆಯು ಬಹುಮಟ್ಟಿಗೆ ಕಡಮೆಯಾಗುವಂತೆ ಶ್ರಮಿಸಬೇಕಾದುದು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿರಬೇಕು. ಎರಡನೆಯದಾಗಿ ಈಗಿರತಕ್ಕ ಸ್ಕೂಲ್‌ಗಳ ಸ್ಥಿಗತಿಗತಿಗಳನ್ನು ಉತ್ತಮಪಡಿಸಬೇಕು. ಮೂರನೆಯದಾಗಿ ಸಣ್ಣವಯಸ್ಸಿನ ಮಕ್ಕಳಿಗೆ ಮನಸ್ಸಿಗೆ ನಾಟುವ ಹಾಗೆ ಪಾಠ ಹೇಳಿಕೊಡುವ ಶಿಕ್ಷಕರು ಇರಬೇಕು. ಈ ಶಿಕ್ಷಕರಿಗೆ ಸಹ ಅವರ ವೃತ್ತಿಯಲ್ಲಿ ಸಾಕಷ್ಟು ತರಬೇತು ಇರಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಈಗಿರತಕ್ಕ 5,000 single teachers schoolಗಳಿಗೆಲ್ಲಾ ಮತ್ತೆ ಒಬ್ಬೊಬ್ಬರು trained teachers ಇರುವಂತೆ ಏರ್ಪಡಿಸಬೇಕು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಆದರೆ ಇದಕ್ಕೆಲ್ಲಾ ದುಡ್ಡು ಬೇಕಲ್ಲವೇ?

ಶ್ರೀ ಜೆ. ಮಹಮ್ಮದ್ ಇಮಾಂ.—ಆ ವಿಚಾರವನ್ನು ತಿಳಿಸುತ್ತೇನೆ. ವಿದ್ಯಾಭಿವೃದ್ಧಿಗೆ ಮುಖ್ಯ ಸಾಧಕವಾದ equipment ಇರಬೇಕು. ಪಾಠಶಾಲೆಗೆ ಸರಿಯಾದ ಕಟ್ಟಡಗಳಿರಬೇಕು. Trained teachers ಇರಬೇಕು. ಮೊಟ್ಟಮೊದಲು ಇವುಗಳನ್ನೆಲ್ಲಾ ಅಳವಡಿಸಿಕೊಳ್ಳಬೇಕು. If that is done, I think we will have done our duty and ample justice for the confidence placed in us. ಇಷ್ಟೆಲ್ಲಾ ಅನುಕೂಲ ಕಲ್ಪಿಸುವುದಕ್ಕೆ ದುಡ್ಡು ಎಲ್ಲಿಂದ ಒದಗಿಸಬೇಕೆಂಬುದು ಒಂದು ಸಮಸ್ಯೆಯಾಗಿ ಪರಿಣಮಿಸಿದೆ. ಈ ವಿಚಾರವಾಗಿ ಈ ಸಭೆಯ ಮಾನ್ಯಸದಸ್ಯರಲ್ಲಿ ಒಬ್ಬರಾದ Sri Thomas Sydney said yesterday, that prohibition must be scrapped. I am one with him in regard to that.

Sri A. G. RAMACHANDRA RAO.—Prohibition is also one of the items in the Directive Principles.

Sri J. MOHAMED IMAM.—Yes. This drink evil must be eradicated, no doubt. Take whatever money you get and spend it on edu-

(SRI J. MOHAMED IMAM.)

cation. Many people drink out of ignorance. ಇದಕ್ಕಾಗಿಯೇ ಅವರೆಲ್ಲರೂ ವಿದ್ಯಾವಂತರಾಗಬೇಕು. ಆಗ ಅವರ ನೈತಿಕ ಮಟ್ಟ ಮತ್ತು ಸಾಮಾಜಿಕ ಮಟ್ಟ ತಾನೇ ತಾನಾಗಿ ಉತ್ತಮಗೊಳ್ಳುತ್ತದೆ. ಅನಂತರ ಕುಡಿತದ ಚಟ ತಾನೇ ತಾನಾಗಿ ಮಾಯವಾಗುತ್ತದೆ.

ಶ್ರೀ ಟಿ. ಮರಿಯಪ್ಪ (ಮೈಸೂರು ಸಿಟಿ-ಉತ್ತರ).—ಆದರೆ ಇದು tainted money ಆಯಿತಲ್ಲಾ ?

Sri J. MOHAMED IMAM.—It is tainted money, no doubt. You take the bulk of the money you get from the five districts and spend it on education, you may call it tainted money but if you spend it on education it will be no longer tainted money. The sin is washed away.

The same amount is spent on social security, old age pensions, universal free and compulsory education and welfare of children. We need not feel shy of taking this money by prohibitive taxation and spending it on the needs of the people. On the other hand, if we indulge in ideological schemes and sentiment, we will not get any money and there will be no progress also. This is a matter to be considered. Otherwise, I do not think that we will be able to implement these reforms. The Centre does not come forward and if we do not take advantage of these sources of revenue, people are not agreeable for fresh taxation, with the present financial position—you know the budgetary position—I am afraid we will not be in a position to implement any of our schemes. As I have already said, all these recommendations will have to be kept by till our financial position improves.

With these remarks, Sir, I thank you very much for having given this opportunity to me.

ಶ್ರೀ ವಿ. ವೆಂಕಟಪ್ಪ (ಚೆನ್ನಪಟ್ಟಣ).—ಮಾನ್ಯ ಅಧ್ಯಕ್ಷರೇ, ಈ ವಿದ್ಯಾಭ್ಯಾಸದ ಸುಧಾರಣೆಯ ವರದಿ ವಿಷಯದಲ್ಲಿ ಹೇಳಬೇಕೆಂದರೆ ಬಹಳ ಕಷ್ಟಪಟ್ಟು ಈ ವರದಿಯನ್ನು ತಯಾರುಮಾಡಿದ್ದಾರೆ. ಇದರಲ್ಲಿ ಒಳ್ಳೆಯ ಪರಿಣತರೂ, ಅನುಭವಸ್ಥರೂ ಆದವರು ಸಮಿತಿಯಲ್ಲಿದ್ದರು. ಅವರ ಸಲಹೆಗಳನ್ನು ಅಷ್ಟು ಸುಲಭವಾಗಿ ಸರಿಯಾಗಿಲ್ಲ ಎಂದು ಹೇಳತಕ್ಕಂಥ ಶಕ್ತಿ ನನಗಂತೂ ಇಲ್ಲ. ಆದರೆ ಅವರು ಹೇಳಿರತಕ್ಕಂಥ ಸಲಹೆಗಳನ್ನು ಹೇಗೆ ಸರ್ಕಾರದವರು ಜಾರಿಗೆ ತರುತ್ತಾರೆ, ಯಾವ ಯಾವ ಹಂತದಲ್ಲಿ ಅದನ್ನು ತರುವುದಕ್ಕೆ ಸಾಧ್ಯ, ಹಣವನ್ನು ಹೇಗೆ ಒದಗಿಸುತ್ತಾರೆ ಎಂಬುದನ್ನು ವಿದ್ಯಾಮಂತ್ರಿಗಳು ಅವರ ಭಾಷಣದಲ್ಲಿ ಹೇಳುತ್ತಾರೆ. ಬಹುಮಟ್ಟಿಗೆ ಈ ರಿಪೋರ್ಟಿನ ವಿಷಯದಲ್ಲಿ ಒಂದು ಒಳ್ಳೆಯ ಅಭಿಪ್ರಾಯ ಬರುವಂತಹ ರೀತಿಯನ್ನು ಮಾತನಾಡುತ್ತಾರೆ ಎಂದು ಹೇಳಿ ನಾನು ಅಂದುಕೊಂಡಿದ್ದೆ. ಆ ವಿಷಯದಲ್ಲಿ ನಾನು ಸ್ವಲ್ಪಮಟ್ಟಿಗೆ ನಿರಾಶನಾಗಿದ್ದೇನೆ. ನಾನು ಈ ಸಮಿತಿಯ ವರದಿಯನ್ನು ಓದಿ 'ಹೀಗೇನೋ ಸರಿ' ಹಾಗೆಂದು ಹೇಳಿ, ಆಗಲೇ ನಾನು ಹೇಳಿದ ಹಾಗೆ, ಹೇಳುವುದು ಸ್ವಲ್ಪ ಕಷ್ಟ. ಸರ್ಕಾರದವರು ಈ ಸುಧಾರಣೆಯನ್ನು ಜಾರಿಗೆ ತರಬೇಕು ಎಂದು ಅಂದುಕೊಂಡಿರತಕ್ಕವರು, ಮೆಂಬರುಗಳಿಗೆ 'ಈ ರೀತಿ ಮಾಡಬೇಕೆಂದು ಇದ್ದೇವೆ, ಇದರ ಕಷ್ಟ, ಸುಖ ಏನು' ಎಂಬುದನ್ನು ಹೇಳಿದರೆ ಬಹುಮಟ್ಟಿಗೆ ನಮಗೆ ಸಹಾಯವಾಗುತ್ತಾ ಇತ್ತು. ಆದರೆ ಅವರು ನಮ್ಮ ಹಾಗೆಯೇ ಸುಮ್ಮನೆ ರೆಕಮಂಡೇಷನ್ ಯಾವ ಯಾವುದು ಇದೆ, ನರ್ಸರಿ, ಪ್ರೈಮರಿ, ಸೆಕೆಂಡರಿ ಹಾಗೆ ಎಂದು ಹೇಳಿದರೇ ಹೊರತು ಹೆಚ್ಚಿಗೆ ಏನು ಹೇಳಲಿಲ್ಲ. ಅವರ ಮೇಲೆ ಕೆಲವು ಅನುಮಾನಗಳು ಸಹ ಬರುತ್ತವೆ. ಈ ವರದಿಯಲ್ಲಿ

> "As a rule a six-year primary education should be provided in every primary school. There should be no incomplete schools for administrative reasons as it would virtually mean the defeat of the main objective of the primary course.'"

ಎಂದು ಬಹಳ ವಿಶದವಾಗಿ ಹೇಳಿದ್ದಾರೆ. ಅಂಥದರಲ್ಲಿ ಅವರು ಈಗ ತಾನೆ ಸ್ವಲ್ಪ ಹೊತ್ತಿನಲ್ಲಿ ಹೇಳಿದ ಹಾಗೆ 2 ವರ್ಷ, 3 ವರ್ಷ, 4 ವರ್ಷ ಬೇಕಾದರೂ ಇರಬಹುದು. ಕೆಲವು ಸ್ಕೂಲುಗಳಲ್ಲಿ 6 ವರ್ಷ ಇರುತ್ತದೆ ಎಂದು ಹೇಳಿದರು. ಅದನ್ನು ಯಾವ ರೀತಿ ಜಾರಿಗೆ ತರುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಬಹುಮಟ್ಟಿಗೆ ಕಷ್ಟವಾಗಿದೆ, ಸ್ವಾಮಿ, ಈ ಸಮಿತಿಯವರ ಉದ್ದೇಶ ಬಹಳ ಒಳ್ಳೆಯದು. ದೇಶದಲ್ಲಿ ವಿದ್ಯಾವಂತರಾದವರು ತಮ್ಮ ಜೀವನವನ್ನು ಹೇಗೆ ನಡೆಸಬೇಕು ಎಂದು ಹೇಳಿ ಬಹುಮಟ್ಟಿಗೆ ಕಷ್ಟಕ್ಕೆಗುರಿಯಾಗಿದ್ದಾರೆ. ಈಗಿನ ವಿದ್ಯಾಭ್ಯಾಸ ಯಾವುದೋ ಒಂದು ಕಾರಣದಿಂದ ಬಂದಂಥಾದ್ದು, ಇದರಿಂದ ನಮ್ಮ ಯುವಕರ ಜೀವನ ಬಹಳ ಕಷ್ಟಕ್ಕೆ ಈಡಾಗಿದೆ. ಅದನ್ನು ಹೋಗಲಾಡಿಸತಕ್ಕದ್ದು ಬಹಳ ಅವಶ್ಯಕ. ವಿದ್ಯಾವಂತನಾದ ಯುವಕ ತನ್ನ ಜೀವನಕ್ಕೆ ಹೇಗೆ ಎಂದು ಹೇಳಿ ಯೋಚನೆ ಮಾಡದೇ ಇರತಕ್ಕ ರೀತಿಯಲ್ಲಿ ವಿದ್ಯೆ ಪಡೆದು, ನೌಕರಿಯನ್ನು ಸಂಪಾದಿಸುವುದರಿಂದಲಾಗಲಿ, ನೌಕರಿ ಸಿಕ್ಕದೇ ಇದ್ದರೆ ಎಲ್ಲಾದರೂ ಕಷ್ಟಪಟ್ಟು ಕೆಲಸ ಮಾಡುವುದರಿಂದಾಗಲಿ ತನ್ನ ಜೀವನವನ್ನು ಸಾಗಿಸಲು ಸಂಪಾದನೆಮಾಡಿಕೊಳ್ಳಬಲ್ಲೆ ಎಂಬ ಒಂದು ಧೈರ್ಯ ಅವನಲ್ಲುಂಟಾಗುವಂತೆ ಮಾಡಬೇಕು. ಹಾಗೆ ಅವನು ತನ್ನ ಜೀವನವನ್ನು ಸಾಗಿಸಲು ಸಂಪಾದನೆಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪನೆಮಾಡಿಕೊಡದೆ ಹೋದರೆ ನಾವು ದೇಶವನ್ನು ಉದ್ಧಾರಮಾಡಿದಂತಾಗುವುದಿಲ್ಲ. ವಿದ್ಯಾವಂತರಾದವರು ಕೆಲಸಮಾಡತಕ್ಕದ್ದು ಅವರ ಯೋಗ್ಯತೆಗೆ ಕಡಮೆ ಎನ್ನತಕ್ಕ ಭಾವನೆ ಹೋಗಬೇಕು. ಎಂಬ ಒಂದು ಉದಾತ್ತವಾದ ಧ್ಯೇಯದಿಂದ ಅವರು

ಶಿಫಾರಸುಗಳನ್ನು ಮಾಡಿದ್ದಾರೆ. ಆ ಶಿಫಾರಸುಗಳು ಯಾವ ರೀತಿ ಜಾರಿಗೆ ಬರುತ್ತವೆ ಎಂಬುದರಲ್ಲಿ ಅವರು ಅನೇಕ ಮಾರ್ಗಗಳನ್ನು ತಿಳಿಸಿದ್ದಾರೆ. ಹಣಕಾಸಿನ ದೃಷ್ಟಿಯಿಂದ ಎಜ್ಯುಕೇಷನ್ ಸೆಸ್ ಹಾಕುವುದು, ಸ್ಕೂಲ್ ಫೀಜು ಹೆಚ್ಚುಮಾಡುವುದು ಮುಂತಾದುವನ್ನು ಸೂಚಿಸಿದ್ದಾರೆ. ಎಜ್ಯುಕೇಷನ್ ಸೆಸ್ $2\frac{1}{4}$ ಆಣೆ ಹೆಚ್ಚಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರದವರು ಪ್ರೈಮರಿ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಆಸಕ್ತಿವಹಿಸಿ ಸಹಾಯ ಮಾಡುತ್ತೇವೆಂದು ನಂಬಿ ಅವರಿಂದ ಎಷ್ಟು ನಿರೀಕ್ಷೆ ಮಾಡುತ್ತಾರೆಂಬುದನ್ನೆಲ್ಲಾ ಹೇಳಿ ಒಟ್ಟು ಒಂದು ಕೋಟಿ 16 ಲಕ್ಷ ರೂಪಾಯಿ ಬರುತ್ತದೆ ಎಂದು ಹೇಳಿದ್ದಾರೆ. ಈಗ ನಾವು ಖರ್ಚುಮಾಡುತ್ತಾ ಇರತಕ್ಕ $3\frac{3}{4}$ ಕೋಟಿ ರೂಪಾಯಿಗಳ ಜೊತೆಗೆ 6 ಕೋಟಿ ರೂಪಾಯಿಗಳು, 10 ವರ್ಷದಲ್ಲಿ ಹೆಚ್ಚಾಗಬೇಕು ಎಂದು ಸಮಿತಿಯವರು ಹೇಳಿದ್ದಾರೆ. ಈ 116 ಲಕ್ಷ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸತಕ್ಕ ರೀತಿ ಏನು ಎಂಬುದು ನಮಗೆ ಗೊತ್ತಾಗುವುದಿಲ್ಲ. ನಾವು ಜಾರಿಗೆ ತರಬೇಕು ಎಂದು ಹೇಳಿ ಯಾರು ಇದನ್ನು ಬಹಳ ಕಾತುರತೆಯಿಂದ ಒಂದೆರಡು ತಿಂಗಳಿನಲ್ಲೇ ನಿಜವಾಗಿಯೂ ಸಾಹಸದ ಕೆಲಸವನ್ನು ಮಾಡಿ ಈ ವರದಿಯನ್ನು ತಂದರೋ ಅವರಾದರೂ ಈ ಸಭೆಯ ಮುಂದೆ ಈ ರೀತಿಯಾಗಿ ನಾವು ಮಾಡಬೇಕು ಎಂದು ಹೇಳಿದ್ದರೆ ಬಹಳ ಚೆನ್ನಾಗಿತ್ತು. ಕಷ್ಟಪಟ್ಟಿದ್ದಕ್ಕೆ ತಕ್ಕ ಪುರಸ್ಕಾರ ಸಿಕ್ಕುತ್ತಾ ಇತ್ತು ಎಂದು ಹೇಳಿ ನಾನು ಅಂದುಕೊಂಡಿದ್ದೇನೆ.

ಇನ್ನು ನರ್ಸರಿ ಸ್ಕೂಲು ಅಥವಾ ಪ್ರೀ ಪ್ರೈಮರಿ ಎಜ್ಯುಕೇಷನ್ ಏನಿದೆ, ಅದನ್ನು ಸರ್ಕಾರದವರು ನಡೆಸುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ಖಾಸಗೀ, ಸಂಸ್ಥೆಯವರು, ಡಿಸ್ಟ್ರಿಕ್ ಬೋರ್ಡಿನವರು ಅಥವಾ ಮುನಿಸಿಪಾಲಟಿಯವರು ನಡೆಸಿಕೊಳ್ಳಬೇಕೆಂದು ಹೇಳಿದ್ದಾರೆ.

2–30 P.M.

ಅದು ಎಲ್ಲಾ ಕಡೆಯಲ್ಲೂ ಹಾಗೆಯೇ ನಡೆಯುತ್ತಿದೆ. ಆದುದರಿಂದ ಇಲ್ಲಿ ಮಾತ್ರ ಸರ್ಕಾರದವರು ಖರ್ಚನ್ನು ಒದಗಿಸುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಾನೇನು ಹೇಳಲು ಇಷ್ಟಪಡುತ್ತೇನೆಂದರೆ, ನರ್ಸರಿ ಸ್ಕೂಲುಗಳನ್ನು ನಡೆಸತಕ್ಕಂಥ ಉಪಾಧ್ಯಾಯರುಗಳು ಯಾರಿದ್ದಾರೋ ಅವರಿಗೆ ತರಪೇತು ಕೊಡತಕ್ಕ ಭಾರವನ್ನು ಖಾಸಗಿಯವರು ಹೊರವುದಕ್ಕಾಗುವುದಿಲ್ಲ. ಹೊರುವುದಕ್ಕಾಗುವುದಿಲ್ಲವೆಂದರೆ, ಹಣದ ಭಾರವನ್ನೆಲ್ಲ, ಇದಕ್ಕಾಗಿ ಸರಿಯಾಗಿ organise ಮಾಡಿ ತರಪೇತು ಕೊಡತಕ್ಕ ಕಾರ್ಯವನ್ನು ಖಾಸಗಿಯವರು ಮಾಡುವುದಕ್ಕಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಈ ಕಾರಣ, ಇದುವರೆಗೆ ಅವರಿಗೆ ಯಾವ ರೀತಿ ಸರ್ಕಾರದವರು ಟ್ರೈನಿಂಗ್ ಕೊಡುತ್ತಿದ್ದರೋ ಹಾಗೆಯೇ, ಮುಂದೆಯೂ ತರಪಿಯತ್ತನ್ನೂ ಕೊಡುವುದಕ್ಕೆ ತಾವೇ ಏರ್ಪಾಡು ಮಾಡಬೇಕು. ಈಗ ಈ ವರದಿಯಲ್ಲಿ ಈ ವರ್ಷದಿಂದಲೇ ನರ್ಸರಿ ಟ್ರೈನಿಂಗ್ ಕೊಡತಕ್ಕ ಕಾರ್ಯವನ್ನು ಬಿಟ್ಟುಬಿಡಬೇಕೆಂದು ಸೂಚಿಸಿದ್ದಾರೆ. ಹಾಗೆ ಮಾಡುವುದು ಸರಿಯಲ್ಲವೆಂದು ನನಗನ್ನಿಸುತ್ತದೆ.

ಇನ್ನು ಪ್ರೈಮರಿ ವಿದ್ಯಾಭ್ಯಾಸ. ಇದನ್ನು 6 ವರ್ಷಗಳ ಕಾಲ ಮಾಡಿ, ಮಿಡ್ಲ್ ಸ್ಕೂಲನ್ನು ತಪ್ಪಿಸಿ ಸೆಕೆಂಡರಿ ವಿದ್ಯಾಭ್ಯಾಸದ ಅವಧಿಯನ್ನು ಸ್ವಲ್ಪ ಜಾಸ್ತಿಮಾಡಿದ್ದಾರೆ. ಈ ರೀತಿ, ಪ್ರೈಮರಿಯಿಂದ ಹಿಡಿದು ಇಂಟರ್ಮಿಡಿಯೆಟ್ ಕೊನೆಯವರೆಗೆ 13 ವರ್ಷಗಳಿದ್ದುದನ್ನು 12 ವರ್ಷಕ್ಕೆ ಇಳಿಸಿದ್ದಾರೆ. ಅಲ್ಲಿಗೆ ಒಂದು ವರ್ಷ ಮಾತ್ರ ಕಡಮೆಯಾಯಿತು. ಸರಿಯಾಗಿ ಮೊದಲಿನಿಂದಲೂ ಮನಸ್ಸಿಟ್ಟು ಪಾಠ ಹೇಳಿಕೊಡುವುದಾದರೆ ಈ ಒಂದು ವರ್ಷದ ಪಾಠವನ್ನೂ ಈ ಅವಧಿಯಲ್ಲೇ ಹೇಳಿಕೊಡುವುದಕ್ಕೆ ಸಾಧ್ಯ, ಅದರಿಂದೇನೂ ಹುಡುಗರಿಗೆ ತೊಂದರೆಯಾಗುವುದಿಲ್ಲವೆಂದು ಒಂದು ಭಾವನೆಯಿದೆ. ಅದಲ್ಲದೆ ರಜಾ ದಿನಗಳಿದ್ದುದನ್ನು ಕಡಮೆಮಾಡಿ, ಸೆಕೆಂಡರಿ ವಿದ್ಯಾಭ್ಯಾಸದಲ್ಲಿ 180 ದಿನಗಳಿದ್ದುದನ್ನು 220 ದಿನಗಳಿಗೆ ಏರಿಸಿದ್ದಾರೆ. ಪ್ರೈಮರಿ ವಿದ್ಯಾಭ್ಯಾಸದಲ್ಲಿ 200 ದಿವಸಗಳಿದ್ದುದನ್ನು 280 ದಿವಸಕ್ಕೆ ಏರಿಸಿದ್ದಾರೆ. ಇದರಿಂದ ಸ್ವಲ್ಪ ಮಟ್ಟಿಗೆ, ಒಂದು ವರ್ಷ ಅವಧಿಯನ್ನು ಕಡಮೆಮಾಡಿದ್ದರೂ ಅದರಿಂದ ತಪ್ಪಬಹುದಾದ ಪಾಠ ಭಾಗವನ್ನು ಭರ್ತಿಮಾಡುವುದಕ್ಕೆ ಸಾಧ್ಯವೆಂದು ಸಮಿತಿಯವರು ಹೇಳಿದ್ದಾರೆ. ಬಹುಮಟ್ಟಿಗೆ ಉಪಾಧ್ಯಾಯರುಗಳು ಶಕ್ತಿವಂತರೂ ಉತ್ಸಾಹ ಶಾಲಿಗಳೂ ಆಗಿದ್ದರೆ ಇದನ್ನು ಮಾಡುವುದಕ್ಕಾಗುವದಿಲ್ಲವೆಂದು ನಾನೂ ಹೇಳುವುದಿಲ್ಲ. ಏಕೆಂದರೆ ಹಿಂದೆ ಕನ್ನಡ ಲೋವರ್ ಸೆಕೆಂಡರಿ ಪಾಸು ಮಾಡಿದವರು ಎರಡು ವರ್ಷದಲ್ಲೇ ಇಂಗ್ಲೀಷ್ ಲೋವರ್ ಸೆಕೆಂಡರಿ ಪಾಸುಮಾಡುವುದಕ್ಕೆ ಅವಕಾಶವಿತ್ತು. ಹಾಗೆ ಮಾಡುತ್ತಲೂ ಇದ್ದರು. ಆದ್ದರಿಂದ ಸಮಿತಿಯವರು ಹೇಳುವಂತೆ ಮಾಡಲು ಸಾಧ್ಯವಿಲ್ಲವೆಂದು ನಾನು ಹೇಳಲಾರೆ.

ಆದರೆ ಇದರಲ್ಲಿರುವ ಒಂದು ತೊಂದರೆಯೇನೆಂದರೆ, ಶ್ರೀ ಮರಿಯಪ್ಪನವರು ಹೇಳಿದಂತೆ, ಈಗ 8 ವರ್ಷಗಳ ಕಾಲ ನಮ್ಮ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸ ಸಿಕ್ಕುತ್ತಿದ್ದುದು ಇದರಿಂದಾಗಿ ಹೋಗುತ್ತದೆ. ಈ ರೀತಿ ಮಾಡತಕ್ಕದ್ದು ನ್ಯಾಯವಲ್ಲ. ಆದ್ದರಿಂದ 8 ವರ್ಷಗಳು ಉಚಿತ ವಿದ್ಯಾಭ್ಯಾಸವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಈಗಿನ ಸಲಹೆಯ ಪ್ರಕಾರ ಎರಡು ವರ್ಷ ಉಚಿತ ವಿದ್ಯಾಭ್ಯಾಸ ಸಿಕ್ಕುವುದು ಹೋಗುವುದಲ್ಲದೆ, ಮುಂದೆ ಸೆಕೆಂಡರಿ ವಿದ್ಯಾಭ್ಯಾಸದಲ್ಲೂ, ಈಗ ಕೊಡುತ್ತಿರುವ ಫೀಜನ್ನು ಜಾಸ್ತಿ ಮಾಡಬೇಕೆಂದು ಹೇಳಿರುವುದರಿಂದ, ಜಾಸ್ತಿ ಫೀಜನ್ನು ಕೊಡಬೇಕಾಗಿ ಬರುತ್ತದೆ. ಮೂರು ರೂಪಾಯಿ ಫೀಜ್ ಕೊಡುತ್ತಿರುವುದನ್ನು $5\frac{1}{4}$ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಹೇಳಿರುವುದು ಹಳ್ಳಿಗಾಡಿನ ಜನರಿಗೆ ಬಹಳ ಕಷ್ಟವಾಗಿ ಪರಿಣಮಿಸುತ್ತಿದೆ. ಆದ್ದರಿಂದ 8 ವರ್ಷಗಳ ಕಾಲ ಉಚಿತ ವಿದ್ಯಾಭ್ಯಾಸವನ್ನು ಸಿಕ್ಕುವಂತೆ ಮಾಡಲು ಏನೇನು ಬದಲಾವಣೆಗಳು ಅವಶ್ಯಕವೋ ಅವುಗಳನ್ನು ಇದರಲ್ಲಿ ಅಳವಡಿಸಿಕೊಂಡರೆ ಉತ್ತಮವೆಂದು ನನಗೆ ತೋರುತ್ತದೆ. ಹಳ್ಳಿಗಾಡಿನ ಜನಗಳು ತಮಗೆ ಹೆಚ್ಚು ಹೆಚ್ಚು ವಿದ್ಯಾಭ್ಯಾಸ ಕೊಡಬೇಕೆಂದು ಮುಂದೆ ಬರುತ್ತಿರುವಾಗ ಇಂಥ ಕಷ್ಟಗಳು ಆಗಾಗ್ಗೆ ಬರುವುದನ್ನು ನಾವು ನೋಡುತ್ತಿದ್ದೇವೆ.

ಅಲ್ಲದೆ ಇನ್ನೊಂದು ವಿಷಯ. ಕಮಿಟಿಯವರು ಪ್ರಾಥಮಿಕ ವಿದ್ಯಾಭ್ಯಾಸವು ದೇಶದ ಎಲ್ಲಾ ಕಡೆಯೂ ಜಾರಿಗೆ ಬರಬೇಕೆಂದು ಹೇಳಿದ್ದಾರೆ. ಅದರೆ ಕಟ್ಟಡಗಳ ವಿಷಯದಲ್ಲಿ ಸರ್ಕಾರದವರೂ ಮತ್ತು ಕಮಿಟಿಯವರೂ ಏನು ಅಭಿಪ್ರಾಯಕ್ಕೆ ಬಂದಿದ್ದಾರೆಂದರೆ, ಈಗ ಕೊಡತಕ್ಕ ಪ್ರೈಮರಿ ಸ್ಕೂಲುಗಳಿಗೆ ಅಂಥ ಉತ್ತಮವಾದ ಕಟ್ಟಡಗಳೇನೂ ಬೇಕಾಗಿಲ್ಲ. ಹಳ್ಳಿಯವರೇ ಏನಾದರೂ ಸಹಾಯಮಾಡುತ್ತಾರೆ, ಅವರು ಕೊಡುವ ಇಟ್ಟಿಗೆ ಮತ್ತು ಸಾಮಾನುಗಳಿಂದಲೇ ಹೇಗಾದರೂ ಕಟ್ಟಡ ಕಟ್ಟಿಕೊಂಡು ಶಾಲೆಗಳನ್ನು ನಡೆಸಿ

(ಶ್ರೀ ವಿ. ವೆಂಕಟಪ್ಪ.)

ಕೊಂಡರೆ ಸಾಕು, ಕಟ್ಟಡಗಳಿಗೆ ಹೆಚ್ಚಿಗೆ ಹಣ ಖರ್ಚು ಮಾಡಬೇಕಾಗಿಲ್ಲವೆಂದು ಹೇಳುತ್ತಾರೆ. ಇದನ್ನು ನಾನು ಖಂಡಿತವಾಗಿಯೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ತಾವು ಸಾಧಾರಣವಾದ ಕಟ್ಟಡವಾದರೂ ಪರವಾಗಿಲ್ಲವೆಂದು ಹೇಳಿಬಿಟ್ಟರೆ, ಅದು ಕ್ರಮೇಣ ಶಿಥಿಲ ವಾದಂತೆ ರಿಪೇರಿ ಮಾಡುವವರು ಯಾರು, ಅವುಗಳನ್ನು ಸರಿಯಾದ ಸ್ಥಿತಿಯಲ್ಲಿರುವಂತೆ ಆಗಾಗ್ಗೆ ನೋಡಿಕೊಳ್ಳು ವವರು ಯಾರು ಎಂಬುದನ್ನು ಯೋಚನೆ ಮಾಡಬೇಕು. ಈಗಾಗಲೇ ಕಲವು ಕಡೆಗಳಲ್ಲಿ ಮಿಲಿಟರಿಯವರು ಒದಗಿ ಸಿದ್ದ ಸಾಮಾನುಗಳಿಂದ ಕಟ್ಟಿರತಕ್ಕ ಕಟ್ಟಡಗಳು ಶಿಥಿಲವಾಗಿ ರಿಪೇರಿ ಇಲ್ಲದೆ ಆ ಕಟ್ಟಡಗಳನ್ನೇ ಬಿಟ್ಟು ಬಿಟ್ಟು ಬೇರೆ ಕಡೆ ಪಡಸಾಲೆಗಳಲ್ಲಿ ಪಾಠಶಾಲೆಗಳನ್ನು ನಡೆಸಬೇಕಾಗಿ ಬಂದಿದೆಯೆಂಬುದನ್ನು ತಾವು ಗಮನಿಸ ಬೇಕು. ಆದ್ದರಿಂದ ತಾವೀಗ ಒಂದು ಸಾಧಾರಣ ಗುಡಿಸಲು ಕಟ್ಟಿಕೊಂಡು ಶಾಲೆಗಳನ್ನು ನಡೆಸಿ ಎಂದು ಹೇಳಿಬಿಡಬಹುದು. ಮುಂದೆ ಅವುಗಳನ್ನು ಪದೇ ಪದೇ ರಿಪೇರಿ ಮಾಡುವವರು ಯಾರು? ಅಂಥ ಸಾಮಾನ್ಯ ಕಟ್ಟಡಗಳನ್ನು ಸರಿಯಾದ ರೀತಿಯಲ್ಲಿ maintain ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಈ ಕೆಲಸ 'Penny wise, pound foolish' ಎಂಬಂತಾಗುತ್ತದೆ. ಈಗಾಗಲೇ ಈ ವಿಷಯದಲ್ಲಿ ನಾವು experiment ಮಾಡಿ ಅನುಭವಿಸಿದ್ದೇವೆ. ಸಿಲೋನ್ pattern ಎಂದು ಹೇಳಿ ಯಾವುದೋ ಹೊಸತರಹ ಕಟ್ಟಡಗಳನ್ನು ಅನೇಕ ಕಡೆಯಲ್ಲಿ ಕಟ್ಟಿದರು. ಅವುಗಳಲ್ಲಿ ಈಗ ಹೆಂಚು, ಬಾಗಿಲು ಎಲ್ಲಾ ಹೋಗಿ, ಎಲ್ಲಾ ಕಡೆಯೂ ಗಾಳಿ ಹೊಡೆತ ತಡೆ ಯುವುದಕ್ಕಾಗುತ್ತಿಲ್ಲ. ಅವುಗಳನ್ನು ರಿಪೇರಿ ಮಾಡು ವವರು ಯಾರೂ ಇಲ್ಲ. ಚಾಪೆಯನ್ನೋ ಅಥವಾ ಇನ್ನೇನಾದರೂ ಹಾಕಿಕೊಂಡು ಕುಳಿತುಕೊಳ್ಳಬಹುದು ಎಂದು ಹೇಳಿದ್ದಾರೆ. ಆದರೆ ಈ ಚಾಪೆಗಳು ಎಷ್ಟು ದಿವಸ ಉಪಯೋಗಕ್ಕೆ ಬರುತ್ತವೆ? ಆಮೇಲೆ ತರುವ ವರು ಯಾರು? ಅದಕ್ಕೆ ದುಡ್ಡನ್ನು ಕೊಡು ವವರು ಯಾರು? ನಿತ್ಯವೂ ಜೋಪಾನವಾಗಿ ಇಟ್ಟು ಕೊಳ್ಳುವವರು ಯಾರು? ಆದ್ದರಿಂದ ಇದೆಲ್ಲಾ ಸಾಧ್ಯ ವಾದ ಕೆಲಸವಲ್ಲ. ಹಿಂದಿನಕಾಲದ ಪದ್ಧತಿಯಾದರೋ, ಹುಡುಗರು ತಾವೇ ಗೋಣೀಚೀಲಗಳನ್ನು ತೆಗೆದು ಕೊಂಡು ಹೋಗಿ ಹಾಕಿಕೊಳ್ಳುತ್ತಿದ್ದರು. ತಾವೇ ಸಗಣಿ ತೆಗೆದುಕೊಂಡು ಹೋಗಿ ಸ್ಕೂಲನ್ನು ಸಾರಿಸುತ್ತಿದ್ದರು. ಈಗ ಆ ಜನರ ಆರ್ಥಿಕಸ್ಥಿತಿಯನ್ನು ಪರಿಗಣಿಸಿದರೆ ಗೋಣೀಚೀಲಗಳ ಬೆಲೆ ಬಹಳ ಏರಿರುವುದರಿಂದ ಅದನ್ನು ತರುವುದಕ್ಕೂ ಅವರಿಗೆ ಸಾಧ್ಯವಿಲ್ಲ. ಆದ್ದ ರಿಂದ ತಾವು ಹೇಳುವ ಈ ಸಲಹೆ ಹಳ್ಳಿಯವರ ದೃಷ್ಟಿ ಯಿಂದ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ತಾವು ಕಡ್ಡಾಯವಾಗಿ ಬದಲಾವಣೆ ಮಾಡಬೇಕು. ತಮಗೆ ಎಷ್ಟೆಷ್ಟು ಹಣವನ್ನು ಒದಗಿಸುವುದಕ್ಕೆ ಸಾಧ್ಯವೋ ಅಷ್ಟರಲ್ಲೇ ಒಳ್ಳೆಯ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಅವು ಶಾಶ್ವತವಾಗಿರುವಂತೆ ಮಾಡಿ ವರ್ಷ ವರ್ಷವೂ ಅಲ್ಪ ಸ್ವಲ್ಪ ಖರ್ಚಿನಿಂದ ಸುಣ್ಣ ಬಣ್ಣ ಬಳಿಸಿಕೊಂಡು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿ ರವುದಕ್ಕೆ ಅವಕಾಶವಿರುವಂತೆ ಮಾಡಬೇಕು. ಹಾಗಿ ಲ್ಲದೆ, ಈಗಲೇ ಸ್ವಲ್ಪ ಖರ್ಚು ಎಂದು ನೋಡಿದರೆ ಮುಂದೆ ಹೆಚ್ಚು ಹೆಚ್ಚು ಖರ್ಚಾಗುತ್ತದೆ. ಅವುಗಳನ್ನು ಮುಂದೆ ನೋಡಿಕೊಳ್ಳುವುದಕ್ಕೂ ಸಾಧ್ಯ ವಿಲ್ಲದಂತಾಗುತ್ತದೆ.

ಆಮೇಲೆ Basic Pattern ಎಂದು ಸಮಿತಿ ಯವರು ಹೇಳಿದ್ದಾರೆ. ಇದರ ಅರ್ಥವೇನೋ ನನಗೆ ಗೊತ್ತಾಗುವುದಿಲ್ಲ. ವಿದ್ಯಾಮಂತ್ರಿಗಳು ಇದನ್ನು ತಮ್ಮ ಭಾಷಣದಲ್ಲಿ ವಿಶದಪಡಿಸಲಿಲ್ಲ. ಶ್ರೀ ಪಟ್ಟಾಭಿರಾಮಯ್ಯನವರಾದರೂ ವಿಶದೀಕರಿಸುತ್ತಾರೆ ಅವರು ಮಾತನಾಡುತ್ತಾರೆ ಎಂದು ತಿಳಿದಿದ್ದೆ, ಅವರನ್ನೂ ಕೇಳಿಕೊಂಡೆ. ಆದರೆ ಅವರೂ ಏಕೋ ವಿಶ್ವಾಸ ತೋರ ಲಿಲ್ಲ. ಹೀಗಾಗಿ ಬೇಸಿಕ್ ಪ್ಯಾಟರ್ನ್ ಎಂಬುದರ ಅರ್ಥ ನನಗಾಗಲಿಲ್ಲ. ಒಂದು ವೇಳೆ ತಮಗಿದರಲ್ಲಿ ಪೂರ್ಣ ನಂಬಿಕೆಯಿದ್ದರೆ, ಮಹಾತ್ಮಾಜಿಯವರು ಬೇಸಿಕ್ ಸಿಸ್ಟಂ ಎಂದು ಏನು ಹೇಳಿದ್ದಾರೋ, ವಾರ್ಧಾ ಸಿಸ್ಟಂ ಏನಿದೆಯೋ ಅದನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಶ್ರೀ ಮಹಮ್ಮದ್ ಇಮಾಂ ರವರೇ ಹೇಳಿದ್ದಾರೆ, ಕೆಲವು ಕಡೆ ಮಾದರಿಯಾಗಿ ಸ್ಥಾಪಿಸಿದ್ದ ಇಂಥ 100 ಸ್ಕೂಲುಗಳು ಹೇಗೆ ಹೀನಸ್ಥಿತಿಯಲ್ಲಿವೆ ಎಂಬುದನ್ನು. ಅವುಗಳನ್ನೀಗ ನೋಡಿದರೆ ಯಾರೂ ಸಂತೋಷಪಡತಕ್ಕ ಸ್ಥಿತಿಯ ಲ್ಲಿಲ್ಲವೆಂದು ಅವರು ತಿಳಿಸಿದರು. ಇವುಗಳನ್ನು ಸ್ಥಾಪಿಸಿ ಇಂಥ ಸ್ಥಿತಿಯಲ್ಲಿ ಅವುಗಳನ್ನಿಟ್ಟಿರುವುದ ಕ್ಕಿಂತ ಅಂಥವುಗಳನ್ನಿಡುವುದೇ ಬೇಡ. ನಮ್ಮಲ್ಲಿ ವಿದ್ಯಾಭ್ಯಾಸದಲ್ಲಿ ನುರಿತಿರತಕ್ಕವರು, ಪರಿಣತರು ಅದು ಸರಿಯಲ್ಲ, ಬೇಡ ಎಂದು ಹೇಳಿದರೆ ಅದು ನಮಗೆ ಬೇಡವೇ ಬೇಡ. ಇಲ್ಲದಿದ್ದರೆ ಸುಮ್ಮನೆ ಕಣ್ಣೊರೆಸುವ ಕೆಲಸ ಮಾಡು ವುದು ಬೇಡ. ಯಾರಾದರೂ ದೊಡ್ಡವರು ವಾರ್ಧಾ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿದರೆ ನೋಡಿ, ಅದನ್ನು ಜಾರಿಗೆ ತಂದಿದ್ದೇವೆ ಎಂದು ತೋರಿಸಿ ಮೋಸಮಾಡುವ ಕೆಲಸ ಬೇಡ. ಅದು ನಮ್ಮ ಕೈಯಲ್ಲಾಗದೇಯಿದ್ದರೆ ಖಂಡಿತ ವಾಗಿಯೂ ಹೇಳಿ ನಿಲ್ಲಿಸಿಬಿಡೋಣ; ಹಾಗಿಲ್ಲದೆ ಆಗು ವುದಾದರೆ ಪೂರ್ತಿಯಾಗಿ ಜಾರಿಗೆ ತರೋಣ. ಅನೇಕರಿಗೆ ಇದರಲ್ಲಿ ಅನುಕೂಲವಿದೆ. ಹಳ್ಳಿಗಳಲ್ಲಿ ಅನೇಕರಿಗೆ 'ಇದೇನು ನಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿದರೆ ಅವರಿಂದ ಕೆಲಸ ಮಾಡಿಸುತ್ತಾರೆ' ಎಂಬ ಭಾವನೆ ಬಂದು, ಬೇಸಿಕ್ ಸ್ಕೂಲುಗಳಿಗೆ ಕಳುಹಿಸುವುದಿಲ್ಲ. ಇದಕ್ಕೆ ಕಾರಣ, ಈ ವಿಧವಾದ ಶಿಕ್ಷಣ ಕೊಡತಕ್ಕವರು ಸರಿಯಾಗಿಲ್ಲ. ಯಾವ ರೀತಿ ಯಲ್ಲಿ ಹೇಳಬೇಕೋ ಆ ರೀತಿ ಹೇಳಿ ಶಿಕ್ಷಣ ಕೊಡುವು ದಕ್ಕೆ ಶಕ್ತರಾದ, ಸರಿಯಾದ ತರಬೇತು ಹೊಂದಿದ ಜನರಿಲ್ಲ. ನಮ್ಮ ಜನ, ನಮ್ಮ ದೇಶ ಉದ್ಧಾರ ವಾಗಬೇಕಾದರೆ, ಈ ಸಮಿತಿಯ ಉದ್ದೇಶ ನೆರವೇರ ಬೇಕಾದರೆ, ಸರಿಯಾಗಿ ಶಿಕ್ಷಣಕೊಡುವ ಜನ ಬೇಕು. ಹಾಗೆ ಸರಿಯಾದವರನ್ನೊದಗಿಸಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿದರೆ, ಈಗ ಏನು ಸಾಧಾ ರಣ ವಿದ್ಯಾಭ್ಯಾಸವನ್ನು ಕೊಡುತ್ತಿದ್ದೇವೋ ಅದೇ ಸಾಕೆಂದು ಅಂದುಕೊಳ್ಳೋಣ.

ಇನ್ನು ಸೆಕೆಂಡರಿ ವಿದ್ಯಾಭ್ಯಾಸ. ಇದರ ವಿಷಯ ದಲ್ಲಿ ಮೊದಲನೆಯದಾಗಿ ಒಂದು ಕಷ್ಟ ನನಗೆ ತೋರುತ್ತಿದೆ. ಎಲ್ಲಾ ತರಗತಿಗಳೂ ಬೆಳಗಿನ ಹೊತ್ತು ಆಗಬೇಕೆಂದು ಹೇಳಿದ್ದಾರೆ. ಆ ಸಮಿತಿ ಯವರು ಏನೂ ಗೊತ್ತಿಲ್ಲದವರು, ಅವರಿಗೆ ಇದು ಹೊಳೆಯಲಿಲ್ಲವಲ್ಲಾ ಎಂದು ನಾನು ಹೇಳುತ್ತಿಲ್ಲ. ಆದರೆ ಅವರು ಇದರಲ್ಲಿರುವ ಒಂದು ಕಷ್ಟವನ್ನು ಏಕೆ ಪರಿಶೀಲನೆ ಮಾಡಲಿಲ್ಲವೋ ಅಥವಾ ಪರಿಶೀಲನೆ ಮಾಡಿದ್ದರೂ ಇದರ ಪರಿಹಾರಕ್ಕೆ ಬೇರೆ ಯಾವ ದಾರಿಯನ್ನು ಸೂಚಿಸಿದ್ದಾರೆಂಬುದು ನನಗೆ

ಗೊತ್ತಾಗಲಿಲ್ಲ. ಹೈಸ್ಕೂಲು ಅಥವಾ ಸೆಕೆಂಡರಿ ವಿದ್ಯಾಭ್ಯಾಸದ ಸ್ಕೂಲುಗಳು ಎಲ್ಲಾ ಕಡೆಗಳಲ್ಲಿಯೂ ಇರುವುದಿಲ್ಲ. ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ ನವರು ಹೇಳಿದಹಾಗೆ, ಹಳ್ಳಿಗಳಲ್ಲಿ ಪ್ರೈಮರಿ ಸ್ಕೂಲುಗಳು ನಡೆಯುತ್ತವೆ. ಈಗಲೂ ಬೆಳಗಿನ ಹೊತ್ತು ಮತ್ತು ಮಧ್ಯಾಹ್ನದ ಹೊತ್ತು ಎರಡರಿಂದ ಐದು ಗಂಟೆಯವರೆಗೆ ನಡೆಯುತ್ತಿವೆ. ಸಿಟಿಗಳಲ್ಲಿ ಮಾತ್ರ ಒಂದೇ ಹೊತ್ತು ಬೆಳಿಗ್ಗೆ ನಡೆಯಬಹುದು. ಹಳ್ಳಿಗಳಲ್ಲಿ ಕೆಲವುಕಡೆ ಮಿಡ್ಲ್ ಸ್ಕೂಲುಗಳನ್ನು ಕೊಡುತ್ತೇವೆಂದು ಹೇಳುತ್ತಾರೆ, ಅಂಥಾ ಕಡೆ ಕಷ್ಟ ವಾಗುವುದಿಲ್ಲ. ಈ ವರದಿಯ ಪ್ರಕಾರ, ಮಕ್ಕಳಿಗೆ 12ವರ್ಷದ ಮೇಲೆ ಅವರು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಹೋಗಬೇಕು. ಹಳ್ಳಿಗಳಲ್ಲಿ ಎಷ್ಟೆಷ್ಟು ದೂರದಿಂದ ಸ್ಕೂಲುಗಳಿಗೆ ಹುಡುಗರು ಬರುತ್ತಿದ್ದಾರೆಂಬುದನ್ನು ಸಮಿತಿಯವರು ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ಸ್ಕೂಲುಗಳಿಗೆ ಗ್ರಾಮಾಂತರಗಳಲ್ಲಿ ಮಕ್ಕಳು ನಾಲ್ಕು ಐದು ಮೈಲಿಗಳಿಂದ ಬರುತ್ತಿದ್ದಾರೆಂದು ಹೇಳಿದರೆ ದಯವಿಟ್ಟು ಇದು ಉತ್ಪ್ರೇಕ್ಷೆಯೆಂದು ಯಾರೂ ತಿಳಿದುಕೊಳ್ಳಬಾರದು. ಚನ್ನಪಟ್ಟಣದ ಒಂದು ಸ್ಕೂಲನ್ನು ಉದಾಹರಣೆಗೆ ತೆಗೆದುಕೊಂಡರೆ, ನಾಲ್ಕೈದು ಮೈಲಿಗಳಿಂದ ಹುಡುಗರು ಬರುತ್ತಿದ್ದಾರೆ. ನಮ್ಮೂರಿಗೆ ಒಂದೂವರೆ ಅಥವಾ ಎರಡು ಮೈಲಿಯಾಗುತ್ತದೆ ಆ ಸ್ಕೂಲು. ನಾನು ಓದುತ್ತಿದ್ದಾಗ ಮಿಡ್ಲ್‌ಸ್ಕೂಲು ಬೆಳಿಗ್ಗೆ ನಡೆಯುತ್ತಿತ್ತು. ಬೇರೆ ಕಟ್ಟಡವಿಲ್ಲದ್ದರಿಂದ ಹೈಸ್ಕೂಲಿನಲ್ಲೇ ನಡೆಸುತ್ತಿದ್ದರು. ಹುಡುಗರು ಎರಡು ಮೈಲಿ ನಡೆದುಕೊಂಡು ಬರಬೇಕಾದರೆ ಎಷ್ಟುಕಾಲ ವಾಗುತ್ತದೆಂದು ಯೋಚಿಸಬೇಕು. ಬೆಳಿಗ್ಗೆ ಬಂದು ಸ್ಕೂಲು ಮುಗಿಸಿಕೊಂಡು ವಾಪಸು ಹೋಗಿ ಪುನಃ ಬರಬೇಕು. ಒಂದೂವರೆ ಮೈಲಿ ನಡೆಯಲು ಕನಿಷ್ಠಪಕ್ಷ 45 ನಿಮಿಷ ಬೇಕಾಗುತ್ತದೆ. ನಾನು ಅನೇಕ ಸಲ ಗಡಿಯಾರ ನೋಡಿದ್ದೇನೆ. ಇದಕ್ಕಿಂತ ಕಡಿಮೆಕಾಲ ವಾಗುವುದಿಲ್ಲ. ಇದಕ್ಕಿಂತ ದೂರದಿಂದ ಎರಡು ಮೂರು ಮೈಲಿಗಳಿಂದ ಬರುವ ಹುಡುಗರು ಬೆಳಿಗ್ಗೆ ಸ್ಕೂಲಿಗೆ ಬಂದು 12 ಘಂಟೆಯವರೆಗೆ ಅಲ್ಲಿದ್ದು, 12 ಘಂಟೆಯ ಮೇಲೆ ಮನೆಗೆ ಹೋಗಿ ಊಟ ಮಾಡಿ ಮತ್ತೆ ಮೂರು ಘಂಟೆಗೆ ಬರಬೇಕು. ಏಕೆಂದರೆ, ಮಧ್ಯೆ ಮೂರು ಘಂಟೆ ಅವಕಾಶವಿರಬೇಕೆಂದು ಹೇಳುತ್ತಾರೆ. ಮಕ್ಕಳು ಎಷ್ಟುಸಲ ತಿರುಗಬೇಕಾಗುತ್ತದೆಂಬುದನ್ನು ಗಮನಿಸಬೇಕು. ಎರಡುಸಲ ಬಂದು ಹೋಗಬೇಕೆಂದರೆ ಮೂರು ನಾಲ್ಕು ಮೈಲಿಗಳ ದೂರದಿಂದ, ದಿನಕ್ಕೆ 12 ಮೈಲಿ ತಿರುಗಬೇಕಾಗುತ್ತದೆ. ಹೀಗಾದರೆ ನಿಜವಾಗಿಯೂ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಕಡೆ ಗಮನ ಕೊಡಲು ಸಾಧ್ಯವೇ ? ಅಥವಾ ಎಲ್ಲರೂ ಸಾಯಂಕಾಲದ ಹೊತ್ತು ಕಡ್ಡಾಯವಾಗಿ ಬರಲೇಬೇಕು, ಕೆಲವರಿಗೆ ಮಾತ್ರ ವಿನಾಯಿತಿ ಕೊಡಬಹುದೆಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಎಲ್ಲರಿಗೂ ಇಂಥ ವಿನಾಯಿತಿ ಕೊಟ್ಟರೆ, ಇವರು ಮಾಡಿದ ಯೋಜನೆ ಪ್ರಯೋಜನವಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಚನ್ನಪಟ್ಟಣದ ಸ್ಕೂಲಿಗೆ ಎಷ್ಟು ಮೈಲಿ ದೂರದಿಂದ ಬರುತ್ತಾರೆ ?

ಶ್ರೀ ವಿ. ವೆಂಕಟಪ್ಪ.—ಕೆಲವರು ಆರೇಳು ಮೈಲಿಯಿಂದ ಕೂಡ ಬರುತ್ತಿದ್ದಾರೆ. ಬಹಳ ಉತ್ಪ್ರೇಕ್ಷೆ ಮಾಡುತ್ತಾರೆಂದು ಹೇಳುತ್ತಾರೋ ಏನೋ ಎಂದು ಕಡಮೆ ಹೇಳಿದೆ.

ಸಮಿತಿಯವರು ಸ್ಕೂಲಿಗೆ ಬರುವ ಹುಡುಗರಿಗೆ ಊಟಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತಾರೆ. ಹಿಂದೆ ಸರ್ಕಾರದವರು ಸ್ಕೂಲುಗಳಲ್ಲಿ ಕ್ಯಾಂಟೀನ್ ಎಂಬ ವ್ಯವಸ್ಥೆ ಮಾಡಿದ್ದರು. ಊಟವಲ್ಲ, ಮಧ್ಯಾಹ್ನ ಒಂದೂವರೆ ಘಂಟೆಯಿಂದ ಎರಡು ಘಂಟೆಯವರೆಗಿರುವ ವಿರಾಮಕಾಲದಲ್ಲಿ ಹುಡುಗರಿಗೆ ಏನಾದರೂ ಉಪಾಹಾರ ಕೊಡೋಣವೆಂದು ಏರ್ಪಾಡು ಮಾಡಿದ್ದರು. ಅದಕ್ಕೆ ಹಿಂದೆ ಬಡ್ಜೆಟ್ಟಿನಲ್ಲಿ 75 ಸಾವಿರ ರೂಪಾಯಿ ಒದಗಿಸುತ್ತಿದ್ದರು. ಈಗ ಅದನ್ನೂ ತೆಗೆದುಹಾಕಿದ್ದಾರೆ. ಹೀಗಿರುವಾಗ ಊಟಕ್ಕೆ ಸರ್ಕಾರದವರು ಏನು ಏರ್ಪಾಡು ಮಾಡಿದ್ದಾರೋ ಗೊತ್ತಿಲ್ಲ. ಇದನ್ನು ಸಾರ್ವಜನಿಕರೇ ನೋಡಿಕೊಳ್ಳಲಿ ಎಂದು ಹೇಳುವುದಾದರೆ, ಎಲ್ಲವನ್ನೂ ಅವರೇ ಮಾಡಿಕೊಳ್ಳಲಿ ಎಂದು ಬಿಟ್ಟು ಬಿಡಲಿ. ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಬಡಜನರಿಗೆ ಸರ್ಕಾರದವರುಗಳು, ಹೆಂಚು, ಇಟ್ಟಿಗೆ ಕೊಡುತ್ತಾರೆಂದು ಹೇಳುತ್ತಾರೆ, ಅದು ಹೇಗೆ ನಡೆಯುತ್ತಿದೆಯೋ ಇದೂ ಹಾಗಾಗುತ್ತದೆ. ಹಳ್ಳಿಗಳಲ್ಲಿ ಪ್ರೈಮರಿ ಸ್ಕೂಲುಗಳನ್ನು ಬೆಳಗಿನ ಹೊತ್ತು ಮಾತ್ರ ಮಾಡಲಿ ಎಂದು ಹಿಂದಿನಿಂದಲೂ ನಾನು ಹೇಳುತ್ತಿದ್ದೇನೆ. ಎರಡು ಹೊತ್ತು ಮಾಡುವುದೆಂದರೆ, ಅದು ಸರಿಯಲ್ಲವೆನಿಸುತ್ತದೆ.

ಇನ್ನು ಜೂನಿಯರ್ ಮತ್ತು ಸೀನಿಯರ್ ಹೈಸ್ಕೂಲುಗಳೆಂದು ಮಾಡುವುದಾದರೆ, ಕಟ್ಟಡಗಳಿಗೆ ಏನು ಮಾಡುತ್ತಾರೆ? ಎಲ್ಲ ತರಗತಿಗಳನ್ನೂ ಒಂದೇ ಕಡೆ ಮಾಡುತ್ತಾರೆಯೇ ಒಂದೇ ಮಾಡುವುದಾದರೆ, ಇದುವರೆಗೆ ಮಾಡಿದ ಹಾಗೆ ಜೂನಿಯರ್ ತರಗತಿಗಳು ಮುಗಿದ ಮೇಲೆ ಸೀನಿಯರ್ ತರಗತಿಗಳನ್ನು ಅಲ್ಲೇ ಮಾಡುತ್ತಾರೆಯೆ ಅಥವಾ ಅದಕ್ಕೇ ಬೇರೆ ಊರಿಗೆ ಹೋಗಬೇಕಾಗುತ್ತದೆಯೇ ? ಜೂನಿಯರ್ ಮತ್ತು ಸೀನಿಯರ್ ಹೈಸ್ಕೂಲು ತರಗತಿಗಳನ್ನು ಒಟ್ಟಿಗೆ ನಡೆಸುವುದು ಸಾಧ್ಯವೇ ಈಗ ? ಒಂದು ವೇಳೆ ಇರುವ ಸ್ಕೂಲು ಕಟ್ಟಡಗಳಲ್ಲೇ ಮಾಡುತ್ತೇವೆಂದು ಹೇಳಬಹುದು. ಈಗ ಸುಮಾರು ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳು 37 ಇವೆ, ಮುನಿಸಿಪಲ್ ಹೈಸ್ಕೂಲುಗಳು 64 ಇವೆ, ಏಡೆಡ್ ಹೈಸ್ಕೂಲುಗಳು 66 ಇವೆ, ಸರ್ಕಾರಿ ಹೈಸ್ಕೂಲುಗಳು 40 ಇವೆ, ಒಟ್ಟು 217 ಸ್ಕೂಲುಗಳಲ್ಲಿ 40 ಮಾತ್ರ ಸರ್ಕಾರಿ ಹೈಸ್ಕೂಲುಗಳು.

ಈ 40,000 ಸ್ಕೂಲುಗಳೇನಾದರೂ ಏರ್ಪಾಡಾದರೆ ಅಥವಾ ತಾವು ಇವುಗಳನ್ನು ಮಾಡುತ್ತೀರೆಂದು ಹೇಳಿದರೂ ಕೂಡ ಇನ್ನುಳಿದ 177 ಸ್ಕೂಲುಗಳಿಗೇನು ಮಾಡುವುದು ? ಇವೊತ್ತಿನ ದಿವಸ ತಾವು ಏನು ಸರ್ಕಾರಿ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳಿಗೆ ಒಂದು ಸಂಬಳ ಕೊಡುತ್ತಿದ್ದಾರೋ ಅಷ್ಟು ಸಂಬಳವನ್ನೂ ಕೂಡ ಕೊಡುವುದಕ್ಕೆ ಈ ಮುನಿಸಿಪಲ್ ಹೈಸ್ಕೂಲುಗಳವರಿಗೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಅವರ ಪರಿಸ್ಥಿತಿ ಹಾಗಿದೆ. ಅವರು ಏನೋ ಒಂದು ಉತ್ಸಾಹದಿಂದ ಮಕ್ಕಳಿಗೆ ವಿದ್ಯಾಭ್ಯಾಸ ಸುಲಭವಾಗಿ ದೊರೆಯಲಿ ಎಂಬ ಒಂದು ಆಶಾಭರದಲ್ಲಿ ಮೊದಲು ಅವರು ಒಂದಿಷ್ಟು ಬಿಲ್ಡಿಂಗ್ ಗ್ರ್ಯಾಂಟನ್ನು ಕೊಟ್ಟಿದ್ದರಿಂದ ಈ ಸ್ಕೂಲುಗಳೆಲ್ಲಾ ಮಂಜೂರಾದವು. ಆದರೆ ಈಗ 'ಅವುಗಳ ಬಡಾವಣೆಯನ್ನೂ ನೀವೇ ಮಾಡಿಕೊಳ್ಳಬೇಕು. ಅವುಗಳಿಗೆ ಬೇಕಾದ ಸಲಕರಣೆಗಳನ್ನೂ ನೀವೆ ಒದಗಿಸಿಕೊಳ್ಳಬೇಕು, ಎಂದು ಹೇಳಿದರೆ ಈ ವಿದ್ಯಾಭ್ಯಾಸ ಆಗುತ್ತದೆಯೇನು ? ಇದನ್ನು ಸ್ವಲ್ಪ ತಾವು ಆಲೋಚಿಸಿ ನೋಡಬೇಕು. ಇದು ಒಂದೇ ಅಲ್ಲ.

(ಶ್ರೀ ವಿ. ವೆಂಕಟಪ್ಪ.)

ಇನ್ನೂ ಅನೇಕ ವಿಷಯಗಳಲ್ಲಿ ಇದನ್ನು ಜಾರಿಗೆ ತರ ತಕ್ಕ ವಿಷಯದಲ್ಲಿ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ತೊಂದರೆಗಳು ಕಾಣಿಸುತ್ತಿವೆ. ಈಗ ತಾವು ಈ ಯೂನಿ ವರ್ಸಿಟಿ ಮತ್ತು ಇಂಟರ್ ಕಾಲೇಜುಗಳನ್ನು ಹೈಸ್ಕೂಲಿಗೆ ಸೇರಿಸುವುದು ಸರಿಯೇ, ಅಲ್ಲವೇ ಎಂಬುದರ ಬಗ್ಗೆ ಅನೇಕರು ಈಗಾಗಲೇ ಬಹಳವಾಗಿ ವಾದಗಳನ್ನು ಮಾಡಿದ್ದಾರೆ. ಇನ್ನು ಕೆಲವು ಸ್ನೇಹಿತರು ಉಪಾಧ್ಯಾಯರಿಗೆ ಸರಿಯಾಗಿ ಸಂಬಳಗಳನ್ನು ಕೊಡಬೇಕೆಂದು ಶ್ರೀ ಪಿ. ಆರ್. ರಾಮಯ್ಯನವರೇ ಮುಂತಾಗಿ ಅನೇಕರು ತಿಳಿಸಿದ್ದಾರೆ. ಆದರೆ ಈ ಸಮಿತಿಯವರು ಈ ವಿಷಯಗಳನ್ನೆಲ್ಲಾ ಗಮನಿಸಿಲ್ಲವೆಂದು ನಾನು ಹೇಳುತ್ತಿಲ್ಲ. ಈ ವಿಷಯಗಳನ್ನೆಲ್ಲಾ ಅವರೂ ಕೂಡ ಪರಿಶೀಲನೆ ಮಾಡಿದ್ದಾರೆ. ಈಗ ಇರುವುದಕ್ಕಿಂತಲೂ ಉತ್ತಮ ರೀತಿಯಲ್ಲಿ 50 ರೂಪಾಯಿಗಳಿಂದ ಪ್ರಾರಂಭ ಮಾಡಿ 100-150 ರೂಪಾಯಿಗಳವರೆಗೂ ಇವರ ಸಂಬಳ ಹೋಗುವಂತೆ ಇರಬೇಕೆಂದು ಸಲಹೆ ಮಾಡಿದ್ದಾರೆ. ಇದನ್ನು ಜಾರಿಗೆ ತರುವುದಾದರೆ ನನಗೂ ಬಹಳ ಸಂತೋಷ. ಇದಕ್ಕಿಂತಲೂ ಹೆಚ್ಚಿನ ಸಂಬಳ ಕೊಡಬೇಕೆಂಬ ಆಸೆ ನಮಗೆಲ್ಲರಿಗೂ ಇದೆ. ಆದರೆ ಹಾಗೆ ಕೊಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಆದರೆ ನಾನು ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ, ಹಾಗೆ ಹೇಳುವುದರಿಂದ ಈ ಉಪಾಧ್ಯಾಯರಿಗೆ ಕೊಡತಕ್ಕ ಸಂಬಳದ ವಿಚಾರವಾಗಿ ನನಗೊಂದು ಅಸೂಯೆಯಿದೆಯೆಂದೂ, ಅದಕ್ಕೋಸ್ಕರವಾಗಿ ಹೀಗೆಲ್ಲಾ ಹೇಳುತ್ತಿದ್ದಾನೆಂದೂ ದಯವಿಟ್ಟು ಯಾರೂ ಭಾವಿಸಬಾರದು. ಹಿಂದೆ ಮೈಸೂರು ರೆಪ್ರೆಸೆಂಟಿವ್ ಅಸೆಂಬ್ಲಿಯಿದ್ದಾಗ ಈ ಉಪಾಧ್ಯಾಯರುಗಳಿಗೆ 15 ರೂ. ಕೊಡುವುದು ಧರ್ಮವಲ್ಲ. ಅವರಿಗೆಲ್ಲಾ ಕನಿಷ್ಠಪಕ್ಷ 25 ರೂ. ಗಳ ಸಂಬಳವನ್ನಾದರೂ ಕೊಡಲೇಬೇಕೆಂದು ಅಸೆಂಬ್ಲಿಯಲ್ಲಿ ಒಂದು ನಿರ್ಣಯವನ್ನೇ ತಂದು ಅದನ್ನು ಅಲ್ಲಿ ಪಾಸ್ ಮಾಡಿಸಿದಂಥವನು ನಾನು. ಆಗ ಸರ್ಕಾರದವರು ನನ್ನ ನಿರ್ಣಯದಲ್ಲಿ ಸೂಚಿಸಿದಂತೆಯೇ ಅದನ್ನು ಒಪ್ಪಿಕೊಂಡು ಕೆಲವು ಕಾಲದವರೆಗಾದರೂ ಇವರಿಗೆ 25 ರೂ. ಗಳಂತೆ ಸಂಬಳ ಕೊಟ್ಟು ಅನಂತರ ಅದನ್ನು ಏನೋ ಕಾರಣದಿಂದ ಮನ್ನಾ ಮಾಡಿದರು. ಆದುದರಿಂದ ಅವರ ವಿಷಯದಲ್ಲಿ ನನಗೆ ಕನಿಕರವಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಈ ಸಮಿತಿಯವರು ಹೇಳಿರುವ ಹಾಗೆ ಸರಿಯಾದ ಉಪಾಧ್ಯಾಯರುಗಳು ನಮಗೆ ಸರಿಯಾಗಿ ಸಿಕ್ಕದೆ ಹೋದಪಕ್ಷಕ್ಕೆ ನಾವು ಏನೇ ಸ್ಕೀಮು ಹಾಕಿದರೂ ಅದರಿಂದೇನೂ ಆಗುವುದಿಲ್ಲ. ಸರಿಯಾದ ಉಪಾಧ್ಯಾಯರು ಬರಲೇಬೇಕು. ಅವರಿಗೆ ಸರಿಯಾದ ಸಂಬಳಗಳು ದೊರೆಯಲೇಬೇಕು. ಇದರಲ್ಲಿ ನನ್ನ ಭಿನ್ನಾಭಿಪ್ರಾಯವೇನೂ ಇಲ್ಲ. ಆದರೆ ಈಗ ಅವರಿಗೆ ಕೊಡುತ್ತಿರುವ 50 ರೂ. ಗಳ ಸಂಬಳವೂ ಕಡಮೆಯೇ ಆಯಿತೆಂದರೆ, ನಾನು ಹಾಗೆ ಅದನ್ನು ಕಡಮೆಯೆಂದು ಒಪ್ಪಿಕೊಳ್ಳುವ ಸ್ಥಿತಿಯಲಿಲ್ಲ. ಏಕೆಂದರೆ, ಈಗ ನಾವು ಉಪಾಧ್ಯಾಯರಿಗೆ ಕೊಡುತ್ತಿರುವಂಥ ಸಂಬಳ ದೇಶದಲ್ಲಿರುವ ಜನರ ಉತ್ಪತ್ತಿಯೇನಿದೆಯೋ ಅದಕ್ಕನುಗುಣವಾಗಿರಬೇಕು ಎಂಬ ಒಂದು ಆಧಾರದ ಮೇಲೆ ನಿಂತಿದೆ. ಈಗ ಇದರಂತೆ ಎಷ್ಟು ಜನ ಹಾಲಿ 50 ರೂಪಾಯಿಗಳ ಸಂಪಾದನೆಯ ಮೇಲೆ ಜೀವನ ನಡೆಸುತ್ತಿಲ್ಲ? ಇಂಥವರು ಎಷ್ಟು ಮಂದಿಇಲ್ಲ? ಇವರೆಲ್ಲಾ ಜೀವನ ನಡೆಸುತ್ತಿಲ್ಲವೇನು? ನಮ್ಮ ಎಕನಾಮಿಕ್ ಕಂಡೀಷನ್‌ಗಳು ಎಲ್ಲಿಯತನಕ ಉತ್ತಮವಾಗುವುದಿಲ್ಲವೋ ಅಲ್ಲಿಯ ತನಕವೂ ನಾವು ಸ್ವಲ್ಪ ಕಷ್ಟಪಟ್ಟು ಜೀವನ ನಡೆಸಿಕೊಂಡು ಹೋಗಬೇಕಾಗಿದೆ. 15 ರೂಪಾಯಿಗಳಿದ್ದ ಸಂಬಳ ಈ ದಿವಸ 50 ರೂಪಾಯಿಗಳಾಯಿತೆಂದರೆ, ಇದು ಸುಮಾರು 3ರಷ್ಟಕ್ಕಿಂತಲೂ ಹೆಚ್ಚಾಯಿತು. ಇಷ್ಟನ್ನೇನೋ ಸರ್ಕಾರದವರು ಅಗತ್ಯವಾಗಿ ಕೊಡಲೇಬೇಕು. ಈ ಉಪಾಧ್ಯಾಯರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ—ಈ ಸಮಿತಿಯವರು ಹೇಳಿದ್ದಾರೆ—ನಾವು ಅನುಸರಿಸುತ್ತಿರುವ ನೀತಿಯಿಂದ ನಮ್ಮ ವಿದ್ಯಾಭ್ಯಾಸಕ್ಕೆ ಬಹಳ ಮಟ್ಟಿಗೆ ಧಕ್ಕೆ ಬಂದಿದೆಯೆಂದು—ಆದ್ದರಿಂದ ಸರಿಯಾದ ಯೋಗ್ಯತೆಯಿರುವಂಥ ಉಪಾಧ್ಯಾಯರನ್ನು ನೇಮಕಮಾಡಿಕೊಳ್ಳದೆ ಹೋದ ಪಕ್ಷಕ್ಕೆ ನಾವು ಎಷ್ಟೇ ಹಣವನ್ನು ಈ ವಿದ್ಯಾಭ್ಯಾಸಕ್ಕೆ ಖರ್ಚುಮಾಡಿದರೂ ಅದರಿಂದಲೇನೂ ಪ್ರಯೋಜನವಾಗಲಾರದು ಎಂಬ ವಿಷಯ ಎಲ್ಲರಿಗೂ ಗೊತ್ತಿರತಕ್ಕಂಥಾದ್ದೆ ಆಗಿದೆ.

ಶ್ರೀ ಸಿ. ಆರ್. ರೆಡ್ಡಿಯವರು ಈ ವಿಚಾರದಲ್ಲಿ—ಅವರೇ ಈ ವಿಷಯಗಳಲ್ಲಿ ಮೂಲ ಪುರುಷರೆಂದರೂ ಅದು ತಪ್ಪಾಗಲಾರದು. ಬ್ರಾಹ್ಮಣ, ಬ್ರಾಹ್ಮಣೇತರ, ಹಿಂದುಳಿದಿರತಕ್ಕವರು, ಮುಂದುವರಿದ ಪಂಗಡದವರು ಎಂಬುದಾಗಿ ವಿಂಗಡಿಸಿ, ಹಿಂದುಳಿದವರಿಗೆ ಸಾಕಷ್ಟು ಉತ್ತೇಜನ ಮತ್ತು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೋಡೆದಾಡಿದವರಲ್ಲಿ ಅವರೇ ಮೊದಲನೆಯವರು—ಅವರು ಉಪಾಧ್ಯಾಯರನ್ನು ಚುನಾವಣೆ ಮಾಡುವಾಗ ಬಹಳ ಉತ್ತಮವಾದವರು ಯಾರೋ ಅಂಥವರನ್ನೇ ಉಪಾಧ್ಯಾಯ ವೃತ್ತಿಗೆ ನೇಮಕಮಾಡಿದ್ದರು, ಅವರು ನಿಜವಾಗಿಯೂ ದೇಶದಲ್ಲಿ ಒಂದು ಅತ್ಯುತ್ತಮವಾದ ಕೆಲಸಮಾಡಿದ್ದಾರೆಂದರೆ ಅದರಲ್ಲೇನೂ ಅತಿಶಯೋಕ್ತಿಯಿರಲಾರದು. ಆದರೆ ಈಗ ನಮ್ಮಲ್ಲಿ ಅಂಥ ಪಾಠ ಹೇಳಿಕೊಡುವ ಯೋಗ್ಯತೆಯಿರುವ ಜನರು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅಂಥವರೂ ಇದ್ದಾರೆ, ಮತ್ತೆ ಕೆಲವರು ಡಿಕ್ಟೇಷನ್ ಸಹ ಸರಿಯಾಗಿ ಬರೆಯಲು ಬಾರದಂಥ ಉಪಾಧ್ಯಾಯರೂ ಇದ್ದಾರೆ, ಹೀಗೆ ಹೇಳುತ್ತಿದ್ದಾನೆಂದು ತಾವು ಯಾರೂ ಕೋಪ ಮಾಡಿಕೊಳ್ಳಬಾರದು. S. S. L. C. ಪಾಸ್ ಮಾಡಿದಂಥ ಕೆಲವರು ಉಪಾಧ್ಯಾಯರಿದ್ದಾರೆ. ಅವರನ್ನು ಬೇಕಾದರೆ ತೋರಿಸುತ್ತೇನೆ. ತಾವೇ ಅವರನ್ನು ನೋಡಿ. ಅವರಿಗೆ ಕನ್ನಡ ಡಿಕ್ಟೇಷನ್ ಸಹ ಸರಿಯಾಗಿ ಬರೆಯುವುದಕ್ಕೆ ಬರುವುದಿಲ್ಲ. ಆದುದರಿಂದ ನಾವು ಈ ಉಪಾಧ್ಯಾಯರನ್ನು ಚುನಾವಣೆ ಮಾಡುವಾಗ ನೋಡಿ ಸರಿಯಾದವರನ್ನು ಮಾತ್ರ ಚುನಾವಣೆ ಮಾಡಬೇಕು. ಹಾಗೆ ಮಾಡಿದ ಪಕ್ಷದಲ್ಲಿ ನಾವು ಒಂದು ಹೆಚ್ಚಿನ ಹಣವನ್ನು ಈ ಬಾಬಿಗೆ ಖರ್ಚು ಮಾಡಿದ್ದು ಸಾರ್ಥಕವಾಗುತ್ತದೆ. ಆದುದರಿಂದ ನಾವೀಗ ಸರಿಯಾದ ಉಪಾಧ್ಯಾಯರನ್ನು ಹುಡುಕುವುದಕ್ಕೆ ಒಂದು ಸರಿಯಾದ ದಾರಿಯನ್ನು ಕಂಡು ಹಿಡಿಯಬೇಕಾಗಿದೆ. ಹಾಗೆ ಮಾಡದೆ ಎಲ್ಲಿಯೂ ಕೆಲಸ ಸಿಕ್ಕದೆ, ಎಷ್ಟು ದಿವಸ ತಳ್ಳಿಹೋದರೆ ಅಷ್ಟೇ ದಿವಸ ಸಾಕು, ಅಲ್ಲಿಯ ತನಕ ನಮಗೊಂದು ಸಂಬಳಕ್ಕೆ ದಾರಿಯಾಯಿತು. ಅನ್ನುವ ಮನೋಭಾವ ಇರುವವರಿಗೆ ಈ ಕೆಲಸವನ್ನು ಕೊಡದೆ ಯಾರಿಗೆ ಈ ಕೆಲಸದಲ್ಲಿ ಒಂದು ಹೆಚ್ಚಿನ ಆಸಕ್ತಿಯಿರುತ್ತದೆಯೋ ಅಂಥವರಿಗೆ ಮಾತ್ರವೇ ಕೊಡಬೇಕು. ಇದೊಂದು ಹೊಟ್ಟೆಪಾಡಿಗಾಗಿ ಮಾಡುವಂಥ ಕೆಲಸವಲ್ಲ. ಯಾರಿಗೆ ನಿಜವಾಗಿ ಇದರಿಂದ ಒಂದು ದೇಶಸೇವೆ ಮಾಡಬೇಕೆಂಬ ಆಕಾಂಕ್ಷೆಯಿರುತ್ತದೆಯೋ ಯಾರಿಗೆ ಇದರಲ್ಲಿ ಒಂದು ಆಸೆ, ನಿಜವಾದ ಆಕಾಂಕ್ಷೆಗಳಿರುತ್ತವೆಯೋ

ಅಂಥ ಮನಸ್ಸುಳ್ಳವರನ್ನು ಈ ಉಪಾಧ್ಯಾಯರ ಕೆಲಸಕ್ಕೆ ನೇಮಿಸಬೇಕು. ಹೀಗೆ ಮಾಡಿದರೆ ಇದರಿಂದ ನಿಜವಾಗಿಯೂ ದೇಶಕ್ಕೆ ಬಹುಮಟ್ಟಿಗೆ ಪ್ರಯೋಜನವಾಗುತ್ತೆಂದು ನಾನು ನಂಬಿದ್ದೇನೆ, ಆದರೆ ಈ ಸಮಿತಿಯವರು ಅವರ ಈ ಒಂದು ಆಸೆ ನೆರವೇರುವುದಕ್ಕಾಗಿ ಒಂದು ಸೂಚನೆ ಮಾಡಿದ್ದಾರೆ—ಅವರೆ ಅಷ್ಟನ್ನು ಮಾಡಿದರೆ ಅದರಿಂದಲೇ ಇದೆಲ್ಲವೂ ಸರಿಹೋಗುತ್ತದೇನು ? ಹಾಗೆಲ್ಲಾ ಮಾಡುವುದಕ್ಕೆ ಸಾಧ್ಯವಾದರೂ ಇದೆಯೇನು ? ನನಗಂತೂ ಈ ವಿಚಾರಗಳಲ್ಲಿ ಬಹುಮಟ್ಟಿಗೆ ಅನುಮಾನಗಳಿವೆ. ಆ ಸಮಿತಿಯವರು ಈಗ ಈ ವ್ಯವಸಾಯ ಮತ್ತು ಇನ್ನೂ ಯಾವ ಯಾವ ಈ ಕ್ರಾಫ್ಟ್ಸ್‌ಗಳನ್ನು ನಮೂದು ಮಾಡಿದ್ದಾರೆಯೋ ಅವುಗಳೆಲ್ಲವನ್ನೂ ಜಾರಿಗೆತರುವುದಕ್ಕೆ ಸಾಧ್ಯವಿದೆಯೆಂದು ಯಾರಾದರೂ ನಂಬಿಕೊಂಡಿದ್ದರೆ ಅದು ನನಗಂತೂ ಅರ್ಥವಾಗದ ವಿಷಯ. ಒಬ್ಬ ಉಪಾಧ್ಯಾಯರಿಗೆ ಅರ್ಧ ಎಕರೆ ಜಮೀನಿರಬೇಕೆಂದು ಹೇಳಿದ್ದಾರೆ, ಹಾಗೆ ಒಂದು ಸ್ಕೂಲಿನಲ್ಲಿ 4 ಜನ ಉಪಾಧ್ಯಾಯರಿದ್ದರೆ 2 ಎಕರೆ ಜಮೀನಿರಬೇಕೆಂದು ಹೇಳಿದ್ದಾರೆ. ಹಾಗೆ ಆ ಎರಡು ಎಕರೆ ಜಮೀನಿದ್ದರೆ ಅದರಲ್ಲಿ ಅವರು ಏನು ಮಾಡುತ್ತಾರೆ ? ಅವರು ಅದರಲ್ಲಿ ವ್ಯವಸಾಯ ಮಾಡುತ್ತಾರೆಯೆ? ಏನು ಈ ಪ್ರಾಥಮಿಕ ಶಾಲೆಗೆ ಬರತಕ್ಕಂಥ ಹುಡುಗರಿಂದ ವ್ಯವಸಾಯ ಮಾಡಿಸಲು ಸಾಧ್ಯವಿದೆಯೆ ? ಅಥವಾ ಈಗಾಗಲೇ ನಮ್ಮ ಸ್ನೇಹಿತರು ಹೇಳಿದಂತೆ, ಆ ಎರಡು ಎಕರೆ ಜಮೀನಿನಲ್ಲೂ ಕೀರೆಸೊಪ್ಪು—ಇತ್ಯಾದಿ ತರಕಾರಿಗಳನ್ನು ಬೆಳೆಸಬೇಕೆಂಬ ಉದ್ದೇಶವನ್ನೇನಾದರೂ ಇಟ್ಟುಕೊಂಡಿದ್ದಾರೆಯೇ ? ಒಂದು ವೇಳೆ ಅದನ್ನಾದರೂ ಮಾಡಿಸುವುದಕ್ಕೆ ಅವರಿಗೆ ಶಕ್ತಿ ಇದ್ದಿದ್ದರೂ ಅವರಿಗೆ ಸಲಕರಣೆಗಳು, ಎತ್ತು ಇತ್ಯಾದಿಗಳೆಲ್ಲ ಎಲ್ಲಿವೆ ? ಹಾಗೆ 2 ಎಕರೆ ಭೂಮಿಯನ್ನೂ ಎತ್ತುಗಳಿಲ್ಲದೆ ಉಳುವುದಕ್ಕೆ ಸಾಧ್ಯವಿದೆಯೇ ? ಅಥವಾ ಈ ಎರಡು ಎಕರೆ ಜಮೀನನ್ನೂ ಹುಡುಗರ ಕೈಯಿಂದಲೇ ಗುದ್ದಲಿಯಿಂದಲೇ ಅಗೆಸಿ ಕೆಲಸಮಾಡಿಸಲು ಸಾಧ್ಯವಿದೆಯೇ ? ಇತ್ಯಾದಿ ವಿಚಾರಗಳಾವುದನ್ನೂ ಅವರು ಸ್ಪಷ್ಟವಾಗಿ ಹೇಳಿರುವುದಿಲ್ಲ. ಆದುದರಿಂದ ನನಗೆ ಏನೊಂದು ಅನಿಸುತ್ತದೆಯೆಂದರೆ, ಕೆಲವು ಜನರನ್ನ ಈ ತರಹೆ ಕೈಗಾರಿಕೆಗಳಲ್ಲಿ ತರಪೇತು ಮಾಡಬೇಕು ಎನ್ನುವ ಆಸೆ ತಮಗೆ ಇದ್ದದ್ದೇ ಆದರೆ ಆಗ ಇದಕ್ಕಾಗಿ ತಾವು ರೆಸಿಡೆನ್ಷಿಯಲ್ ಸ್ಕೂಲುಗಳನ್ನು ತೆರೆಯಬೇಕಾಗುತ್ತದೆ. ನೂರಾರು ಎಕರೆ ಜಮೀನಿರುವ ಕಡೆ ಉಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳೂ ಒಟ್ಟಾಗಿ ಒಂದೇ ಕಡೆ ಸೇರಿ 100-200 ಜನರು ವಾಸಿಸಲು ಅನುಕೂಲವಾಗಿ ಗುಡಿಸಲು ಇತ್ಯಾದಿಗಳನ್ನು ಕಟ್ಟಿಸಿಕೊಡಿ. ಹೀಗೆ ಎಲ್ಲರೂ ಒಂದು ಕಡೆ ನಿಲ್ಲಲು ಒಂದು ಅವಕಾಶ ಉಂಟುಮಾಡಿಕೊಡಿ. ಅವರಿಂದ ಇದನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಾದೀತು. ಈಗ ಈ ರೀತಿಯಾದ ಅನುಕೂಲಗಳನ್ನು ಕೆಡವುಕಡೆ ಕಲ್ಪಿಸಿರತಕ್ಕದ್ದನ್ನು ನಾವು ಕೇಳಿಯೂ ಇದ್ದೇವೆ ಮತ್ತು ಈಗ ಮದ್ರಾಸಿನಲ್ಲಿ ಗಿಂಡಿ ಎಂಬಲ್ಲಿ ಬಂದು ಕಡೆ ಇಂಥ ಒಂದು ಸ್ಕೂಲನ್ನು ಡಾ॥ ಅನಿಬೆಸೆಂಟ್‌ರವರು ಸ್ಥಾಪನೆ ಮಾಡಿರತಕ್ಕದ್ದನ್ನೂ ನೋಡಿದ್ದೇವೆ. ಅಲ್ಲಿ ತಡಿಕೆ, ಚಾಪೆ ಇತ್ಯಾದಿಗಳಿಂದಲೇ ಮನೆಗಳನ್ನು ಕಟ್ಟಿಸಿ, ಅಲ್ಲಿ ಈಗ ಈ ಒಂದು ಕಾಲೇಜನ್ನು ನಡೆಸುತ್ತಿದ್ದಾರೆ. ಅಲ್ಲಿ ಈಗ ಉಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳು ಎಲ್ಲರೂ ಒಟ್ಟಾಗಿಯೇ ವಾಸಮಾಡಿಕೊಂಡಿರುತ್ತಾರೆ. ತಾವು ಸಹ ಅದೇ ರೀತಿಯಾಗಿ ಇಲ್ಲಿಯೂ ಮಾಡಿದರೆ ಇದು ಸಾಧ್ಯವಾಗಬಹುದು. ಆಗ ತಾವೇನು ಈ ವಿದ್ಯಾರ್ಥಿಗಳಿಗೆ ಇಂಥ ಒಂದು ತರಪೇತನ್ನು ಕೊಡಬೇಕೆಂದು ಆಶಿಸಿದ್ದೀರೋ ಆ ಆಸೆ ನೇರವೇರುತ್ತದೆ. ಇದಕ್ಕೆ ಖರ್ಚು ಸಹ ಅಷ್ಟು ಬೇಕಾಗುವುದಿಲ್ಲವೆಂದು ಕಾಣುತ್ತದೆ. ಜಮೀನಿರುವ ಕಡೆ ಬೇಕಾದ ಹಾಗೆ ನಾವು ಇದರಿಂದ ಉತ್ಪತ್ತಿಯನ್ನು ಹೊಂದಬಹುದು. ಅದಕ್ಕೆಲ್ಲಾ ಸಾಧ್ಯವಿರುತ್ತದೆ. ವಾಷಿಂಗ್‌ಟನ್‌ರವರೂ ಕೂಡ ಇಂಥ ರೆಸಿಡೆನ್ಷಿಯಲ್ ಸ್ಕೂಲಿನಲ್ಲಿ ಯಾವ ರೀತಿಯಾಗಿ ವಿದ್ಯಾಭ್ಯಾಸ ಮಾಡಿದರು, ಅನಂತರ ಅವರು ಯಾವ ರೀತಿಯಾಗಿ ವಿದ್ಯಾಭ್ಯಾಸ ಮಾಡಿಸಿದರು ಎಂಬುದನ್ನು ಕೆಲವರಾದರೂ ಓದಿ ತಿಳಿದುಕೊಂಡಿದ್ದೇವೆ. ಇಂಥ ಸ್ಕೂಲುಗಳು ಒಂದೆರಡನ್ನಾದರೂ ಏರ್ಪಾಡು ಮಾಡಿದರೆ ಅಲ್ಲಿಂದ ಬರತಕ್ಕ ಯುವಕರು ಈ ಎಲ್ಲಾ ಬಾಬಿನಲ್ಲೂ ತರಪೇತಾಗಿ ಬರಲು ಸಾಧ್ಯವಾಗುತ್ತದೆ. ಅಗ್ರಿಕಲ್ಚರಲ್ ಸ್ಕೂಲುಗಳಲ್ಲಿ ಅನೇಕರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೆ ಅಲ್ಲಿ ಓದಿದವರಿಗೂ ಹೆಚ್ಚು ಅರ್ಹತೆಯಿದೆಯೆಂಬ ಭಾವನೆ ನಮ್ಮಲ್ಲಿಲ್ಲ, ನಮ್ಮ ಅಗ್ರಿಕಲ್ಚರಲ್ ಕಾಲೇಜು ಮುಚ್ಚುವ ಸ್ಥಿತಿಯಲ್ಲಿತ್ತು. ಸರ್ಕಾರದವರು ಆ ರೀತಿಯಾಗಿ ಯೋಚನೆ ಮಾಡಿದ್ದರು. ವ್ಯವಸಾಯದ ಸ್ಕೂಲು, ಕಾಲೇಜುಗಳಲ್ಲಿ ಓದಿ ಪರಿಣತರಾದವರು ಎಲ್ಲಾ ಕೆಲಸಗಳನ್ನೂ ಮಾಡಬಲ್ಲರು, ಎಲ್ಲಾ ಅನುಭವಗಳನ್ನೂ ಪಡೆಯುತ್ತಾರೆ, ಇತರರಿಗಿಂತ ಉತ್ತಮ, ಅಮಲ್ದಾರರಾಗುವುದಕ್ಕೆ, ಸ್ಕೂಲು ಉಪಾಧ್ಯಾಯರಾಗುವುದಕ್ಕೆ ಹೇಗೆ ಎಲ್ಲಾ ಕೆಲಸಗಳಿಗೂ ಅರ್ಹರು ಎಂಬ ಮನೋಭಾವ ಬರುವುದಾದರೆ ಅಂಥಕಡೆ ಇದ್ದೂ ತರಪೇತು ಪಡೆಯುವುದರಿಂದ ಪ್ರಯೋಜನವಾಗುತ್ತದೆ. ಅಲ್ಲಿ ಉಪಾಧ್ಯಾಯರು ಯಾವಾಗಲೂ ವಿದ್ಯಾರ್ಥಿಗಳ ಜೊತೆಯಲ್ಲೇ ಇರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳ ನಡೆನುಡಿ ವೊದಲಾದುವುಗಳನ್ನೆಲ್ಲಾ ತಿದ್ದುವುದಕ್ಕೆ ಹೆಚ್ಚು ಅವಕಾಶವಾಗುತ್ತದೆ. ಶ್ರೀ ಮಾಸ್ಕರನ್‌ಹ್ಯಾಸ್‌ರವರು ಹೇಳಿದ ಹಾಗೆ, ಈ ದಿವಸ ಸಾಮಾನ್ಯವಾಗಿ ನಮ್ಮ ಹುಡಗರಲ್ಲಿ ಡಿಸಿಪ್ಲಿನ್ ಇಲ್ಲದೆ ಬಹಳ ಕೆಟ್ಟು ಹೋಗಿದ್ದಾರೆ, ಬಹಳ ಮಟ್ಟಿಗೆ ನಮ್ಮ ವಿದ್ಯಾಭ್ಯಾಸವ ರೀತಿ ನೀತಿ ತಳಮಟ್ಟಕ್ಕೆ ಬಂದಿದೆ ಎಂಬ ಭಾವನೆ ಹೋಗಿ ಅವರ ನೈತಿಕ ಮಟ್ಟ ಉತ್ತಮಸ್ಥಿತಿಗೆ ಬರಬೇಕಾದರೆ ಅವರು ಸರಿಯಾದ ಉಪಾಧ್ಯಾಯರ ಜೊತೆಯಲ್ಲೇ ಕೆಲವುಕಾಲವಾದರೂ ಇರಬೇಕಾಗುತ್ತದೆ. ಹಾಗಿದ್ದರೆ ಹುಡುಗರ ಗುಣ, ನಡತೆ, ನುಡಿ ಇವೆಲ್ಲವೂ ತಮ್ಮಷ್ಟಕ್ಕೆ ತಾವೇ ಬದಲಾವಣೆಯಾಗುವುದಕ್ಕೆ ಸಾಧ್ಯವಾಗುತ್ತದೆ. ಈ ಹೊತ್ತಿನ ದಿನ ನೋಡಿದರೆ, ಒಂದೊಂದು ಸೆಕ್ಷನ್ನಲ್ಲೂ 60-70 ಜನ ವಿದಾರ್ಥಿಗಳಿರುತ್ತಾರೆ. ಯಾರು ಯಾರು ಎಂಬುದೇ ಉಪಾಧ್ಯಾಯರಿಗೆ ಗೊತ್ತಾಗುವುದಿಲ್ಲ. ಅವರು ಪರ್ಸನಲ್ಲಾಗಿ ಅಟೆನ್ಷನ್‌ಕೊಟ್ಟು ಏನು ಹುಡಗ ಏಕೆ ಹೀಗಿದ್ದಾನೆ, ಎಂದು ನೋಡುವುದಕ್ಕೇ ಅವಕಾಶವಿಲ್ಲ. ಈ ಅವಕಾಶವಾಗಬೇಕಾದರೆ ಈಗಿರುವ ಸ್ಕೂಲುಗಳಲ್ಲೂ ಕೂಡ ಒಂದು ತರಗತಿಗೆ 45 ಹುಡುಗರಿಗಿಂತ ಅಥವ ಒಂದು ಸಂಖ್ಯೆಗಿಂತ ಹೆಚ್ಚಾಗಿ ಇಲ್ಲದಂತೆ ಇರಬೇಕಾದ್ದೂ ಅಗತ್ಯ. ಇಷ್ಟಾದರೂ ಮಾಡದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ರೆಸಿಡೆನ್ಷಿಯಲ್ ಸ್ಕೂಲ್ಸ್ ಎಂದೇನಿವೆಯೋ ಅಂಥವುಗಳನ್ನು ಕೆಲವನ್ನಾದರೂ ಸ್ಥಾಪಿಸಿದರೆ ಹುಡುಗರನ್ನು, ಯುವಕರನ್ನು ವಿದ್ಯಾವಂತರಾಗಿಯೂ, ಶಕ್ತಿವಂತರಾಗಿಯೂ ಮಾಡಬಹುದು ಎಂದೇನು ಯೋಚನೆ ಮಾಡಿದ್ದೀರೋ ಆ ಯೋಚನೆ ಸ್ವಲ್ಪ ಮಟ್ಟಿಗಾದರೂ ಕಾರ್ಯಗತ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Now the House will rise for lunch and meet at 3-30.

The House adjourned for Lunch at Three Minutes past Three of the Clock and reassembled at Thirty Minutes past Three of the Clock.

[MR. SPEAKER in the Chair.]

Sri S. SRINIVASA IYENGAR (T.-Narsipur).—Mr. Speaker, thank you very much for having given me an opportunity to speak on education reforms. At the outset, I wish to congratulate the Committee for their excellent work in the shortest possible period. At the same time I wish to point out.......

ಶ್ರೀ ಟಿ. ಎಣ್. ಮೂಡಲಗಿರಿಗೌಡ (ಕುಣಿಗಲ್).—ದಯವಿಟ್ಟು ಕನ್ನಡದಲ್ಲಿ ಮಾತನಾಡಿ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸ್ವಾಮಿ, ಈ ವಿದ್ಯಾಭ್ಯಾಸದ ಸುಧಾರಣಾ ಸಮಿತಿಯವರು ಮಾಡಿರತಕ್ಕಂಥ ವರದಿಯನ್ನು ಸ್ವಾಗತಿಸುತ್ತೇನೆ. ಈ ವರದಿಯನ್ನು ಮಾಡತಕ್ಕಂಥ ಕಾಲದಲ್ಲಿ ಸರ್ಕಾರದವರು ಹೇಳಿದ್ದಂಥ ಒಂದು ವಿಷಯವನ್ನು ಈ ಸಮಿತಿಯವರು ಮರೆತುಬಿಟ್ಟಿದ್ದಾರೆಂದು ನನಗನ್ನಿಸುತ್ತದೆ. ಸರ್ಕಾರದವರು ಅವರ ಆರ್ಡರಿನಲ್ಲಿ ಹೇಳಿರುವುದು ಹೀಗಿದೆ.

> "......Government consider it immediately necessary to have a clear-cut and practical programme of action for the period of, say, the next 10 years from now, which programme ought to be capable of implementation within the financial resources of the State, and should be so designed as to suit local needs, aspirations and potentialities."

ಈ ರೀತಿಯಾಗಿ ಹೇಳಿರುವಂತೆ, ಆಯಾ ತಾಲ್ಲೂಕಿಗೆ ಅಥವಾ ಸ್ಥಳಕ್ಕೆ ಅನ್ವಯವಾಗುವ ಒಂದು ಸುಧಾರಣೆ ಮಾಡಬೇಕೆಂಬುದಕ್ಕೆ ಗಮನಕೊಟ್ಟು ಸಂಪೂರ್ಣವಾಗಿ ಈ ವರದಿಯಲ್ಲಿ ಹೇಳಿರುವುದನ್ನು ಆಚರಣೆಗೆ ತಂದರೆ ಇಲ್ಲಿರುವ ಆರ್ಥಿಕಪರಿಸ್ಥಿತಿಯಲ್ಲಿ ಸಾಧ್ಯವಾಗುತ್ತದೆಯೆ, ಸಮರ್ಪಕವಾಗಿ ನಡೆಯಬಹುದೇ ಎಂಬುದನ್ನು ಸಮಿತಿಯವರು ಸ್ವಲ್ಪ ಮರೆತಿದ್ದಾರೆಂದು ಕಾಣುತ್ತದೆ. ಆದರೂ ಸಹ ನಾವು ಈ ಸಮಿತಿ ಕೊಟ್ಟಿರತಕ್ಕಂಥ ವರದಿಯ ವಿಚಾರದಲ್ಲಿ ಯಾವ ವಿಧವಾದ ನಿರಾಶಾ ಭಾವನೆಯನ್ನೂ ಇಟ್ಟುಕೊಳ್ಳಬಾರದು ಏಕೆಂದರೆ ಸಮಿತಿ ಶಿಫಾರ್ಸು ಬಹಳ ಗಮನಾರ್ಹವಾದುದು. ಸಂಸ್ಥಾನದ ಕರ್ತವ್ಯ ಪ್ರತಿಯೊಬ್ಬ ಪ್ರಜೆಗೂ, ವಿದ್ಯೆಯನ್ನು ಹೊಂದುವ ಅರ್ಹತೆಯುಳ್ಳ ಪ್ರತಿಯೊಬ್ಬ ಬಾಲಕ ಬಾಲಕಿಯರಿಗೂ 14ನೆಯ ವರ್ಷದ ತನಕ ವಿದ್ಯಾಭ್ಯಾಸ ಕೊಡಬೇಕಾದದ್ದು, ಅದನ್ನು ಕಡ್ಡಾಯವಾಗಿಯೂ, ಮುಫತ್ತಾಗಿಯೂ ಒದಗಿಸಬೇಕು ಎಂಬ ತತ್ತ್ವವಿರುವಂತೆ ಸಮಿತಿಯವರ ಶಿಫಾರ್ಸೂ, ಆ ದೃಷ್ಟಿಯಲ್ಲಿ ನೋಡಿದರೆ, ಸಹಜವಾಗಿಯೇ ಇದೆ ಮತ್ತು ಈ ಶಿಫಾರ್ಸನ್ನು ನಾವು ಕಡ್ಡಾಯವಾಗಿ ಕಾರ್ಯರೂಪಕ್ಕೆ ತರಬೇಕಾಗಿದೆ.

ಈಗಾಗಲೇ ಅನೇಕರು ಹೇಳಿರುವ ಹಾಗೆ, ಸಂಸ್ಥಾನದಲ್ಲಿ 6 ವರ್ಷದಿಂದ 12 ವರ್ಷದ ವರೆಗೆಇರುವ ಬಾಲಕ ಬಾಲಕಿಯರ ಸಂಖ್ಯೆ ಸುಮಾರು 14 ಲಕ್ಷ 33 ಸಾವಿರ. ಇವರ ಪೈಕಿ ಈಗಿನ ಪದ್ಧತಿಯ ಪ್ರಕಾರ ಸುಮಾರು 5 ಲಕ್ಷ 39 ಸಾವಿರ ಬಾಲಕಬಾಲಕಿಯರಿಗೆ ಮಾತ್ರ ವಿದ್ಯಾಭ್ಯಾಸ ಸೌಕರ್ಯಕಲ್ಪಿಸಲಾಗಿದೆ. ಅಂದರೆ ಸಂಸ್ಥಾನದ ಪ್ರಜಾ ಕೋಟಿಯಲ್ಲಿ ಶೇಕಡಾ 7 ರಷ್ಟು ಬಾಲಕ ಬಾಲಕಿಯರಿಗೆ ಮಾತ್ರ ವಿದ್ಯಾಭ್ಯಾಸ ಸೌಕರ್ಯವಿದೆ ಎಂಬುದು ಲೆಕ್ಕದಿಂದ ಕಂಡುಬರುತ್ತದೆ. ಬಾಲಕ ಬಾಲಕಿಯರ ಸಂಖ್ಯೆ ಇನ್ನೊಂದು ಹತ್ತು ವರ್ಷದಲ್ಲಿ ಇನ್ನೂ ಮೂರು ಲಕ್ಷದಷ್ಟು ಹೆಚ್ಚಾಗಬಹುದು. 1964-65ನೆಯ ಸಾಲಿಗೆ 6 ವರ್ಷದಿಂದ 12 ವರ್ಷದವರೆಗೆ ಇರುವ ಬಾಲಕ ಬಾಕಿಯರ ಸಂಖ್ಯೆ 17 ಲಕ್ಷ 8 ಸಾವಿರ ಆಗಬಹುದೆಂದು ಅಂದಾಜು ಮಾಡಲಾಗಿದೆ. ಹೀಗಿರುವಾಗ ಇಷ್ಟು ದೊಡ್ಡ ಸಮಸ್ಯೆಯಾದ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಸಂಸ್ಥಾನದ ಹಿತದೃಷ್ಟಿಯಿಂದ ನಾವು ಸಮರ್ಪಕವಾದ ರೀತಿಯ ಕಾರ್ಯಕ್ರಮವನ್ನು ಕೈಕೊಳ್ಳದೆ ಸುಮ್ಮನಿರುವುದು ಸಾಧ್ಯವೇ ಎಂಬುದನ್ನು ತಾವು ಪರ್ಯಾಲೋಚಿಸಬೇಕು. ಹಿಂದೂಸ್ಥಾನದ ಕೆಲವು ಭಾಗಗಳಲ್ಲಿ ಈಗಾಗಲೇ ಪ್ರಾಥಮಿಕ ವಿದ್ಯಾಭ್ಯಾಸ ಶಿಕ್ಷಣ ಬಹುಮಟ್ಟಿಗೆ ಮುಂದುವರಿದಿದೆ. ಬರೋಡಾ ಸಂಸ್ಥಾನದಲ್ಲಿ ಬಹಳ ಹಿಂದೆಯೇ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಅಲ್ಲಿ 1906ನೆಯ ಇಸವಿಯಿಂದಲೇ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ಜಾರಿಗೆ ಬಂದಿದೆ. 1918ರಲ್ಲಿ, ಮಾದರೀ ಸಂಸ್ಥಾನವೆನ್ನಿಸಿರುವ ನಮ್ಮ ದೇಶದಲ್ಲಿ ಆಗಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸ ಶಿಕ್ಷಣವನ್ನು ಜಾರಿಗೆತರಬೇಕೆಂಬ ಉದ್ದೇಶವುಳ್ಳವರಾಗಿದ್ದರೂ ಸಹ, ಈ ಪ್ರಶ್ನೆ ಹಲವು ಬಾರಿ ಶಾಸನ ಸಭೆಗಳಲ್ಲಿ ಚರ್ಚೆಗೆ ಬಂದಿದ್ದರೂ ಸಹ, ಇನ್ನು ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳದಿರುವುದು ಶೋಚನೀಯ. ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಕಡ್ಡಾಯ ಶಿಕ್ಷಣ ಕ್ರಮವನ್ನು ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ಸಹ ಒಪ್ಪಿದ್ದಾರೆ ಸಂಸ್ಥಾನದಲ್ಲಿ ಈ ವಿದ್ಯಾಭ್ಯಾಸದ ಕ್ರಮಕ್ಕಾಗಿ 9 ಕೋಟಿ 21 ಲಕ್ಷ 81 ಸಾವಿರ ರೂಪಾಯಿ ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದಕ್ಕಾಗಿ ಹಣ ನಮಗೆ ಹೇಗೋ ಒದಗುತ್ತದೆ. ಈ ಬಗ್ಗೆ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರ ಶಿಫಾರಸಿಗೆ ಸಂಸ್ಥಾನದ ಜನರ ಸಂಪೂರ್ಣ ಸಹಾನುಭೂತಿ ಇದೆ. ಸಂಸ್ಥಾನದಲ್ಲಿ ಈಗ ಪ್ರತಿ ವರ್ಷವೂ $1\frac{1}{2}$ ಕೋಟಿ ರೂಪಾಯಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದೆ. ಕಳೆದ ಸಾಲಿನ ವಿದ್ಯಾಇಲಾಖಾ ವರದಿಯನ್ನು ನೋಡಿದರೆ, ಸಂಸ್ಥಾನದಲ್ಲ ಈಗಿರತಕ್ಕ ವಿದ್ಯಾಭ್ಯಾಸ ಕ್ರಮದಿಂದ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮ ಸಂಸ್ಥಾನದಲ್ಲಿರುವ ಬಾಲಕ ಬಾಲಕಿಯರಿಗೆ ಪೂರ್ಣವಾಗಿ ಲಭಿಸುತ್ತಿಲ್ಲವೆಂಬುದಕ್ಕೆ ರುಜುವಾತು ಸಿಕ್ಕುತ್ತದೆ. In the Bangalore District, the number of pupils on the rolis at the time of examination was 22,108 and the number of pupils promoted to higher classes was 17,579 ಹೀಗೆ ಪ್ರತಿ

ಯೊಂದು ಸ್ಕೂಲಿನ ಅಂಕಿ ಅಂಶ ಇದೆ. ಪ್ರಾಥಮಿಕ ವಿದ್ಯಾಭ್ಯಾಸದ ಕಾಲಾವಧಿ ನಾಲ್ಕು ವರ್ಷ. ಹೀಗೆ ಪ್ರತಿ ವರ್ಷ 100 ಹುಡುಗರಲ್ಲಿ ತೇರ್ಗಡೆಯಾಗುವವರನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ, ನಾಲ್ಕನೆಯ ತರಗತಿಗೆ ಬರುವ ಹೊತ್ತಿಗೆ 33 ಮಂದಿ ಮಾತ್ರ ಉಳಿದಿರುತ್ತಾರೆ. ಅಂದ ಮೇಲೆ 1½ ಕೋಟಿ ರೂಪಾಯಿಯನ್ನೂ ಶೇಕಡಾ 33 ಮಂದಿಗೆ ಮಾತ್ರ ಖರ್ಚು ಮಾಡಿದ ಹಾಗಾಯಿತು. ಹಿಂದೆ, Lord Macaulay wanted to create a class of people who would be Indians in blood and colour but English in tastes, opinions and in intellect. ಈಗಿನ ವಿದ್ಯಾಭ್ಯಾಸಕ್ರಮದಿಂದ ವಿದ್ಯಾವಂತರಾದವರು ಪುನಃ ಹಳ್ಳಿಗಳಿಗೆ ಹೋಗಬೇಕೆಂಬ ಮನೋಭಾವವನ್ನೇ ಕಳೆದುಕೊಂಡಿರುತ್ತಾರೆ. It is a great disqualification for the qualified villager to come back to his village. ಹಳ್ಳಿಗೆ ಹಿಂದಿರುಗಲು ಅವನಿಗೆ ಮನಸ್ಸಿರುವುದಿಲ್ಲ. ಈ ವಿದ್ಯಾಭ್ಯಾಸ ಕ್ರಮದಿಂದ ಆತನು ತನ್ನ ಭೂಮಿ, ತನ್ನ ಗ್ರಾಮ, ತನ್ನ ದೇಶ ಎಂಬುದನ್ನೇ ಮರೆತುಬಿಡುತ್ತಾನೆ. The qualification that he has now is a real disqualification now. ಈ ಕ್ರಮವನ್ನು ಬದಲಾಯಿಸಬೇಕಾದುದು ಅಗತ್ಯ. ಈ ವಿಚಾರದಲ್ಲಿ ನಿಧಾನವಾದರೆ ಇದಕ್ಕೆ ಕಾರಣರಾದವರು ದೇಶಕ್ಕೇ ದ್ರೋಹವೆಸಗಿದ ಹಾಗಾಗುತ್ತದೆ. ಹಣವಿಲ್ಲವಲ್ಲಾ ಎಂದು ಯೋಚನೆಮಾಡುತ್ತಾ ಕುಳಿತುಕೊಳ್ಳುವ ಕಾಲವಲ್ಲ ಇದು. ಇದನ್ನು ಪ್ರಾರಂಭಮಾಡಿದರೆ, ಇದಕ್ಕೆ ಸಹಾನುಭೂತಿದೊರೆತು ದುಡ್ಡು ತಾನಾಗಿಯೇ ಒದಗುತ್ತದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಗೋಲ್ಡ್ ಡ್ಯೂಟಿಯಿಂದ ನಮ್ಮ ಸಂಸ್ಥಾನಕ್ಕೆ 1½-2 ಕೋಟಿ ರೂಪಾಯಿಗಳು ಬರುತ್ತದೆ. ಎಕ್ಸೈಜು ನಿಂದ ಬೇಕಾದಷ್ಟು ವಸೂಲಾಗುತ್ತದೆ. ಫಾರೆಸ್ಟ್ ವರಮಾನದ ಬಗ್ಗೆ ಹೆಚ್ಚಿಗೆ ನಿಗಾಕೊಟ್ಟರೆ ಅದರಿಂದ ಬೇಕಾದಷ್ಟು ಹಣ ಬರುವ ನಿರೀಕ್ಷೆಇದೆ. ಕೈಗಾರಿಕಾಭಿವೃದ್ಧಿಯಿಂದ ಕೂಡ ವರಮಾನ ಹೆಚ್ಚಿಸಿಕೊಳ್ಳಲು ಅವಕಾಶವಿದೆ. ಹೀಗೆ ಸಂಸ್ಥಾನದ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರದವರಿಗೆ ಬಹಳ ಅವಕಾಶವಿದೆ. ಈ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡು ಸಂಸ್ಥಾನದ ಆದಾಯವನ್ನು ಹೆಚ್ಚಿಸಿಕೊಂಡು ಅದನ್ನು ನೂತನ ವಿದ್ಯಾಭ್ಯಾಸ ಕ್ರಮಕ್ಕಾಗಿ ವಿನಿಯೋಗಿಸಬಹುದು. ಹಳ್ಳಿಗರು ವಿದ್ಯಾವಂತರಾಗಿ ಪಟ್ಟಣವಾಸದ ವ್ಯಾಮೋಹಕ್ಕೆ ಒಳಗಾಗದಂಥ ಅತಿ ಪರಿಣಾಮಕಾರಿಯಾದ ವಿದ್ಯಾಭ್ಯಾಸ ಕ್ರಮವನ್ನು ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕಾದುದು ಅಗತ್ಯ.

ಅದಕ್ಕೆ ಸರಿಯಾದ ಕ್ರಮ ಮಾಡಿಕೊಳ್ಳಬೇಕೇ ವಿನಾ ಬೇರೆಯಲ್ಲ. ಶೇಕಡ 85 ಇರತಕ್ಕ ಗ್ರಾಮಾಂತರ ಪ್ರದೇಶಗಳಲ್ಲಿ ಆರು ವರ್ಷದ ಕ್ರಮ ಬಹಳ ಸಾಧುವಾದದ್ದು. ಆ ಹುಡುಗರಿಗೆ ನಿಜವಾಗಿಯೂ ಉಪಕಾರ ಮಾಡಿದ ಹಾಗಾಗುತ್ತದೆ. ನನ್ನನ್ನು ಕೇಳಿದರೆ, ಈ ಪ್ರಜಾಪ್ರಭುತ್ವತತ್ವಕ್ಕೆ ವಿರೋಧಿಗಳು ಯಾರು ಎಂದರೆ ಅವಿದ್ಯಾವಂತರು. ಇನ್ನು ಯಾರೂ ಅಲ್ಲ ಯಾವ ಪಾರ್ಟಿಗಳೂ ವಿರೋಧಿಗಳಲ್ಲ. ಪ್ರಜಾಪ್ರಭುತ್ವ ಸರ್ಕಾರದಲ್ಲಿ ಈಗ ಆಡಳಿತ ನಡೆಯಿಸುತ್ತಾಯಿರುವುದು, ನಾನು ಇಂದು ಇಲ್ಲಿ ಮಾತನಾಡುತ್ತಾ ಇರುವುದು 21 ವರ್ಷ ವಯಸ್ಸಿನ ಪ್ರಜೆಯ ಓಟಿನ ಹಕ್ಕಿನಿಂದ. ಅವನಿಗೆ ಓಟಿನ ಹಕ್ಕನ್ನು ಕೊಟ್ಟರೆ ಏನ ಯಾವ ರೀತಿ ಓಟು ಕೊಡಬೇಕೆಂಬ ಸರಿಯಾದ ವಿದ್ಯಾಭ್ಯಾಸ ಕೊಡಲು ಪ್ರಯತ್ನ ಮಾಡಲಿಲ್ಲ. ಎಷ್ಟೋ ಜನ ಹೇಳಿದ್ದಾರೆ, ಚುನಾವಣೆಗಳು ನಡೆದವು, ಬಹಳ ದೊಡ್ಡದಾಗಿ ನಡೆಯಿತು. ಆ ಸಂದರ್ಭದಲ್ಲಿ ಅಷ್ಟಾಗಿ ಕರಪ್‌ಷನ್ ಇರಲಿಲ್ಲ ಎಂದು ಡಾಕ್ಟರ್ ರಾಧಾಕೃಷ್ಣನ್‌ರವರು ಹೇಳಿದ್ದಾರೆ. ಅಂತೂ ಸ್ವಲ್ಪ ಇತ್ತು ಎಂದು ಅರ್ಥವಾಗುತ್ತದೆ. ಸುಧಾರಣಾ ಸಮಿತಿಯವರು ಡಾ|| ರಾಧಾಕೃಷ್ಣನ್‌ರವರ ಹೇಳಿಕೆಯನ್ನು ತಮ್ಮ ರಿಪೋರ್ಟಿನಲ್ಲಿ ಸೂಚಿಸಿದ್ದಾರೆ. ಇದನ್ನು ಏಕೆ ಹೇಳಿದೆನೆಂದರೆ, ಅವಿದ್ಯಾವಂತತನವನ್ನು ಹೋಗಲಾಡಿಸಬೇಕಾದರೆ, ಈಗಿರತಕ್ಕ ಪರಿಸ್ಥಿತಿಯಲ್ಲಿ 100ಕ್ಕೆ ಏಳು ಜನಕ್ಕೆ ಮಾತ್ರ ವಿದ್ಯಾಭ್ಯಾಸ ಕೊಡುತ್ತಾಯಿರುವುದರಿಂದ ಇನ್ನು ಸುಮಾರು 10 ವರ್ಷದಲ್ಲಿ ಹದಿನೇಳು ಲಕ್ಷ ಪ್ರಜೆಗಳಿಗೆ 6ರಿಂದ 12 ವರ್ಷ ವಯಸ್ಸಿನ ಒಳಗಿರತಕ್ಕ ಬಾಲಕ ಬಾಲಕಿಯರಿಗೆ ವಿದ್ಯಾಭ್ಯಾಸವನ್ನು ಒದಗಿಸುವುದು ನಮ್ಮ ಆದ್ಯ ಕರ್ತವ್ಯ. ಎಷ್ಟೇ ಖರ್ಚಾದರೂ ಕೊಟ್ಟೇ ಕೊಡಬೇಕು.

ಮತ್ತೊಂದು ವಿಚಾರ ಹೇಳಿದರು. ಪ್ರತಿಯೊಂದು ಹಳ್ಳಿಯಲ್ಲೂ ಆರು ವರ್ಷದ ವಿದ್ಯಾಭ್ಯಾಸ ಕ್ರಮ ಕೊಟ್ಟರೆ ಅದಕ್ಕೆ ಸೌಕರ್ಯವಿರುವುದಿಲ್ಲ ಎಂದು. ನಾನು ಎಷ್ಟೋ ಜಾಗದಲ್ಲಿ ನೋಡಿದ್ದೇನೆ, ವಿದ್ಯಾಭ್ಯಾಸದ ಸೌಕರ್ಯ ಕೊಡುತ್ತೇವೆ ಎಂದು ಹೇಳಿದರೆ ನಾನು ಮುಂದು, ತಾನು ಮುಂದು ಎಂದು ಹೇಳಿ ಮನೆ ಕಟ್ಟಿಸಿಕೊಡುತ್ತೇವೆ ಎಂದು ಹೇಳುವವರು ಎಷ್ಟೋ ಜನ ಇದ್ದಾರೆ. ಮೊನ್ನೆ ಕೂಡ ಮೈಸೂರಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಹತ್ತಿರ ಕರೆದುಕೊಂಡು ಹೋಗಿದ್ದೆ. ಸ್ವಾಮಿ, ನಮಗೆ ಒಂದು ಸ್ಕೂಲು ಕೊಡಿ, ಬೇಕಾದ ಸೌಕರ್ಯ ಮಾಡಿಕೊಡುತ್ತೇವೆ ಎಂದು ಹೇಳತಕ್ಕ ಬೇಕಾದಷ್ಟು ಜನ ಇದ್ದಾರೆ. ಶ್ರೀ ವೆಂಕಟಪ್ಪನವರು ಬಹಳ cheap construction ಮಾಡಿದರೆ ಕಟ್ಟಡ ಹೆಚ್ಚು ದಿನ ಉಳಿಯುವುದಿಲ್ಲ, ಅದನ್ನು ನೋಡಿಕೊಳ್ಳುವುದಕ್ಕೆ ಯಾರೂ ಇರುವುದಿಲ್ಲ ಎಂದು ಹೇಳಿದರು. ಒಂದು ಗ್ರಾಮದಲ್ಲಿ ಒಂದು ಸ್ಕೂಲು ಕಟ್ಟಡ ಇದ್ದು ಅದು ಬಿದ್ದುಹೋದರೆ, ಯಾರೂ ನೋಡುವವರೇ ಗತಿಯಿಲ್ಲ. ಕಟ್ಟಿಸಿಕೊಟ್ಟವರು ಅಷ್ಟು ಹೊತ್ತಿಗೆ ಊರಿನಲ್ಲಿರುವುದಿಲ್ಲ, ಎಲ್ಲಿಗೋ ಹೊರಟುಹೋಗಿರುತ್ತಾರೆ. ಇದಕ್ಕೆ ಒಂದು ಸಲಹೆ ಏನೆಂದರೆ, ಪಿ. ಡಬ್ಲ್ಯು. ಡಿ. ಅವರು ಅದನ್ನು ಮೇನ್‌ಟೇನ್ ಮಾಡಿ ಸರಿಯಾದ ಮೇಲ್ವಿಚಾರಣೆಯಲ್ಲಿಟ್ಟುಕೊಂಡರೆ ಅಂಥಾ ದುಸ್ಥಿತಿ ಒದಗಲಾರದು.

ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ನಾವು ಮುಖ್ಯವಾಗಿ ಗಮನಕೊಡಬೇಕಾದದ್ದು ಅಗತ್ಯ. ಹಾಲಿ ಇರತಕ್ಕ ನಾಲ್ಕು ವರ್ಷದ ಮಾಧ್ಯಮಿಕ ಮತ್ತು ಮೂರು ವರ್ಷದ ಹೈಸ್ಕೂಲು ಪೀರಿಯಡ್ ಅನ್ನು ಆರು ವರ್ಷಕ್ಕೆ ಏರಿಸಿರತಕ್ಕದ್ದು ನನಗೇನೋ ಸಮ್ಮತವಾಗಿದೆ. ಈಗಿರತಕ್ಕ ಸೆಕೆಂಡರಿ ಸ್ಟೇಜ್ ಮುಗಿಯುವುದರೊಳಗೆ 12 ವರ್ಷ ಕಾಲ ಅವನಿಗೆ ವಿದ್ಯಾಭ್ಯಾಸ ಒದಗಿಸಿದಂತೆ ಆಗುತ್ತದೆ; ಆರು ವರ್ಷದಲ್ಲಿ ಪ್ರಾರಂಭವಾದ ವಿದ್ಯಾಭ್ಯಾಸ ಹನ್ನೆರಡು ವರ್ಷ ಏಕಪ್ರಕಾರವಾಗಿ ನಡೆದು 18ನೇ ವಯಸ್ಸಿನ ಹೊತ್ತಿಗೆ ಸೆಕೆಂಡರಿ ಸ್ಟೇಜ್ ಮುಗಿಸುತ್ತಾನೆ. 18ನೇ ವಯಸ್ಸಿನಲ್ಲಿ ಸಂಪಾದನೆಗೆ ಹೋಗಬೇಕಾದರೆ ಅದಕ್ಕೆ ಅವನಿಗೆ ಶಿಕ್ಷಣವಾಗಿರಬೇಕು. ಈಗ ನಮ್ಮ ಮುಂದಿರುವ ಹೊಸ ಯೋಜನೆಯಂತೆ 18ನೇ ವಯಸ್ಸಿನಲ್ಲಿ ತಾನು ಪಡೆದಿರತಕ್ಕ ವಿದ್ಯಾಭ್ಯಾಸ ಕ್ರಮದಿಂದ ತನ್ನ ಜೀವನ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯ, ಆ ರೀತಿ ಜೀವನ ನಡೆಸುವುದಕ್ಕೆ ಯಾವ ಪ್ರಕಾರ ಶಿಕ್ಷಣ ಕೊಡಬೇಕೆಂಬುದನ್ನು ಅವರು ವಿವರಿಸಿದ್ದಾರೆ. ಆ ವಿವರಣೆಯ ಪ್ರಕಾರ ಅದು ಖಂಡಿತ ಸಾಧ್ಯ ಎಂದು

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಕಂಡುಬರುತ್ತದೆ. ಏಕೆಂದರೆ ನನ್ನ ಅಭಿಪ್ರಾಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದಲ್ಲೂ, ಇತರ ವಿದ್ಯಾಭ್ಯಾಸ ದಲ್ಲೂ ನಮಗೆ ಕಂಡುಬಂದಿರುವುದು ಏನೆಂದರೆ, ಉರು ಹೊಡೆಯುವುದು. ಬಿ.ಎ. ಪರೀಕ್ಷೆ ಪಾಸ್ ಮಾಡು ವುದೂ ಕೂಡ ಗಟ್ಟಿಮಾಡಿ, ಉರು ಹೊಡೆಯುವುದ ರಿಂದಲೇ ಆಗಿದೆ. ಮುಖ್ಯವಾಗಿ ಬರಬೇಕಾದದ್ದು ಏನು ? ಸರಿಯಾದ character, personality. ಇವು build up ಆಗಬೇಕಾದರೆ ಏನು ಮಾಡಬೇಕು ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಅದಕ್ಕೆ ಉರು ಹೊಡೆಯುವುದಕ್ಕಿಂತ—faculty of reasoning ನ್ಯಾಯವಾದ ವಿಮರ್ಶೆ ಮಾಡತಕ್ಕ ಮನೋಭಾವವನ್ನು ಅವರಲ್ಲಿ ಉಂಟುಮಾಡಬೇಕು. ಎರಡನೆಯದಾಗಿ, - reflection - ತಾನು ಓದಿದ್ದನ್ನು ಸ್ವಲ್ಪ ಯೋಚನೆಮಾಡಿಕೊಂಡು ಅರ್ಥಮಾಡಿಕೊಳ್ಳತಕ್ಕ ಸ್ವಭಾವ ಮತ್ತು ಅಭ್ಯಾಸ ಹುಡುಗನಿಗೆ ಬರಬೇಕು. ಇವು ಎರಡೂ ಮುಖ್ಯವಾದವು. ವಿದ್ಯಾಭ್ಯಾಸ ಎಂದರೆ ಎಲ್ಲಾ ಪುಸ್ತಕದಿಂದಲೇ ಹೇಳಿಕೊಡುತ್ತೇವೆ ಎಂದು ಅಲ್ಲ. ಅವನ ಸ್ವತಃ ಶಕ್ತಿ ಏನಿದೆಯೋ ಅದರ ಜೊತೆಗೆ ಹೊರಗಡೆ ಉಪಾಧ್ಯಾಯರು ಸ್ವಲ್ಪ ಹೇಳಿಕೊಡಬಹುದು. ಇದೆಲ್ಲವೂ ಸೇರಿರತಕ್ಕಂಥ ವಿದ್ಯಾಭ್ಯಾಸ ಕ್ರಮವನ್ನು ರೂಪಿಸಿಕೊಡಬೇಕಾದದ್ದು ನಮ್ಮ ಕರ್ತವ್ಯ. ಆದ್ದರಿಂದ ಸೆಕೆಂಡರಿ ಸ್ಟೇಜ್ ಆರು ವರ್ಷ ಕಾಲ ಇರತಕ್ಕದ್ದು ನ್ಯಾಯವಾಗಿದೆ. ಅಷ್ಟಿಗೆ 18 ವರ್ಷ ಆಗುತ್ತದೆ. ಹುಡುಗನಿಗೆ 18 ವರ್ಷ ಆದ ಕೂಡಲೇ ಅವನು ಯಾವ ಕಸುಬಿಗೆ ಹೋದರೂ ಜೀವನ ನಡೆಯುತ್ತದೆ ಅಥವಾ ತಾನು ಕಲಿತಿರತಕ್ಕ ಕಸುಬನ್ನು ಯಾವ ರೀತಿ ಮುಂದು ವರಿಸಬೇಕು ಎಂಬುದನ್ನು ಹೇಳಿಕೊಡಲು ಟೆಕ್ನಿಕಲ್ ಕಾಲೇಜು, ಸ್ಕೂಲು, ಇನ್‌ಸ್ಟಿಟ್ಯೂಷನ್‌ಗಳು ಇದ್ದೇ ಇವೆ. ಈ ರೀತಿ ಇರುವುದರಿಂದ ಅವರು ಹೇಳಿರತಕ್ಕ ಸುಧಾ ರಣೆಯ ಕ್ರಮ ಸಾಧುವಾಗಿದೆ. ಇದರಲ್ಲಿ ಯಾವ ವಿಧ ವಾದ ಲೋಪವೂ ಕಾಣೆ. ವಿದ್ಯಾಭ್ಯಾಸ ಸುಧಾರ ಣೆಯ ವರದಿಯಲ್ಲ ಅವರು ಹೇಳಿರುವ ಹಾಗೆ ಈ ರೀತಿ ಸುಧಾರಣೆ ಮಾಡಬೇಕೆಂದು ಅನೇಕ ಸಾರಿ ಪ್ರಯತ್ನ ಪಟ್ಟಿದ್ದೇವೆ ಆದರೆ ಒಂದು ಸಾರಿಯೂ ನಾವು ಒಂದೇ ಗಟ್ಟಿ ಮನಸ್ಸಿನಿಂದ ಆಚರಣೆಗೆ ತರಲು ಪ್ರಯತ್ನಪಟ್ಟಿಲ್ಲ ಎಂಬುದನ್ನು ಸಹ ಅವರು ಹೇಳಿರುತ್ತಾರೆ. ಇದಕ್ಕೂ ಸಹ ಅದೇ ಗತಿ ಆಗಲಾರದು. ಅವರು ಹೇಳಿದಹಾಗೆ ಹತ್ತಾರು ಸಾರಿ ಸಮಿತಿಯ ವರದಿ ತರಿಸಿಕೊಂಡು, ತಜ್ಞರ ಅಭಿಪ್ರಾಯ ಕೇಳಿ ಒಂದನ್ನೂ ಜಾರಿಗೆ ಕೊಡದೇ ಹಾಗೆಯೇ ಇಟ್ಟುಕೊಂಡುಹೋದರೆ ಇದು ಎಂದಿಗೆ ಮುಗಿಯುವುದು ? ಆದ್ದರಿಂದ ಇದನ್ನು ಕೂಡಲೇ ಜಾರಿಗೆ ತರುವುದು ಬಹಳ ಅಗತ್ಯವಾಗಿದೆ. ಇದಕ್ಕೆ ಒದಗಬೇಕಾದ ದುಡ್ಡಿಗೆ ಯಾವ ವಿಧವಾದ ಲೋಪವೂ ಇಲ್ಲ, ಸಿಕ್ಕುತ್ತದೆ. ಇದನ್ನು ಜಾರಿಗೆ ತರಬೇಕಾದ್ದು ಸರ್ಕಾರದವರ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ.

ಮತ್ತೊಂದು ವಿಷಯ. ಇಂಟರ್‌ಮೀಡಿಯಟ್‌ನ್ನು ಹೈಸ್ಕೂಲ್ ಆಡಳಿತಕ್ಕೆ ಸೇರಿಸಿ ಬೋರ್ಡ್ ಆಫ್ ಇಂಟರ್‌ಮೀಡಿಯಟ್ ಅಂಡ್ ಸೆಕೆಂಡರಿ ಎಜ್ಯುಕೇಷನ್ ಎಂಬುದಾಗಿ ಮಾಡಬೇಕೆಂಬ ತತ್ವವನ್ನು ಹೇಳಿದ್ದಾರೆ. ಇಂಟರ್‌ಮೀಡಿಯಟ್‌ನ್ನು ಯೂನಿವರ್ಸಿಟಿಯಿಂದ ಬೇರ್ಪಡಿಸಿದರೆ ಅದರ ಗೌರವ, ಅಂತಸ್ತು ಎಲ್ಲಾ ಪಾತಾಳಕ್ಕೆ ಬಿದ್ದುಹೋಗುತ್ತದೆ ಎಂದು ಹೇಳಿದರು. ಆ ರೀತಿಯ ಗೌರವ ಆಗಲೀ ಅಂತಸ್ತಾಗಲಿ ಬಿದ್ದುಹೋಗು ವುದು ಏನೂ ಕಾಣೆ. ವಿದ್ಯಾಭ್ಯಾಸ ಕ್ರಮದಲ್ಲ Degree course and research ಯೂನಿವರ್ಸಿಟಿ ಭಾಗಕ್ಕೆ ಇರಲಿ ಎಂಬ ಉದ್ದೇಶದಿಂದ ಸೆಕೆಂಡರಿ ಸ್ಟೇಜ್ ನಲ್ಲಿ ಒಂದು ವಿದ್ಯಾಭ್ಯಾಸ ಕ್ರಮವನ್ನು ಸಲಹೆ ಮಾಡಿ ದರು. ಅದನ್ನು ಮುಂದುವರಿಸಬೇಕು ಎಂದು ಹೇಳಿ ಅವರು ಹೇಳಿರುವ ಹಾಗೆ, It should serve both as a terminal as well as a preparatory course. ಟರ್ಮಿನಲ್ ಆದರೆ ಬಾಧಕವಿಲ್ಲ. ಪ್ರಿಪರೇ ಟರಿ ಆದರೆ ಕಾಲೇಜು ಮುಂತಾದುವು ಇದ್ದೇ ಇವೆ. ಆದ್ದರಿಂದ ಅಂಥಾ ಪ್ರಶ್ನೆ ಯಾವುದೂ ಬರುವುದಕ್ಕೆ ಅವಕಾಶವೇ ಇಲ್ಲ ಎಂದು ನಾನು ತಿಳಿದುಕೊಂಡಿ ದ್ದೇನೆ.

ಯೂನಿವರ್ಸಿಟಿ ವಿದ್ಯಾಭ್ಯಾಸದಲ್ಲಿ ಅಷ್ಟಾಗಿ ಸುಧಾ ರಣೆಯನ್ನಾಗಲಿ ಬದಲಾವಣೆಯನ್ನಾಗಲಿ ಈಗ ಸೂಚಿ ಸಿಲ್ಲ. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಬಾಲಕ ಬಾಲಕಿಯರಿಗೆ ಅನೇಕ ಪಾಠಶಾಲೆಗಳಲ್ಲಿ ಪ್ರವೇಶ ಸಿಕ್ಕುವುದು ಬಹಳ ತೊಡಕು, ಅಡ್ಡಿ ಆತಂಕಗಳು ಇವೆ. ಒಬ್ಬ ವಿದ್ಯಾರ್ಥಿ ಅವನು ಎಷ್ಟೇ ಪ್ರತಿಭಾಶಾಲಿಯಾಗಿ ದ್ದರೂ ಕೂಡ ಈ ವಿದ್ಯಾಭ್ಯಾಸ ಕ್ರಮದಲ್ಲಿ ಬಹಳವಾಗಿ ಮುಂದುವರಿದರೆಲ್ಲಾ ಅವನಿಗೆ ನ್ಯಾಯವಾದಂಥ ಜಾಗ ಸಿಕ್ಕುತ್ತಿಲ್ಲ. ವಿದ್ಯಾಭ್ಯಾಸ ಮಾಡಬೇಕೆಂದರೂ ಜಾಗ ಸಿಕ್ಕದೇ ಇರುವುದು ಬಹಳ ಶೋಚನೀಯವಾದ ವಿಚಾರ. ಅದಕ್ಕೆ ಅನೇಕ ತೊಡಕುಗಳು ಇವೆ. ಆ ತೊಡಕುಗಳನ್ನೆಲ್ಲಾ, ಸುಧಾರಣಾ ಸಮಿತಿಯವರು ಹೇಳಿರುವ ಹಾಗೆ, ಈ ವರದಿಯನ್ನು ಜಾರಿಗೆ ಕೊಡು ವಾಗಲೇ ಸರಿಪಡಿಸಬೇಕು ; ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೂ (ಆಪ್ಟಿಟ್ಯೂಡ್) ಯಾವ ಕೆಲಸ ಮಾಡ ಬೇಕೆಂದು ಬಹಳವಾಗಿ ಆಶೆ, ಮನಸ್ಸು ಇದೆ ಅಂಥಾ ದಾರಿಯಲ್ಲೇ ವಿದ್ಯಾಭ್ಯಾಸ ಕ್ರಮವನ್ನು ಮುಂದು ವರಿಸುವುದಕ್ಕೆ ಸರ್ಕಾರದವರು ಅವಕಾಶ ಕೊಡಬೇಕು. ಇಂಜನಿಯರಿಂಗ್ ಮತ್ತು ಟೆಕ್ನಿಕಲ್ ಕಾಲೇಜುಗಳಲ್ಲಿ ಈಗ ಹಾಲಿ ಅಭ್ಯಾಸಕ್ಕೆ ಇರತಕ್ಕ ವರ್ಕ್‌ಷಾಪ್ ಸೌಕರ್ಯ ಬಹಳ ಕಡಿಮೆಯಾಗಿದೆ. ಇದನ್ನು ಹೆಚ್ಚಿಸ ಬೇಕು. ಇಂಜನಿಯರಿಂಗ್ ಕಾಲೇಜಿನಲ್ಲಿ ನಾನು ಓದುತ್ತಾ ಇದ್ದಾಗ ನನ್ನ ಸೆಕ್ಷನ್‌ನಲ್ಲಿ ಏಳು ಅಥವಾ ಎಂಟು ಜನ ಇದ್ದೆವು ; ಈಗ ಅದೇ ಮೆಕ್ಯಾನಿಕಲ್ ಸೆಕ್ಷನ್ ನಲ್ಲಿ 80–90 ಜನ ಹುಡುಗರು ಇದ್ದಾರೆ. ವರ್ಕ್‌ಷಾಪು ಹಿಂದೆ ಇದ್ದ ಹಾಗೆಯೇ ಇದೆ. ಸ್ವಲ್ಪವೂ ಹೆಚ್ಚಾಗಿಲ್ಲ. ಒಬ್ಬ ಹುಡುಗ ಅಭ್ಯಾಸಮಾಡತಕ್ಕ ಸ್ಥಳದಲ್ಲಿ ನಾಲ್ಕು ಜನ ಹುಡುಗರು ಇರಬೇಕು ಎಂದರೆ ಒಬ್ಬ ಹುಡುಗ ಕೆಲಸಮಾಡುತ್ತಿದ್ದರೆ ಮೂರು ಜನ ಅದನ್ನು ನೋಡು ತ್ತಾ ಇರಬೇಕು. ಇದರಿಂದ ನ್ಯಾಯವಾದ ಶಿಕ್ಷಣ ಕೊಟ್ಟ ಹಾಗಾಗುವುದಿಲ್ಲ, ಲ್ಯಾಬೊರೇಟರಿ, ವರ್ಕ್‌ಷಾಪು ಎಕ್ವಿಪ್‌ಮೆಂಟ್ ಮತ್ತು ಸಾಕಾದಷ್ಟು ಉಪಾಧ್ಯಾ ಯರನ್ನೂ ಸಹ ಒದಗಿಸಬೇಕು.

ಇನ್ನೊಂದು ವಿಷಯ ಉಪಾಧ್ಯಾಯರನ್ನು ತರಪೇತು ಮಾಡತಕ್ಕದ್ದು ಅತಿ ಮುಖ್ಯವಾದದ್ದು. ವರದಿಯಲ್ಲಿ ಹೇಳಿರುವ ಹಾಗೆ ಎಷ್ಟೇ ಖರ್ಚಾಗಲಿ ಇದನ್ನು ಕೂಡಲೆ ಜಾರಿಗೆ ತರಬೇಕು.

4 P.M.

ಆದ್ದರಿಂದ ಎಷ್ಟೇ ಖರ್ಚಾಗಲಿ ಈ ರಿಪೋರ್ಟಿನಲ್ಲಿ ಹೇಳಿರುವ ಹಾಗೆ ತಾವು ಜಾರಿಗೆ ತರಲೇಬೇಕು. ಬಾಕಿ ಯಾವ ಭಾಗವನ್ನು ಜಾರಿಗೆ ತರುವುದಕ್ಕೆ ಮುಂಚೆ ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡುವುದರ ಕಡೆಗೆ ಈ ವರ್ಷವೇ ಗಮನಕೊಟ್ಟು ಬರುವ ವರ್ಷದೊಳಗೆ ಕನಿಷ್ಠ ಪಕ್ಷ 3,000 ಉಪಾಧ್ಯಾಯರುಗಳನ್ನು ತರಪೇತು ಮಾಡಿಟ್ಟಿದ್ದರೆ ತಾವು ಕೂಡಲೆ ಸ್ಕೂಲುಗಳನ್ನು ಆರಂಭಿ ಸಬಹುದು. ಸಮಿತಿಯವರು ಮಾಡಿರತಕ್ಕ ಶಿಫಾರಸು

ಗಳನ್ನು ಜಾರಿಗೆ ತರುವುದು ದೇಶಕ್ಕೆ ಬಹಳ ಒಳ್ಳೆಯದು; ಅಲ್ಲದೆ ಪ್ರಜಾಪ್ರಭುತ್ವ ಸರ್ಕಾರವನ್ನು ಯಾವ ವಿಧವಾದ ತೊಂದರೆಯೂ ಇಲ್ಲದೆ ನಡೆಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಅಧ್ಯಕ್ಷರೇ, ಇದುವರೆಗೂ ಅನೇಕ ಜನರು ಮಾತನಾಡಿದ್ದನ್ನು ಕೇಳಿದ್ದರ ಮೇಲೆ ನನಗೇಕೋ ಬಹಳ ಯೋಚನೆಯಾಗುತ್ತಿದೆ. ಏಕೆಂದರೆ, ನಾವೇನೋ ಹಿಂದಿನಿಂದ ಒಂದು ಯೋಚನೆ ಮಾಡಿಕೊಂಡಿದ್ದೆವು; ಈಗಿನ ವಿದ್ಯಾಭ್ಯಾಸವನ್ನು ಬದಲಾವಣೆ ಮಾಡಬೇಕು; ಈ ವಿದ್ಯಾಭ್ಯಾಸ ನಮ್ಮ ದೇಶಕ್ಕೆ ಒಳಿತಲ್ಲ; ಇದು ಕೇವಲ ನೌಕರರನ್ನು ತಯಾರು ಮಾಡುವ ವಿದ್ಯಾಭ್ಯಾಸವೇ ವಿನಾ ಇದರಿಂದ ಸುಖವಿಲ್ಲವೆಂದು ಹೇಳಿ ಇದನ್ನು ಸುಧಾರಿಸಬೇಕೆಂದು ಎಷ್ಟೋ ಯೋಚನೆ ಮಾಡಿಕೊಂಡಿದ್ದೆವು. ಅದರಂತೆಯೇ ಈ ಸುಧಾರಣೆಯಲ್ಲಿ ವಿದ್ಯಾಭ್ಯಾಸ ಕ್ರಮವನ್ನು ಬದಲಾವಣೆ ಮಾಡಲು ಪ್ರಯತ್ನಿಸುವುದು ಯೋಗ್ಯವೆಂದು ನನಗನಿಸುತ್ತದೆ. ಇದರಲ್ಲೇನೂ ಅಭಿಪ್ರಾಯ ವ್ಯತ್ಯಾಸಕ್ಕೆ ಕಾರಣವಿಲ್ಲ. ಏಕೆಂದರೆ, ನಾವು ಹಿಂದಿನಿಂದಲೂ ಹೇಳುತ್ತಿದ್ದೆವು, ಬೇಸಿಕ್ ಶಿಕ್ಷಣ ಕ್ರಮ ಜಾರಿಗೆ ಬರಬೇಕು ಎಂದು. ಮಹಾತ್ಮಾ ಗಾಂಧಿಯವರು ಕೂಡ ಅದಕ್ಕೊಂದು ಮಹಾತ್ಮ್ಯವನ್ನು ಕೊಟ್ಟಿದ್ದರು. ಆದ್ದರಿಂದ ನಾವು ಈ ದೃಷ್ಟಿಯಿಂದ ಯೋಚನೆ ಮಾಡಿಕೊಂಡು ಹೋಗಬೇಕೇ ವಿನಾ ಬೇರೆ ರೀತಿಯಿಂದ ಯೋಚನೆ ಮಾಡುವುದರಿಂದೇನೂ ಪ್ರಯೋಜನವಾಗುವುದಿಲ್ಲವೆಂದು ನನಗೆ ತೋರುತ್ತದೆ. ಏಕೆಂದರೆ, ನಾವಿಂದು ನಮ್ಮ ಹಿನ್ನೆಲೆಯೇನೆಂಬುದನ್ನು ನೋಡುವುದಾದರೆ, ನಮ್ಮ ದೇಶ ಮುಖ್ಯವಾಗಿ ಕೃಷಿಯ ದೇಶ. ಅಂದಮೇಲೆ ಭೂಮಿಯ ವಿವರಣೆ, ಭೂಮಿಯ ಸ್ಥಿತಿಗತಿಗಳನ್ನು ನೋಡಿಕೊಂಡು ಮನುಷ್ಯ ತನ್ನ ಏಳಿಗೆಯನ್ನು ಯೋಚನೆ ಮಾಡಿಕೊಳ್ಳಬೇಕಾದರೆ ಪಾಠಗಳನ್ನು ಇಂಥ ವಿಷಯಗಳ ಮುಖಾಂತರವೇ, ವಸ್ತುಗಳ ಮೂಲಕವೇ ಹೇಳಿಕೊಡಬೇಕೆಂದು ಹೇಳುವುದು ನ್ಯಾಯವಾಗಿದೆ. ಅದರಿಂದಲೇ ಅದು ಸಾಧ್ಯವಾಗುತ್ತದೆ ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲವೆಂದು ನಮ್ಮ ಮನಸ್ಸಿನ ಖಚಿತ ಅಭಿಪ್ರಾಯವೆಂದು ಹೇಳಬಹುದು. ಏಕೆಂದರೆ ಈಗ ಹಿಂದಿನಿಂದ ನಡೆದಿರುವ ವಿದ್ಯಾಭ್ಯಾಸ ಏನು ಸಾಧಿಸಿದೆಯೆಂದು ನೋಡುವುದಾದರೆ ಎಷ್ಟೋ ಬಿ.ಎ., ಎಂ.ಎ., ಗಳನ್ನು ತಯಾರುಮಾಡಿ ಏನು ಪ್ರಯೋಜನ? ಆತ ತನ್ನ ಜೀವನವನ್ನು ಸಾಧಿಸಬಲ್ಲನೇ? ಮನೆಯಲ್ಲಿ ಒದಿದುದ್ದಿಲ್ಲ. ಹೊರಗೆ ಹೋದರೆ ಆತನಿಗೆ ಕೆಲಸ ಸಿಕ್ಕುವುದಿಲ್ಲ. ತಿರುಗಿ ಮನೆಗೆ ಹೋದರೆ ಮನೆಯ ಕೆಲಸ ಮಾಡುವುದಕ್ಕಾಗುವುದಿಲ್ಲ ಅವನಿಗೆ. ಹೀಗಾದರೆ ನಮ್ಮ ದೇಶದ ಸ್ಥಿತಿ ಹೇಗೆ ಸುಧಾರಿಸುತ್ತದೆಂಬುದನ್ನು ನಾವು ಯೋಚನೆ ಮಾಡಬೇಕು. ಹೀಗಾಗಿ ಇಂದು ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಇದನ್ನು ನೋಡಿದರೆ, ಇದರಲ್ಲಿ ವಿಧಿಸಿರುವ ರೀತಿಯನ್ನು ಬಿಟ್ಟರೆ ಬೇರೆ ರೀತಿಯಿಲ್ಲ. ವಸ್ತುಗಳ ಮುಖಾಂತರ ವಿದ್ಯಾಭ್ಯಾಸ ನಡೆಯಬೇಕೆಂದು ಬಾಪೂಜಿಯವರು ಏನು ಹೇಳುತ್ತಿದ್ದರೋ ಅದನ್ನು ಬಿಟ್ಟು ಬೇರೆ ದಾರಿಯಿಲ್ಲ. ನೂಲು ತೆಗೆಯುವುದನ್ನು ಹೇಳಿಕೊಡುತ್ತಿರುವಾಗಲೇ ಇದು ಕಾಂಬೋಡಿ ಹತ್ತಿ, ಇದು ಜಯವಂತಿ—ಎಂದು ನಾನಾ ಜಾತಿಗಳನ್ನು ತಿಳಿಸಬಹುದು; ಅವು ಯಾವಯಾವ ಜಮೀನಿನಲ್ಲಿ ಬೆಳೆಯುತ್ತವೆಂದು ಹೇಳಬಹುದು. ಇದರಿಂದಾಗಿ ವಿಷಯವೂ ತಿಳಿಯುವುದಲ್ಲದೆ, ಎಂಥ ಭೂಮಿಯಲ್ಲಿ ಏನು ಬೆಳೆಯುತ್ತದೆಂದು ಭೂಮಿಯ ವಿವರಣೆಯೂ ತಿಳಿದಂತಾಯಿತು. ಆಮೇಲೆ ನೂಲಿನ ಎಳೆಗಳನ್ನು ಎಣಿಸಿ ಚಿಗಟು ಕಟ್ಟುವುದರಲ್ಲಿ ಗುಣಾಕಾರ, ಭಾಗಾಹಾರ ಲೆಕ್ಕಗಳನ್ನು ಕಲಿಸಬಹುದು. ಹೀಗೆ ನೂಲು ತೆಗೆಯುವ ಒಂದು ಕೆಲಸದ ಮುಖಾಂತರ ಹೇಗೆ ಪಾಠಗಳನ್ನು ಹೇಳಿಕೊಡಬಹುದೆಂದು ಹೇಳಿದ್ದಾರೆ. ಇದು ಮನಸ್ಸಿಗೂ ಚೆನ್ನಾಗಿ ಅಂಟುತ್ತದೆ. ಈ ದೃಷ್ಟಿಯಿಂದ ಈ ಸಭೆಯವರೆಲ್ಲರೂ ಈ ಸುಧಾರಣೆಗಳನ್ನು ಒಪ್ಪುತ್ತಾರೆಂದು ಒಂದು ಆಸೆಯಿತ್ತು. ಏಕೆಂದರೆ ಇದುವರೆಗೂ ಆಗಿರುವ ವಿದ್ಯಾವಂತರಿಂದ ದೇಶಕ್ಕೆ ದೊಡ್ಡ ಹಿತವಾಗಿಲ್ಲವೆಂದು ಎಲ್ಲರೂ ಒಪ್ಪಿದ್ದಾರೆ. ಎಲ್ಲೋ ಕೆಲವರು ಮಾತ್ರ ನೌಕರಿಗಳಲ್ಲಿದ್ದಾರೆ, ದೊಡ್ಡದೊಡ್ಡ ಸ್ಥಾನಗಳಲ್ಲಿದ್ದಾರೆ. ಆದ್ದರಿಂದ ಈ ರೀತಿಯಾದ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದರೆ. ದೇಶಕ್ಕೆ ಪ್ರಯೋಜನವಿಲ್ಲವೆಂಬುದು ಎಲ್ಲರಿಗೂ ಗೊತ್ತು. ಆದ್ದರಿಂದ ನಮ್ಮ ದೇಶದ ವಾತಾವರಣ ನೋಡಿಕೊಂಡು ನಮ್ಮ ಜನಾಂಗಕ್ಕೆ ಯಾವುದು ಅಂಟುತ್ತದೆಂಬುದನ್ನು ತಿಳಿದು ಅದನ್ನು ಮುಂದುವರಿಸಬೇಕೇ ವಿನಾ ಬೇರೆ ಮಾಡಿಕೊಂಡು ಹೋದರೆ ಒಳ್ಳೆಯದಾಗುವುದಿಲ್ಲ. ಇದಕ್ಕೆ ಶ್ರೀ ಭೀಮಪ್ಪನಾಯಕರು ಮಾತನಾಡುತ್ತ ರೈತ ಮಗನನ್ನು ಹೊಲಕ್ಕೆ ಹಿಡಿದುಕೊಂಡುಹೋಗಿ ಕಳೆ ಕೀಳುವುದನ್ನು ಹೇಳಿಕೊಡಬೇಕೇ ಎಂದು ಹೇಳಿದರು. ಹೌದು ಹೇಳಿಕೊಡಲೇಬೇಕು. ಅವನಿಗೇ ಸ್ವಲ್ಪವಟ್ಟಿಗೆ ಗೊತ್ತಾಗುವುದಾದರೂ ಅದೆಲ್ಲಾ ಕ್ರಮವಾಗಿ ಬಂದಿರುವುದಿಲ್ಲ. ಇಂಥ ಹದಕ್ಕೆ ಇಂಥ ಕಾಲಕ್ಕೆ ಹಾಕಿದರೆ ಏನು ಬೆಳೆ ಕೊಡುತ್ತದೋ ಅದನ್ನೇ ಬೇರೆ ಹದಕ್ಕೆ ಹಾಕಿದರೆ ಆ ಬೆಳೆ ಕೊಡುವುದಿಲ್ಲವೆಂಬುದು ತಿಳಿಯಬೇಕು. ಹಾಗೆಯೇ ಗೊಬ್ಬರ ಹೇಗೆಹಾಕಬೇಕು, ನೀರು ಹೇಗೆ ಬಿಡಬೇಕು ಎಂಬುದರಲ್ಲಿ ಒಂದೊಂದರಲ್ಲಿಯೂ ಒಂದು ಮಹತ್ವವಿದೆ. ಅದನ್ನು ಸಣ್ಣದು ಎಂದು ಅಸಡ್ಡೆ ಮಾಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಇವೆಲ್ಲವನ್ನೂ ಈ ದೃಷ್ಟಿಯಿಂದ ಯೋಚನೆಮಾಡಿ ಮುಂದೆ ಹೋಗಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಆಮೇಲೆ, ಇನ್ನೊಂದು ವಿಷಯ ಈ ಪುಸ್ತಕದಲ್ಲಿ ಹೇಳಲ್ಪಟ್ಟಿದೆ. ನರ್ಸರಿ ಸ್ಕೂಲುಗಳನ್ನು ಇನ್ನುಮೇಲೆ ಸರ್ಕಾರದವರು ಏರ್ಪಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಅವರು ಹೇಳಿರುವಂತೆ ಸ್ಥಳೀಯ ಸಂಸ್ಥೆಗಳಿಗೆ ಈ ಸ್ಕೂಲುಗಳನ್ನು ವಹಿಸಿಕೊಟ್ಟರೆ ಅವರಿಗೆ ಇದು ಬಹಳ ದೊಡ್ಡಜವಾಬ್ದಾರಿ. ಸಣ್ಣಮಕ್ಕಳಿಗೆ ಯಾವ ರೀತಿಯ ಶಿಕ್ಷಣ ಕೊಡುತ್ತೇವೆಯೋ, ಯಾವ ಭಾವನೆಯನ್ನು ಬೆಳೆಸುತ್ತೇವೆಯೋ ಅದೇ ಮುಂದೆ ಜನಾಂಗಕ್ಕೆ ಉಳಿಯುವುದು. ಇಂಥ ಸಂದರ್ಭದಲ್ಲಿ ಸರಿಯಾದ ಶಿಕ್ಷಣ ಹೊಂದಿರುವ training ಆಗಿರುವ ಉಪಾಧ್ಯಾಯರುಗಳಿಲ್ಲದಿದ್ದರೆ ಈ ನರ್ಸರಿ ಸ್ಕೂಲುಗಳಿಂದೇನೂ ಪ್ರಯೋಜನವಿಲ್ಲ. ಆದ್ದರಿಂದ ತರಪೇತಾದ ಉಪಾಧ್ಯಾಯರುಗಳನ್ನು ಕೊಟ್ಟು ನರ್ಸರಿ ಸ್ಕೂಲುಗಳನ್ನು ನಡೆಸುವ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಬೇಕು.

ಇನ್ನೊಂದು ನ್ಯೂನತೆ ನಮ್ಮ ಜನರಲ್ಲಿ ಕಂಡುಬರುತ್ತಿದೆ. ವಿದ್ಯೆ ಎಂಬುದು ನಮಗೆಲ್ಲರಿಗೂ ಬೇಕು ಎಂದು ಹೇಳುತ್ತಿದ್ದೇವೆ. ವಿದ್ಯೆ ಎಂದರೆ ಎಂಥ ವಿದ್ಯೆ? ನಾನಾ ತೆರದ ಭಾಷೆಗಳು ಬೇರೆ ಈಗಿವೆ. ಇಂಗ್ಲೀಷು, ಹಿಂದಿ, ಗುಜರಾತಿ, ಕನ್ನಡ ಮುಂತಾಗಿ ನಾನಾ ಭಾಷೆಗಳಿವೆಯಲ್ಲಾ ಇವೆಲ್ಲವನ್ನೂ ಕಲಿತರೆ ವಿದ್ಯಾವಂತರೆಂತರೇ? ಅಥವಾ ಇಂಗ್ಲೀಷನ್ನು ಕಲಿತರೆ ವಿದ್ಯಾವಂತರೆಂತರೇ?

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ಅಥವಾ ಹಿಂದಿ, ಸಂಸ್ಕೃತಗಳನ್ನು ಕಲಿತರೆ ಸಾಕೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ನಿಜವಾದ ವಿದ್ಯೆಯೆಂದರೆ, ಮನುಷ್ಯನು ತಾನು ಹುಟ್ಟಿದ್ದೇಕೆ, ನಾವು ಎಂದರೇನು, ನಮ್ಮ ದೇಶ ಎಂದರೇನು ಎಂಬುದನ್ನು ತಿಳಿದುಕೊಂಡು ನಾವು ಮುಂದಿನ ಭಾವಿ ಜನಾಂಗದ ಸತ್ಪ್ರಜೆಗಳಾಗಿ ದೇಶವನ್ನು ಕಟ್ಟಲಿಕ್ಕೆ ಸಾಧನವಾಗಿರಬೇಕು. ಇದಲ್ಲದೆ ಇನ್ನೊಂದನ್ನೂ ಎಲ್ಲರೂ ಕಲಿಯಬೇಕು. ಏನೆಂದರೆ ನಮ್ಮ ನೀತಿಯಮಟ್ಟವನ್ನು ಏರಿಸುವ ದೃಷ್ಟಿ ನಮ್ಮ ಪಾಠಗಳೊಳಗೆ ಕಾಣುತ್ತಿರಬೇಕು. ಹಿಂದೆ ವಿದ್ಯಾಭ್ಯಾಸವು ಯಾವರೀತಿಯಿತ್ತು ಎಂಬುದನ್ನು ನೋಡಿ. ಶಾಲೆಗೆ ಹೋದ ತಕ್ಷಣ 'ಓಂ ನಮಃ ಶಿವಾಯ' ಎಂದು ಹೇಳಿಕೊಡುತ್ತಿದ್ದರು. ಈಗ ಅದೂ ಇಲ್ಲ. ಮೂರು ಕೋಟಿ ರೂಪಾಯಿಗಳನ್ನು ನಾವಿಂದು ಖರ್ಚು ಮಾಡುತ್ತಿದ್ದೇವೆ ಇಷ್ಟು ಖರ್ಚು ಮಾಡಿದರೂ ನಾವು ತಯಾರು ಮಾಡುತ್ತಿರುವುದೇನು? ಕೇವಲ ಕೆಲವು ಮೆಷಿನರಿಗಳನ್ನು ತಯಾರು ಮಾಡುತ್ತಿದ್ದೇವೆ. ಅಷ್ಟೇ ಅಲ್ಲದೆ ಈ ವರದಿಯಲ್ಲಿ ಹೇಳಿರುವಂತೆ ಉಪಾಧ್ಯಾಯರುಗಳ ಸಂಖ್ಯೆ ಸಾಲದೆಂದು ಹೇಳಿರುವುದೇನೋ ನಿಜ. ಒಂದೊಂದು ಸ್ಕೂಲಿಗೆ ಒಬ್ಬೊಬ್ಬ ಉಪಾಧ್ಯಾಯರನ್ನು ನೇಮಿಸುತ್ತೀರಿ. ಇವರಾದರೂ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿದ್ದಾರೆಯೇ? ಬರೀ ಬೆರಳುಗಳನ್ನೆಣಿಸುವುದು ಮಾತ್ರ ಅವರು ಮಾಡುತ್ತಿರುವುದು. ಇದು ವಾಸ್ತವವಾಗಿ ಇರತಕ್ಕ ಪರಿಸ್ಥಿತಿ. ನಾವು ತೆಗೆದುಕೊಂಡ ದುಡ್ಡು ಸಾರ್ಥಕವಾಗಬೇಕು, ದೇಶದ ದುಡ್ಡು ತೆಗೆದುಕೊಂಡ ಮೇಲೆ ದೇಶಕ್ಕೆ ಸೇವೆ ಸಲ್ಲಿಸಬೇಕೆಂಬ ಭಾವನೆ ಅವರಿಗಿಲ್ಲ. ಪಾಠವನ್ನು ಮುಗಿಸಿ ಸರಿಯಾಗಿ ಮನೆಗೆ ಬಂದರಾಯಿತು ಎಂಬ ಮನೋಭಾವನೆಯಿದ್ದರೆ ಅಂಥ ಉಪಾಧ್ಯಾಯರುಗಳಿಂದ ನಮ್ಮ ದೇಶ ಉಳಿಯುತ್ತದೆಯೇ, ನಾವು ದೇಶವನ್ನು ಕಟ್ಟುವೆವೇ? ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಉಪಾಧ್ಯಾಯರುಗಳಿಗೆ ಒಳ್ಳೆಯ ಟ್ರೈನಿಂಗ್ ಆಗಬೇಕು. ಅವರ ಮನೋಭಾವನೆಯನ್ನು ಬದಲಾವಣೆ ಮಾಡಬೇಕು. ಹಿರಿಯರಲ್ಲಿ ಪೂಜ್ಯತೆ, ದೇವರುಗಳಲ್ಲಿ ಭಕ್ತಿ—ಈ ರೀತಿಯಾಗಿ ನೈತಿಕ ಮಟ್ಟದ ಬೆಳವಣಿಗೆ, ನಮ್ಮ ದೇಶದ ಸಾಂಸ್ಕೃತಿಕ ಬೆಳವಣಿಗೆ ಯಾವುದು ಬೇಕು ಅದನ್ನು ಸಾಧಿಸುವುದಕ್ಕನುಸಾರವಾಗಿ ನಮ್ಮ ಮಕ್ಕಳ ಮನೋಭಾವನೆಯನ್ನು ಬೆಳಸದೆಹೋದರೆ ನಮ್ಮ ವಿದ್ಯೆಯಿಂದೇನೂ ಪ್ರಯೋಜನವಾಗುವುದಿಲ್ಲ.

ಈಗ ಬದಲಾವಣೆಗಳಾಗುವ ಕಾಲ. ನನಗೆ ಮಾತನಾಡಬೇಕೆಂದು ಇಷ್ಟವಿರಲಿಲ್ಲ, ಆದರೂ ನನ್ನ ಉದ್ದೇಶವನ್ನು ನನಗೆ ತಿಳಿದಮಟ್ಟಿಗೆ ಹೇಳುವುದು ನನ್ನ ಕರ್ತವ್ಯವೆಂದು ನಿಂತಿದ್ದೇನೆ. ಪಾರಿಭಾಷಿಕ ಶಿಕ್ಷಣವನ್ನು ಇಂಗ್ಲೀಷಿನಲ್ಲಿ ಕೊಡಬೇಕೆಂದು ಹೇಳುತ್ತಾರೆ, ಇದರ ಅರ್ಥ ನನಗಾಗುವುದಿಲ್ಲ. ಇದು ಬೇಡವೇಬೇಡ. ಎಲ್ಲವನ್ನೂ ಕನ್ನಡದಲ್ಲೇ ಹೇಳುವಂತೆ ಏರ್ಪಾಡು ಮಾಡಬೇಕು. ಹಿಂದೆ ನಮ್ಮ ದೇಶದಲ್ಲಿ ಅನೇಕ ಸಂಸ್ಕೃತ ಕನ್ನಡ ಪಂಡಿತರೂ ಕವಿಪುಂಗವರೂ ಇದ್ದರೆಂದು ಹೇಳುತ್ತಾರೆ. ಆದರೂ ಈಹೊತ್ತು ಕನ್ನಡದಲ್ಲಿ ಸಾಕಷ್ಟು ಶಬ್ದಗಳೇ ಇಲ್ಲವೆಂದು ಹೇಳುತ್ತಾರೆ. ಸರಿಯಾದ ಅವಕಾಶ ಮಾಡಿಕೊಟ್ಟರೆ, ಅನೇಕ ಸಾಹಿತಿಗಳು ಹೊರಗಿನಿಂದ ಕೂಡ ಬರುತ್ತಾರೆ, ಶಬ್ದಭಂಡಾರದಿಂದ ಹೊಸ ಶಬ್ದಗಳನ್ನು ತೆಗೆಯುತ್ತಾರೆ. ಇಂಗ್ಲಿಷನ್ನು ಸಂಪೂರ್ಣವಾಗಿ ಬಿಟ್ಟುಬಿಡಿ ಎಂದು ನಾನು ಹೇಳುವುದಿಲ್ಲ. ಅದೂ ಬೇಕು. ಅದನ್ನು ಕಲಿಯಲು ಯಾರಿಗಿಷ್ಟವಿದೆಯೋ ಅವರು ಕಲಿಯಬಹುದು. ಪ್ರತಿಯೊಬ್ಬ ಮನುಷ್ಯನೂ ಸಾಧಾರಣವಾಗಿ ಹದಿನೆಂಟನೆಯ ವಯಸ್ಸಿಗೆ ಬಂದರೆ, ಯಾವುದಾದರೂ ಕೆಲಸ ಮಾಡಲಿ ತನ್ನ ಜೀವನೋಪಾಯಕ್ಕೆ; ಅದಕ್ಕೆ ನನ್ನ ಅಭ್ಯಂತರವಿಲ್ಲ. ಕುಡಿಕೆಮಾಡಲಿ, ಮಡಕೆಮಾಡಲಿ, ಚರ್ಮದ ಕೆಲಸಮಾಡಲಿ, ಚಿಂತೆಯಿಲ್ಲ. ಹಿಂದೆ ಬಸವಣ್ಣನವರು ಕಾಯಕವೇ ಕೈಲಾಸವೆಂದು ಹೇಳಿದ್ದಾರೆ. ನಿರುದ್ಯೋಗಿಯಾಗಿ ಒಬ್ಬರಿಗೆ ಹೊರೆಯಾಗಿರುವಂತೆ ಮಾಡುವುದು ವಿದ್ಯೆಯಲ್ಲ. ನಿಜವಾಗಿ ತನ್ನ ಕಾಲಮೇಲೆ ತಾನು ನಿಲ್ಲುವುದು ವಿದ್ಯೆ, ಸ್ವಾವಲಂಬನೆಯನ್ನು ಕಲಿಸುತ್ತಿದ್ದ ಹಿಂದಿನ ಕಾಲದಲ್ಲಿ ಕೊಡುತ್ತಿದ್ದ ವಿದ್ಯೆ ನಮ್ಮ ಮಕ್ಕಳಿಗೆ ಬೇಕು. ಈ ವಿದ್ಯಾಸುಧಾರಣೆಗೆ ಆರುಕೋಟಿ ರೂಪಾಯಿ ಖರ್ಚು ಮಾಡಬೇಕೆಂದರೆ, ಇದರಲ್ಲಿ ದೊಡ್ಡ ತೊಡಕು ಬರುತ್ತದೆ. ಈಗ ವರ್ಷವರ್ಷವೂ ಆರುಕೋಟಿ ರೂಪಾಯಿ ಖರ್ಚು ಮಾಡಬೇಕಾದರೆ ಹೊಸ ತೆರಿಗೆಗಳನ್ನು ಹಾಕಬೇಕಾಗುತ್ತದೆ; ಆದರೆ ಹೊಸ ತೆರಿಗೆಗಳನ್ನು ನಮ್ಮ ಜನ ಹೊರುವುದಕ್ಕೆ ಖಂಡಿತವಾಗಿಯೂ ತಯಾರಾಗಿಲ್ಲ. ಈಗಿರತಕ್ಕ ತೆರಿಗೆಗಳ ಹೊರೆಯೇ ಜಾಸ್ತಿಯಾಗಿದೆಯೆಂಬ ಕೂಗು ಎಲ್ಲಿ ಹೋದರೂ ಕೇಳಿಬರುತ್ತಿರುವಾಗ, ಹೊಸ ತೆರಿಗೆ ಹಾಕಿ ಅದನ್ನು ಕೊಡಿ ಎಂದು ಜನರಲ್ಲಿ ಹೋದರೆ ಸರ್ಕಾರಕ್ಕೆ ತೊಂದರೆಯಾಗುತ್ತದೆಂದು ಹೇಳಬೇಕಾಗಿದೆ. ಆದುದರಿಂದ ಹೊಸ ತೆರಿಗೆ ಹಾಕುವುದು ಬೇಡ. ಹಾಸಿಗೆಯಿದ್ದಷ್ಟು ಕಾಲು ಚಾಚೋಣ. ಮಕ್ಕಳ ಶಿಕ್ಷಣಕ್ಕೆ ಆಶ್ರಮಗಳನ್ನು ಏರ್ಪಾಡುಮಾಡೋಣ; ದೊಡ್ಡ ಮನುಷ್ಯರೂ ಧಾರ್ಮಿಕರೂ ಮುಂದೆಬಂದು ದಾನಮಾಡಿದರೆ ಕಟ್ಟಡಗಳನ್ನು ಕಟ್ಟಿಸಿ ನಡೆಸೋಣ. ನಮ್ಮ ರಾಜ್ಯಾಂಗದಲ್ಲಿ ಹೇಳಿರುವಪ್ರಕಾರ ಹೋಗಲೇಬೇಕಾದುದು ನ್ಯಾಯವೆಂದು ಈಗಾಗಲೇ ಅನೇಕರು ಹೇಳಿದ್ದಾರೆ. ಎಲ್ಲಾ ದೇಶಗಳಲ್ಲಿಯೂ 14 ವರ್ಷ ವಯಸ್ಸಿನವರೆಗೆ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡುತ್ತಾರೆಂದಮೇಲೆ ಮೈಸೂರು ದೇಶ ಮಾದರಿದೇಶವಾಗಿ, ಈ ಪದ್ಧತಿ ಇದುವರೆಗೂ ಬೆಳೆದುಕೊಂಡು ಬಂದಿರುವುದನ್ನು, ಖೋತಾಮಾಡಿದರೆ ಅನ್ಯಾಯ. ಈ ಸುಧಾರಣೆಗಳಪ್ರಕಾರ 14 ವರ್ಷವನ್ನು 12 ವರ್ಷ ಮಾಡಿದ್ದಾರೆ. ಅದನ್ನು ಖಂಡಿತವಾಗಿ 14 ವರ್ಷ ಮಾಡಬೇಕು. ಈಗ ಕಂದಾಯಕೊಡುವ ರೈತನಿಗೆ ಯಾವ ರೀತಿಯಲ್ಲಿಯೂ ಹೆಚ್ಚಿನ ಸಹಾಯವಾಗುತ್ತಿಲ್ಲ. ಹಳ್ಳಿಯವನಿಗೆ ಏನಾದರೂ ಸಹಾಯ ಕೊಡಬೇಕೆಂದರೆ ಅವನ ಮಕ್ಕಳಿಗೆ ಅಕ್ಷರವನ್ನಾದರೂ ಕಲಿಸಿ. ಇಂಥವರ ಮೇಲೆ ಇನ್ನೂ ಹೆಚ್ಚು ತೆರಿಗೆ ಹಾಕಿದರೆ ದೇಶ ಉದ್ಧಾರವಾಗುವುದಿಲ್ಲ. ದೇಶದಲ್ಲಿ ಹೆಂಗಸರಿಗೂ ಗಂಡಸರಿಗೂ 14 ವರ್ಷದವರೆಗೆ ಉಚಿತ ವಿದ್ಯಾಭ್ಯಾಸ ದೊರಕಬೇಕು. ಹೆಣ್ಣುಮಕ್ಕಳಿಗೆ ಅಷ್ಟು ಅಗತ್ಯವಿಲ್ಲವೆಂದು ಹೇಳುವುದು ಸರಿಯಲ್ಲ. ಹೆತ್ತವರು ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಫೀಜು ಕೊಡುತ್ತಾರೆಂದು ಹೇಳುತ್ತಾರೆ. ಹೆಣ್ಣುಮಕ್ಕಳಿಗಿರುವ ಜವಾಬ್ದಾರಿ ಗಂಡುಮಕ್ಕಳಿಗಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಯಾವ ವಿಷಯವೇ ಆಗಲೀ ಮಕ್ಕಳು ತಾಯಿಯನ್ನು ಕೇಳುತ್ತಾರೆಯೇ ಹೊರತು ತಂದೆಯನ್ನಲ್ಲ. ತಾಯಿಯ ಜವಾಬ್ದಾರಿ ಹೆಚ್ಚು. ಅದಕ್ಕೇ ನಮ್ಮಲ್ಲಿ ಎಲ್ಲರಿಗಿಂತಲೂ ತಾಯಿಯೇ ಮುಖ್ಯವೆಂದು ಹೇಳುವುದು. ಹೀಗಿರಬೇಕಾದರೆ ಅವರಿಗೆ ಒಳ್ಳೆಯ ಶಿಕ್ಷಣ ಆವಶ್ಯಕ. ಹೆಣ್ಣುಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ ಕೊಡಲೇಬೇಕು. ಅಂದಮಾತ್ರಕ್ಕೇ ಆರುಕೋಟಿ ರೂಪಾಯಿ ಖರ್ಚುಮಾಡಬೇಕಾಗಿಲ್ಲ, ಇರುವುದರಲ್ಲೇ ಮಾಡಬಹುದು; ಹೊಸ ತೆರಿಗೆಯನ್ನು ಹಾಕ

ಬೇಕಾಗಿಲ್ಲ. ನಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಟ್ಟು ನಮ್ಮ ದೇಶದ ಮುಂದಿನ ಪ್ರಜೆಗಳಾಗಲು ಸರಿಯಾದ ತಳಹದಿ ಹಾಕಬೇಕು. ಕೇಂದ್ರದಿಂದ ಸೆಕೆಂಡರಿ ವಿದ್ಯಾಭ್ಯಾಸದ ವಿಷಯದಲ್ಲಿ ವರದಿ ಬರುವುದಾಗಿದೆಯೆಂದು ಹೇಳಿದರು. ಅದನ್ನೂ ಕಾಯೋಣ. ಏಕೆಂದರೆ ನಾವು ಮಾಡುವ ಕೆಲಸವನ್ನು ಸರಿಯಾಗಿ ಮಾಡಬೇಕು ಈಹೊತ್ತು ಒಂದುಮಾಡಿ ನಾಳೆ ಅದನ್ನು ಬದಲಾಯಿಸುವುದು ಬೇಡ. ಈಗ ವಿದ್ಯಾರ್ಥಿಗಳಲ್ಲಿರುವ ಕೆಲವು ಭಾವನೆಗಳನ್ನು ಬದಲಾವಣೆಮಾಡಬೇಕು. ವಿದ್ಯಾವಂತರಾದಮೇಲೆ ಮತ್ತೆ ಹಳ್ಳಿಗೆಹೋಗಿ ಅಲ್ಲಿ ಹೇಗೆ ಕೆಲಸಮಾಡುವುದು ಎಂಬ ಭಾವನೆ ಹೋಗಬೇಕು. ನಮ್ಮಲ್ಲಿ ಕೆಲವರಲ್ಲಿರುವ ಭಾವನೆಯೂ ಬದಲಾವಣೆಯಾಗಬೇಕು. ಹೆಣ್ಣುಮಕ್ಕಳು ವಿದ್ಯಾವತಿಯರಾದಮಾತ್ರಕ್ಕೇ ಅವರು ಶಾಸನಸಭೆಗಳಿಗೆ ಬರುತ್ತಾರೆಂದು ತಿಳಿದುಕೊಳ್ಳಬಾರದು. ಎಷ್ಟೋಜನ ವಿದ್ಯಾವಂತ ಮಹಿಳೆಯರಿದ್ದರೂ, ಈಹೊತ್ತು ಮೂರು ಜನ ಮಹಿಳೆಯರು ಮಾತ್ರ ಈ ಸಭೆಯಲ್ಲಿದ್ದಾರೆ. ನಾಳೆ ಬರಬೇಕೆಂದು ಕಾಲಿಗೆಬಿದ್ದರೂ ಖಂಡಿತವಾಗಿ ಬರುವುದಿಲ್ಲ. ಉತ್ತಮ ಗೃಹಿಣಿಯಾಗಬೇಕೆಂಬುವೇ ಹೆಂಗಸಿನ ಆಕಾಂಕ್ಷೆ. ದೇವರು ನಮಗೆ ಅಲ್ಲಿ ಜವಾಬ್ದಾರಿ ಕೊಟ್ಟಿದ್ದಾನೆ, ಅವಕಾಶಕೊಟ್ಟಿದ್ದಾನೆ. ಇದನ್ನು ಗಂಡಸರಿಂದ ನಾವೇನೂ ಕಲಿತುಕೊಳ್ಳಬೇಕಾಗಿಲ್ಲ. ಆದರೂ ಹೆಂಗಸು ವಿದ್ಯಾವಂತೆಯಾಗಬೇಕು, ಜ್ಞಾನಾರ್ಜನೆ ಮಾಡಬೇಕು. ಒಂದು ಕೈಯಿಂದ ರಾಗಿಬೀಸಿದರೆ ಇನ್ನೊಂದುಕೈಯಿಂದ ರಾಜ್ಯವಾಳಲು ಯೋಗ್ಯತೆಯಿರಬೇಕು. ಒಟ್ಟಿನಲ್ಲಿ ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಉಚಿತವಾಗಿ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ)—ಸ್ವಾಮಿ, ವಿದ್ಯಾಭ್ಯಾಸ ಸುಧಾರಣೆಯ ವಿಷಯದಲ್ಲಿ ನಿನ್ನೆಯಿಂದ ವಿಪುಲವಾಗಿ ಚರ್ಚೆಯಾಗಿದೆ. ಈಗ ನಮ್ಮ ದೇಶದಲ್ಲಿರುವ ವಿದ್ಯಾಭ್ಯಾಸಕ್ರಮ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ. ಹಿಂದೆ ಯಾರು ನಮ್ಮ ದೇಶವನ್ನಾಳುತ್ತಿದ್ದರೋ ಅವರ ಇಚ್ಛಾನುಸಾರವಾದ ವಿದ್ಯಾಭ್ಯಾಸ ಪದ್ಧತಿ ನಡೆದುಕೊಂಡುಬಂದಿದೆ. ಇದು ಸರಿಯಾದುದಲ್ಲ, ಈಗಿನ ಪರಿಸ್ಥಿತಿಗೆ ಹೊಂದಿಕೊಳ್ಳುವುದಿಲ್ಲ, ಇದನ್ನು ಬದಲಾಯಿಸಿ ಈ ನಮ್ಮ ದೇಶದ ಸಂಸ್ಕೃತಿಗೆ ತಕ್ಕಂತಹ, ದೇಶಾಭಿಮಾನ ಬೆಳೆಸುವಂತಹ ವಿದ್ಯಾಭ್ಯಾಸಕ್ರಮವನ್ನು ಜಾರಿಗೆ ತರಬೇಕು, ದೇಶದ ಹಿತದೃಷ್ಟಿಯನ್ನೊಳಗೊಂಡ ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಕೊಡಬೇಕೆಂದು ಅನೇಕ ಮಹನೀಯರು ಹೇಳುತ್ತಿದ್ದರು. ಇದನ್ನು ಗಮನಿಸಿ, ಈ ಸಮಯದಲ್ಲಿ ಸರ್ಕಾರದವರು ಒಂದು ಸಮಿತಿಯನ್ನು ಮಾಡಿ, ಆ ಸಮಿತಿಯವರ ಸಲಹೆಗಳನ್ನೊಳಗೊಂಡ ಈ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ನ್ಯೂನತೆಗಳಿರಬಹುದು. ನಮ್ಮ ದೇಶದ ಆಸ್ತಿಯಾದ, ಆಧಾರವಾದ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸ ಚೆನ್ನಾಗಿ ಆದರೆ ಅವರ ಮುಂದಿನ ವಿದ್ಯಾಭ್ಯಾಸ ಚೆನ್ನಾಗಿ ಆಗುತ್ತದೆ ಎಂದು ಹೇಳುತ್ತಿದ್ದೆವು. ಇದರ ಬಗ್ಗೆ ಕೆಲವು ಸಲಹೆಗಳನ್ನು ನೀಡಿದ್ದಾರೆ. ಇದೊಂದು ದೊಡ್ಡ ಪ್ರಯೋಗ; ಇದನ್ನು ಕಾರ್ಯಗತಮಾಡಿದರೆ, ಸರಿಯಾಗಿ ಕಾರ್ಯರೂಪಕ್ಕೆ ತರುವುದಾದರೆ ಇದರಿಂದ ಯಾವರೀತಿಯ ಫಲ ಬರುತ್ತದೆಂಬುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ. ಇದರಲ್ಲಡಗಿರುವ ತತ್ವ ಬಹು ಮುಖ್ಯವಾದುದು. ಪ್ರಾಥಮಿಕ ವಿದ್ಯಾಭ್ಯಾಸದ ವಿಷಯದಲ್ಲಿ ಅನೇಕ ಸಮಸ್ಯೆಗಳಿವೆ, ಇವುಗಳನ್ನು ಬಿಡಿಸಬೇಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಪ್ರತಿವರ್ಷವೂ ಕೋಟ್ಯಂತರ ರೂಪಾಯಿ ಖರ್ಚಾಗುತ್ತದೆ. ಇದು ಫಲದಾಯಕವಾಗಬೇಕಾದರೆ ಸರಿಯಾದ ಶಿಕ್ಷಣಪಡೆದ ಉಪಾಧ್ಯಾಯರು ಆವಶ್ಯಕ. ಈಗ ಸುಶಿಕ್ಷಿತರಾದ ಉಪಾಧ್ಯಾಯರಿಲ್ಲವೆಂದು ಹೇಳುತ್ತಾರೆ, ಕಟ್ಟಡಗಳಿಲ್ಲವೆಂದು ಹೇಳುತ್ತಾರೆ. ಒಂದೊಂದು ಶಾಲೆಯಲ್ಲಿ ನೂರಾರುಜನ ವಿದ್ಯಾರ್ಥಿಗಳಿದ್ದಾರೆ; ಅಲ್ಲಿ ಒಬ್ಬರೇ ಉಪಾಧ್ಯಾಯರಿರುತ್ತಾರೆ. ಉಪಾಧ್ಯಾಯರು ಶಿಕ್ಷಣಪಡೆದಿರುವುದಿಲ್ಲ. ಕಟ್ಟಡಗಳ ಅಭಾವವನ್ನು ಪರಿಹರಿಸಲು ಹಣ ವೆಚ್ಚ ಮಾಡಿ ಕಟ್ಟಡಗಳನ್ನು ಕಟ್ಟಿಸುವುದು ಕಷ್ಟ. ಇದಕ್ಕೆ ಸರ್ಕಾರದವರಿಗೆ ಅಪಾರ ಹಣ ಬೇಕಾಗುತ್ತದೆ. ಇದನ್ನೊದಗಿಸಬೇಕಾದರೆ ಜನರಮೇಲೆ ಹೆಚ್ಚು ತೆರಿಗೆ ಹಾಕಬೇಕಾಗುತ್ತದೆ. ಈಬಗ್ಗೆ ಈ ವರದಿಯಲ್ಲಿ ಕೆಲವು ಸಲಹೆಗಳಿವೆ. ಇದರಿಂದ ಜನರಿಗೆ ಕಷ್ಟವಾಗುತ್ತದೆ. ಈಗಾಗಲೇ ಸ್ಕೂಲುಫೀಜು ಹೆಚ್ಚಾಗಿದೆ. ಒಂದೆ ಸಾರಿ ಸ್ಕೂಲು ಫೀಜುಗಳನ್ನು ಹೆಚ್ಚಿಸಿದರೆ ಜನರಿಗೆ ತೊಂದರೆಯಾಗುತ್ತದೆ. ಅದರಲ್ಲಿಯೂ ಪ್ರೈಮರಿ ಮಿಡ್ಲ್ ಸ್ಕೂಲುಗಳಲ್ಲಿ ಫೀಜು ಹಾಕಿದರೆ ಬಹಳ ಕಷ್ಟವಾಗುತ್ತದೆ. ಈಗ ವಿದ್ಯಾಭ್ಯಾಸದಮೇಲೆ ಖರ್ಚಾಗುತ್ತಿರುವ ಹಣದಲ್ಲಿ ಹೆಚ್ಚುಭಾಗ ಪಟ್ಟಣಗಳಿಗೆ ಖರ್ಚಾಗುತ್ತಿದೆ; ಇದರ ಫಲವನ್ನು ಪಡೆಯುವ ಹಳ್ಳಿಗಳ ಸಂಖ್ಯೆ ಬಹಳ ಕಡಿಮೆಯೆಂದು ಹೇಳಬಹುದು. ಈಚೆಗೆ ಅಲ್ಪಸ್ವಲ್ಪ ಹಳ್ಳಿಗಾಡಿನವರು ಹೆಜ್ಜೆಯನ್ನು ಮುಂದಿಡುತ್ತಿದ್ದಾರೆ. ಇಂಥಾ ಕಾಲದಲ್ಲಿ ಫೀಜನ್ನು ಹೆಚ್ಚುಮಾಡಿದರೆ ಅವರಿಗೆ ಬಹಳ ಕಷ್ಟವಾಗುತ್ತದೆ.

ಇನ್ನು ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲುಗಳಲ್ಲಿ ಹೆಣ್ಣು ಮತ್ತು ಗಂಡುಮಕ್ಕಳಿಗೆ ಸಹ ವಿದ್ಯಾಭ್ಯಾಸವಿರಬೇಕೇ ಬೇಡವೇ ಎಂಬುದು ಒಂದು ಪ್ರಶ್ನೆ. ಪ್ರೈಮರಿ ಮತ್ತು ಮಿಡ್ಲ್‌ಸ್ಕೂಲುಗಳಲ್ಲಿ ಜೊತೆಯಲ್ಲಿಯೇ ಇದ್ದು ಹೈಸ್ಕೂಲಿನಲ್ಲಿ ಬೇರೆ ಇರಬೇಕೆಂದು ಹೇಳಿದ್ದಾರೆ. ಈ ಅಭಿಪ್ರಾಯವನ್ನು ನಾನು ಪುಷ್ಟೀಕರಿಸುತ್ತೇನೆ. ಕಾಲೇಜಿಗೆ ಹೋದಮೇಲೆ ಸಹವಿದ್ಯಾಭ್ಯಾಸವಿರುವುದೇ ಒಳ್ಳೆಯದು.

ಈ ಪ್ರೈಮರಿ ಎಜ್ಯುಕೇಷನ್ನಿಗೆ ಒಂದು ಸಮಿತಿಯನ್ನು ಮಾಡಿ ಬೇರೆ ಒಂದು ತರಹದಲ್ಲಿ ಇದನ್ನು ಬದಲಾವಣೆ ಮಾಡಬೇಕೆಂದು ಶಿಫಾರ್ಸುಮಾಡಿದ್ದಾರೆ. ಇದು ಬಹಳ ಸಂತೋಷದ ವಿಷಯ. ಇದಕ್ಕೆ ಪೂರ್ವಭಾವಿಯಾಗಿ ಸುಶಿಕ್ಷಿತ ಮಹಿಳೆಯರನ್ನುಉಪಾಧ್ಯಾಯಿನಿಯರನ್ನಾಗಿ ನೇಮಿಸಬೇಕೆಂದು ಹೇಳಿದ್ದಾರೆ. ಅದೂ ಸಹ ಒಂದು ಸಂತೋಷದ ವಿಷಯ. ಅದಕ್ಕೇ ಒಂದು ಸಮಿತಿಯನ್ನು ಮಾಡಿ ಅದಕ್ಕೆ ಡೈರೆಕ್ಟರನ್ನು ನೇಮಕಮಾಡುವಾಗ ಮಹಿಳಾ ಡೈರೆಕ್ಟರವರನ್ನೇ ನೇಮಿಸುವುದು ಉತ್ತಮ. ಇದೇ ರೀತಿ ಈ ಸ್ಕೂಲು ಇನ್ಸ್‌ಪೆಕ್ಟರುಗಳು ಮತ್ತು ಡಿ.ಇ.ಓ. ರವರುಗಳನ್ನುಸಹ ನೇಮಿಸಬೇಕಾಗಿದೆ. ಈಗ ಪುರುಷರಿಗಿಂತಲೂ ಒಂದು ಹೆಚ್ಚಿನ ಸ್ಥಾನಮಾನ ಸ್ತ್ರೀಯರಿಗೆ ಲಭಿಸಬೇಕಾಗಿದೆಯೆಂದು ನಾನು ವಾದಿಸುತ್ತಿದ್ದೇನೆಂದು ತಾವುಗಳಾರೂ ಭಾವಿಸಬಾರದು. ನಾನು ಕೇಳುತ್ತಿರುವುದು ನ್ಯಾಯವಾದದ್ದು.

ಆದರೆ ನಾನೀಗ ಈ ಹೈಸ್ಕೂಲು ವಿದ್ಯಾಭ್ಯಾಸದ ವಿಷಯದಲ್ಲಿ ನನ್ನ ಅಭಿಪ್ರಾಯವೇನಿರುತ್ತೆಂಬುದನ್ನು ಈಗ ಅಷ್ಟಾಗಿ ಸೂಚಿಸಲು ಇಷ್ಟಪಡುವುದಿಲ್ಲ. ಏತಕ್ಕೆಂದರೆ ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರಿಂದ ನೇಮಕಮಾಡಲ್ಪಟ್ಟಿರುವಂಥ ಒಂದು ಸಮಿತಿಯವರ ವರದಿ ಹೊರಬೀಳುವ ಮುನ್ನವೇ ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಅಷ್ಟು ಸೂಕ್ತವಾದ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ದ್ದಲ್ಲವೆಂದು ನಾನು ಭಾವಿಸಿದ್ದೇನೆ. ಆದರೆ ಈಗ ಈ ಇಂಟರ್‌ಮೀಡಿಯಟ್ ಕಾಲೇಜುಗಳನ್ನು ಹೈಸ್ಕೂಲುಗಳ ದರ್ಜೆಗೆ ಕೆಳಕ್ಕೆ ಇಳಿಸಿ, ಇವುಗಳನ್ನು ಡೈರೆಕ್ಟರವರ ಅಧೀನಕ್ಕೊಳಪಡಿಸುವುದು ಅಷ್ಟು ಸೂಕ್ತವಾದುದಲ್ಲವೆಂದೇ ನನ್ನ ಅಭಿಪ್ರಾಯ, ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ನೇಮಿಸಿರುವ ಸಮಿತಿಯ ವರದಿ ಹೊರ ಬಿದ್ದ ಹೊರತು ನಾನು ಈಗಲೇ ಏನನ್ನೂ ಹೊರಪಡಿಸಲು ಇಷ್ಟಪಡುವುದಿಲ್ಲ.

ಇನ್ನು ತರಗತಿಗಳನ್ನು ಬೆಳಗಿನ ತರಗತಿಗಳನ್ನಾಗಿ ಮಾಡತಕ್ಕ ವಿಚಾರದಲ್ಲಿ ಎರಡು ಮಾತುಗಳನ್ನು ತಿಳಿಸುತ್ತೇನೆ. ನಾನು ಹಳ್ಳಿಯಲ್ಲೇ ಹುಟ್ಟಿ ಬೆಳೆದವಳು. ನನಗೆ ಹಳ್ಳಿಯ ವಿಚಾರಗಳೆಲ್ಲವೂ ಚೆನ್ನಾಗಿ ಗೊತ್ತಿದೆ. ಅಲ್ಲಿ ಈ ಬೆಳಗಿನ ತರಗತಿಗಳನ್ನು ತೆರೆಯುವುದರಿಂದ ಹುಡುಗರಿಗೆ ಬಹಳ ಅನುಕೂಲವಾಗುತ್ತದೆಂದು ನಾನು ಕೂಡ ತಿಳಿಸುತ್ತೇನೆ. ಹೀಗೆ ಬೆಳಗಿನ ಕ್ಲಾಸುಗಳನ್ನು ತೆರೆಯುವುದರಿಂದ ವಿದ್ಯಾರ್ಥಿಗಳು ಬಹಳ ದೂರ ಶಾಲೆಗಳಿಗೆ ಹೋಗಬೇಕಾಗಿದೆ, ಇದರಿಂದ ಅವರ ಊಟ ಉಪಚಾರಗಳಿಗೆ ತೊಂದರೆಯಾಗುತ್ತದೆಂದು ಕೆಲವರು ಹೇಳಿದರು. ಆದರೆ ಹಳ್ಳಿಯ ಹುಡುಗರಿಗೆ ಇಂಥ ಕಷ್ಟಗಳೇನೂ ಇರುವುದಿಲ್ಲವೆಂದು ನನಗೆ ಗೊತ್ತಿದೆ. ಅಲ್ಲಿ ಬೆಳಗಿನ ತರಗತಿಗಳನ್ನು ಮಾಡಿದರೆ ಅವರಿಗೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಸ್ತ್ರೀ ವಿದ್ಯಾಭ್ಯಾಸದ ವಿಚಾರವಾಗಿ ಈಗಾಗಲೇ ಅನೇಕ ಮಹನೀಯರುಗಳು ಮಾತನಾಡಿದ್ದಾರೆ, ಆದರೆ ಶ್ರೀ ಶಿವಪ್ಪನವರು ಸದ್ಗೃಹಿಣಿಯರಾಗುವುದಕ್ಕೆ ಯೋಗ್ಯವಾದಂಥ ವಿದ್ಯಾಭ್ಯಾಸವನ್ನು ಸ್ತ್ರೀಯರಿಗೆ ಕೊಡಬೇಕಾಗಿದೆಯೆಂಬುದಾಗಿ ಒಂದು ಮಾತನ್ನು ಹೇಳಿದರು. ಆದರೆ ನಾನು ಹೇಳುತ್ತೇನೆ ಇದರಂತೆಯೇ ಪುರುಷರಿಗೂ ಕೂಡ ಈಗ ಸದ್ಗೃಹಸ್ಥರಾಗುವಂಥ ವಿದ್ಯೆಯನ್ನು ಅವರಿಗೂ ಕೊಡಬೇಕಾದದ್ದು ಸಹಜ. (ನಗು) ಸ್ತ್ರೀಯರು ಹೀಗೆ ಹೈಯ್ಯರ್ ಎಜ್ಯುಕೇಷನ್ ಪಡೆದ ಮಾತ್ರಕ್ಕೇ ಅವರು ಸದ್ಗೃಹಿಣಿಯರಾಗುವುದಿಲ್ಲ ಎಂಬ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳಲು ತಯಾರಾಗಿಲ್ಲ. ಶತಮಾನಗಳಿಂದಲೂ ತಾವು ತೆಗೆದುಕೊಳ್ಳಿ—19ನೆಯ ಶತಮಾನದಿಂದಲೂ ತಾವು ತೆಗೆದುಕೊಳ್ಳಿ-ಆಗಿನ ಕಾಲದಲ್ಲಿ ಸ್ತ್ರೀಯರ ವಿದ್ಯಾಭ್ಯಾಸ, ಅವರ ಗೌರವ, ಅವರ ಸ್ಥಾನಮಾನಗಳೇಸಿದ್ದವು ಎಂಬುದನ್ನು ನೋಡಿ? ಅವರು ಅನೇಕರು ಪುರುಷರಿಗಿಂತಲೂ ಚೆನ್ನಾಗಿ ರಾಜ್ಯಭಾರ ಮಾಡಿದ್ದಾರೆ. ದೇಶದ ಹಿತದೃಷ್ಟಿಯನ್ನು ಕಾಪಾಡಿಕೊಂಡು ಬಹಳ ವಿಚಕ್ಷಣೆಯಿಂದ ರಾಜ್ಯಭಾರ ಮಾಡಿದ್ದಾರೆ ಇದನ್ನೆಲ್ಲಾ ನೋಡುವುದಾದರೆ ಹಿಂದಿನಿಂದಲೂ ಹೆಂಗಸರು ಸದ್ಗೃಹಿಣಿಯರಾಗಿಯೇ ನಡೆದುಕೊಂಡು ಬಂದಿದ್ದಾರೆಂಬುದು ಚರಿತ್ರೆಗಳಿಂದಲೂ ವ್ಯಕ್ತವಾಗುತ್ತಿದೆ. ಹೀಗಿರುವಾಗ ಇಂದು ಸ್ತ್ರೀಯರು ವಿದ್ಯಾಪತಿಯವರಾದ ಮಾತ್ರದಿಂದಲೇ ಸದ್ಗೃಹಿಣಿಯರಾಗುವುದಿಲ್ಲವೆಂಬ ಈ ಒಂದು ಅಂಶವನ್ನು ಮಾನ್ಯ ಸದಸ್ಯರು ತಮ್ಮ ಮನಸ್ಸಿಗೆ ಏತಕ್ಕಾಗಿ ಹಾಗೆ ತಂದುಕೊಂಡರೋ ಅದು ನನಗೆ ತಿಳಿಯದಾಗಿದೆ. ಈ ದಿವಸ ಪುರುಷರಂತೆಯೇ ಸ್ತ್ರೀಯರಿಗೂ ಕೂಡ ಅವರು ಸದ್ಗೃಹಿಣಿಯರಾಗುವಂಥ, ಸುವಿದ್ಯಾವಂತೆಯರಾಗುವಂಥ ಮತ್ತು ದೇಶವನ್ನು ಕಟ್ಟಿಕೊಂಡು ಹೋಗಲು ಚೈತನ್ಯ ಕೊಡುವಂಥ ಈ ಎಲ್ಲ ವ್ಯವಸ್ಥೆಗಳನ್ನೊಳಗೊಂಡಿರುವಂಥ ಒಂದು ವಿದ್ಯಾಭ್ಯಾಸ ಸ್ತ್ರೀಯರಿಗೂ ಒದಗಬೇಕಾದದ್ದು ತೀರಾ ಅವಶ್ಯಕವಾಗಿರುತ್ತದೆಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಇನ್ನು ಈ ಸಮಿತಿಯವರ ವರದಿಯಲ್ಲಿ ನಮ್ಮ ಸಂಸ್ಕೃತಕ್ಕೆ ಒಂದು ಉನ್ನತ ಸ್ಥಾನವನ್ನು ಕೊಟ್ಟಿದ್ದಾರೆ. ಇದು ಬಹಳ ಸಂತೋಷದ ವಿಷಯ. ಇದೇ ನಮ್ಮ ಭಾರತದ ತಳಹದಿ. ನಮ್ಮ ಭಾರತದ ಒಂದು ಸಂಸ್ಕೃತಿಯೇ ಈ ಸಂಸ್ಕೃತ. ಆದುದರಿಂದ ಈ ಸಂಸ್ಕೃತವನ್ನು ಎಲ್ಲರೂ ಕಲಿಯಬೇಕು. ಇದಕ್ಕಾಗಿ ಅವರು ಚಿಕ್ಕವಯಸ್ಸಿನ ಬಾಲಕರಿಗೆ ಅಮರ ಕೋಶವನ್ನು ಹೇಳಿಕೊಡಬೇಕೆಂದು ಹೇಳಿದ್ದಾರೆ, ಇದು ಬಹಳ ಒಳ್ಳೆಯದು, ಇದನ್ನು ಬಾಯಿಪಾಠ ಮಾಡಿಸುವುದರಿಂದ ಹುಡುಗರಿಗೆ ಪ್ರತಿಯೊಂದು ಶಬ್ದವನ್ನೂ ಸ್ಫುಟವಾಗಿ ಹೊರಡಿಸುವುದಕ್ಕೆ ಶಕ್ತಿ ಬರುವುದಲ್ಲದೆ ಅವರಿಗೆ ಹೆಚ್ಚಿನ ಒಂದು ಜ್ಞಾನೋದಯವಾಗುವುದಕ್ಕೂ ಇದು ಸಹಕಾರಿಯಾಗಿದೆ. ಮುಂದೆ ಇದರಿಂದ ಅವರಿಗೆ ಅರ್ಥಜ್ಞಾನ ಹೆಚ್ಚಿಸಿಕೊಳ್ಳಲು ಸುಲಭವಾಗುತ್ತದೆ.

ಇನ್ನು ಈ ಹಕ್ಕು ಬಾಧ್ಯತೆಗಳ ವಿಚಾರದಲ್ಲಿ ಈಗ ಒಂದು ಪ್ರಶ್ನೆ ಬಂದಿದೆ. ಈ ದಿವಸ ಗಂಡಸರಿಗೆ ಏನೊಂದು ಸರಿ ಸಮಾನವಾದಂಥ ಹಕ್ಕು ಬಾಧ್ಯತೆಗಳಿವೆಯೋ ಮತ್ತು ಅವರಿಗೆ ಈ ವಿದ್ಯಾಭ್ಯಾಸದ ಸೌಲಭ್ಯ ಹೇಗೆ ದೊರೆಯುತ್ತಿದೆಯೋ ಆ ಮಟ್ಟದಲ್ಲಿ ಸ್ತ್ರೀಯರಿಗೆ ದೊರೆಯುತ್ತಿಲ್ಲ. ಆದುದರಿಂದಲೇ ಈ ದಿವಸ ಪುರುಷರು ಯಾವ ದಾಮಾಷಾದಲ್ಲಿ ವಿದ್ಯಾವಂತರಾಗಿದ್ದಾರೋ ಅದೇ ದಾಮಾಷಾದಲ್ಲಿ ಸ್ತ್ರೀಯರು ವಿದ್ಯಾವಂತೆಯರಾಗಿಲ್ಲ. ಆದರೆ ಇತ್ತೀಚೆಗೆ ಕೆಲವು ವರ್ಷಗಳಿಂದಲೇನೋ ಈ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಕೆಲವು ಸೌಲಭ್ಯಗಳಿದ್ದವು. ಆ ಒಂದು ಅನುಕೂಲವಿದ್ದುದರಿಂದ ಇವರ ವಿದ್ಯಾಭ್ಯಾಸವು ಇಲ್ಲಿಯತನಕ ಒಂದು ರೀತಿಯಲ್ಲಿ ಇಲ್ಲಿಯವರೆಗಾದರೂ ಮುಂದುವರಿಯುತ್ತಾ ಬಂತು. ಆದರೆ ಈಗ ಆ ಸೌಲಭ್ಯಗಳೆಲ್ಲವನ್ನೂ ಸ್ತ್ರೀಯರಿಗೆ ತಪ್ಪಿಸಿದ್ದಾರೆಂದು ಕೇಳುತ್ತೇನೆ, ಹೀಗೆ ಒಂದೇ ಸಾರ್ತಿಗೆ ಏಕ್‌ದಂ ಇವರೂ ಸಹ ಫೀಜನ್ನು ಕೊಟ್ಟು ವಿದ್ಯಾಭ್ಯಾಸ ಪಡೆಯಬೇಕೆಂದರೆ-ಈಗ ತಂದೆ ತಾಯಿಗಳಿಗೆ ಕೇವಲ ಗಂಡುಮಕ್ಕಳಿಗೇ ಸಾಕಷ್ಟು ವಿದ್ಯಾಭ್ಯಾಸ ಕೊಡಿಸಲು ಅವರಿಗೆ ಶಕ್ತಿಯಿಲ್ಲದೆ ಇರುವಾಗ, ಇನ್ನು ಅದರ ಜೊತೆಗೆ ಅವರು ಈಗ ಈ ಹೆಣ್ಣುಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸಬೇಕೆಂದರೆ ಇದು ಅವರಿಂದ ಸಾಧ್ಯವೇ? ಹೀಗಾಗಿ ಈ ದಿವಸ ಈ ಹೆಣ್ಣುಮಕ್ಕಳಿಗೆ ಅತ್ತ ತಂದೆ ತಾಯಿಗಳಿಂದಲೂ ಸಹಾಯವಿಲ್ಲ, ಇತ್ತಲಾಗಿ ಸರ್ಕಾರದವರಿಂದಲೂ ಸಹಾಯವಿಲ್ಲದಂತಾಗಿ ಅವರ ವಿದ್ಯಾಭ್ಯಾಸ ಮೊಟಕಾಗುತ್ತಿದೆ. ಆದುದರಿಂದಲೇ ನಾನೀಗ ತಮಗೆ ಏನು ಕೇಳುತ್ತಿದ್ದೇನೆಂದರೆ ಇನ್ನು ಕೆಲವು ವರ್ಷಗಳ ಕಾಲದವರೆಗಾದರೂ ಸ್ತ್ರೀಯರಿಗೆ, ಇವರು ಪುರುಷರ ವಿದ್ಯಾಭ್ಯಾಸದ ಮಟ್ಟಕ್ಕೆ ಬರುವತನಕ, ಒಂದು ಅನುಕೂಲವಾದ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು. ಹೀಗೆ ಮಾಡುವುದಾದರೆ ಆಗ ಈ ಸ್ತ್ರೀ ಪುರುಷರೆಲ್ಲರೂ ವಿದ್ಯಾಭ್ಯಾಸದಲ್ಲಿ ಒಂದು ಮಟ್ಟಕ್ಕೆ ಬರಲು ಅವಕಾಶವಾಗುತ್ತದೆ. ಇದರಿಂದ ದೇಶಕ್ಕೂ ಅನುಕೂಲ.........

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಈಗಿನ ಕಾಲದಲ್ಲಿ ತಂದೆ ತಾಯಿಗಳೆಲ್ಲರೂ ಹೆಣ್ಣು ಮಕ್ಕಳಿಗೇ ಜಾಸ್ತಿ ಪ್ರಿಫರೆನ್ಸ್ ಕೊಡುತ್ತಿದ್ದಾರಲ್ಲವೆ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹೌದು, ಹಾಗೆ ಹೆಣ್ಣುಮಕ್ಕಳಿಗೆ ಒಂದು ಪ್ರಿಫರೆನ್ಸು ಕೊಡತಕ್ಕದ್ದೂ ನ್ಯಾಯವಾಗಿದೆ. ಅದಕ್ಕೆ ಕಾರಣವಾದರೂ ಇಷ್ಟೆ. ಅವರು ಮದುವೆಯಾದ ಮೇಲೆ ತಮ್ಮ ತಮ್ಮ ಗಂಡಂದಿರ ಮನೆಗಳಿಗೆ ಹೋಗಿ ಬಿಡುತ್ತಾರೆ. ಗಂಡು ಮಕ್ಕಳಾದರೋ ಅಲ್ಲೇ ಶಾಶ್ವತವಾಗಿ ಇರುತ್ತಾರೆ. ಆದಕಾರಣ ಅವರಿಗೆ ಅಂಥ ಒಂದು ಅವಕಾಶ ದೊರೆತಿರುವುದೇನೂ

ಹೆಚ್ಚಿನದಲ್ಲ. ನಾನು ಇಷ್ಟು ಮಾತುಗಳನ್ನು ಈ ವಿದ್ಯಾಭ್ಯಾಸದ ಸುಧಾರಣೆಗಳ ಬಗ್ಗೆ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ ನಾನು ಈ ವಿದ್ಯಾಭ್ಯಾಸದ ಸುಧಾರಣೆಗಳ ವಿಚಾರದಲ್ಲಿ ಹೆಚ್ಚಿಗೆ ಮಾತನಾಡಬಾರದೆಂತಲೇ ಇದ್ದೆ, ಏತಕ್ಕೆಂದರೆ ಈ ಸುಧಾರಣೆಗಳೆಲ್ಲಾ ಕೇವಲ ತಜ್ಞರಾದವರಿಂದ ಮಾಡಲ್ಪಟ್ಟಿರುವಂಥ ಸುಧಾರಣೆಗಳಾದುದರಿಂದ ಇವುಗಳನ್ನು ಎಲ್ಲರೂ ಒಪ್ಪಿಕೊಳ್ಳತ್ತಾರೆಂದೇ ನಾನು ಭಾವಿಸಿದ್ದೆನು. ಆದರೆ ಈಗ 3 ದಿವಸಗಳಿಂದಲೂ ಚರ್ಚೆ ನಡೆದಿರತಕ್ಕ ಭರಾಟೆಯನ್ನು ನೋಡಿದರೆ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ತೀವ್ರವಾಗಿ ಟೀಕೆಮಾಡಿ ಇದರ ಬಗ್ಗೆ ಒಂದು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದಲೇ ಅವರಿಗೆ ಒಂದು ಸಮಾಧಾನ ಉಂಟುಮಾಡಬೇಕೆಂಬ ದೃಷ್ಟಿಯಿಂದ ನಾನೀಗ ಒಂದೆರಡು ಮಾತುಗಳನ್ನಾಡಬೇಕಾಯಿತು. ಅದಕ್ಕಾಗಿ ನಾನೀಗ ಎದ್ದು ನಿಂತಿದ್ದೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಕೊರಟಗೆರೆ-ಮಧುಗಿರಿ ಅನುಸೂಚಿತ ಜಾತಿಗಳು).—ಹಾಗಾದರೆ ನೀವು ಈಗ ಈ ವರದಿಯ ಮೇಲೆ ಮಾತನಾಡುವುದಕ್ಕೆ ನಿಂತಿಲ್ಲವೇನು ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೆಲವು ಮಾನ್ಯಸದಸ್ಯರು ಈ ಸುಧಾರಣೆಗಳ ಬಗ್ಗೆ ಹಲ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಅದಕ್ಕೆ ಪ್ರತ್ಯುತ್ತರವಾಗಿ ನಾನು ಮಾತನಾಡೋಣವೆಂದೇ ಈಗ ಎದ್ದು ನಿಂತಿರುವುದು. ಇಲ್ಲಿಗೆ ಕಳೆದ ಒಂದು ವರ್ಷದಲಾಗಾಯ್ತಿನಿಂದಲೂ ನಾವು ನಮ್ಮ ದೇಶದ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಬದಲಾವಣೆ ಆಗಬೇಕೆಂದು ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಒತ್ತಾಯ ಪಡಿಸುತ್ತ ಬಂದಿರುವ ವಿಚಾರ ತಮಗೆಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಈಗ ನಮ್ಮ ದೇಶದಲ್ಲಿರತಕ್ಕ ವಿದ್ಯಾಭ್ಯಾಸ ಒಂದು ಮೆಕ್ಯಾನಿಕಲ್ ಪ್ರೊಡಕ್ಷನ್ ಇದ್ದಹಾಗಿದೆಯೆಂದು ಹೇಳಬಹುದು. ಈಗಿರುವಂಥ ಒಂದು ವಿದ್ಯಾಭ್ಯಾಸದ ಕ್ರಮದಿಂದ ಜನರಿಗಾಗಿರತಕ್ಕ ಪ್ರಯೋಜನವೇನೆಂದರೆ, ಪರೀಕ್ಷೆಯಲ್ಲಿ ಪಾಸಾದ ಕೂಡಲೇ ಹುಡುಗರು ಸಿ.ಆರ್.ಬಿ. ಆಫೀಸಿಗೆ ತಿರುಗುತ್ತ ದೇಶದಲ್ಲಿ ಗುಮಾಸ್ತೆಗಿರಿಗಾಗಿ ಅಲೆಯುತ್ತಾ ಇರುವುದಕ್ಕೆ ಮಾತ್ರ ಇದು ಒಂದು ಅನುಕೂಲಮಾಡಿಕೊಟ್ಟಿದೆಯೆಂದು ಹೇಳಬಹುದು. ಇಲ್ಲಿಯತನಕ ನಮಗೆ ಈ ವಿದ್ಯಾಭ್ಯಾಸದಿಂದ ಒದಗಿರತಕ್ಕ ಪ್ರಯೋಜನ ಇಷ್ಟೆ. ಈಗಾಗಲೇ ನಮ್ಮ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಹೇಳಿದ ಹಾಗೆ, ಹುಡುಗರು 18ನೇ ವಯಸ್ಸಿಗೆ ಬರುತ್ತಿದ್ದ ಹಾಗೆಯೇ, ಅವರು ತಮ್ಮ ವಿಧ್ಯಾಭ್ಯಾಸವನ್ನು ಮುಗಿಸಿಕೊಂಡು ಕೊಡಲೇ ಅವರಿಗೆ ಒಂದು ಸ್ವತಂತ್ರವಾಗಿ ತಮ್ಮ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವಂಥ ಒಂದು ಅವಕಾಶ ಅವರಿಗೆ ಇರಬೇಕು. ಇಲ್ಲವೇ ಅವರು ಶ್ರೀಮಂತರ ಮಕ್ಕಳಾಗಿದ್ದರೆ ಪಾಶ್ಚಿಮಾತ್ಯರಾಷ್ಟ್ರ ಇತ್ಯಾದಿಗಳಲ್ಲಿ ಹೆಚ್ಚಿನ ಒಂದು ವ್ಯಾಸಂಗಕ್ಕೆ ಹೋಗಬಹುದು. ಈ ರೀತಿಯಾಗಿ ನಡೆಯಲು ಅವಕಾಶವಿರತಕ್ಕ ಒಂದು ದಾರಿಯನ್ನು ಹುಡುಕಬೇಕಾಗಿದೆಯೆಂಬುದನ್ನು ತಿಳಿಸತಕ್ಕದ್ದೇ ನನ್ನ ಮೊದಲನೆಯ ವಾದ.

ಈ ದಿವಸ ಅಂಥ ಒಂದು ವಿಚಾರದ ಬಗ್ಗೆ ಕೆಲವು ಸುಧಾರಣೆಗಳನ್ನು ಮಾಡಲು ಒಂದು ಸಮಿತಿಯು ನೇಮಕ ಮಾಡಲ್ಪಟ್ಟಿತ್ತು. ನುರಿತಂಥ ಮತ್ತು ಮೇಧಾವಿಗಳಾದಂಥ 40 ಜನ ಸದಸ್ಯರನ್ನೊಳಗೊಂಡಿತ್ತು ಆ ಸಮಿತಿ. ಆ ನುರಿತಂಥ ಸದಸ್ಯರುಗಳು ವಿಷಯಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ನಮ್ಮ ದೇಶಕ್ಕೆ ಯಾವರೀತಿಯಾದ ಒಂದು ವಿದ್ಯಾಭ್ಯಾಸವಿದ್ದರೆ ಅನುಕೂಲವಾಗುತ್ತದೆ ಎಂಬುದನ್ನು ಚೆನ್ನಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಕೊನೆಗೆ ಅವರು ಒಂದು ತೀರ್ಮಾನಕ್ಕೆ ಬಂದು ಅನಂತರ ಈ ಸುಧಾರಣೆಗಳನ್ನು ನಮ್ಮ ಮುಂದೆ ಇಟ್ಟಿರುತ್ತಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಾವೀದಿವಸ ಸ್ವತಂತ್ರವಾದಂಥ ರಾಜ್ಯದಲ್ಲಿ ವಾಸಮಾಡಿಕೊಂಡಿದ್ದೇವೆ. ಹೀಗೆ ನಾವು ಸ್ವತಂತ್ರವಾಗಿ ಜೀವನ ಮಾಡುತ್ತಿರುವಾಗ ನಮಗೆ ನಮ್ಮ ಆರ್ಥಿಕಾಭಿವೃದ್ಧಿಯಾಗುವಂಥ ಒಂದು ಉತ್ತಮ ತರಹೆಯ ಶಿಕ್ಷಣ ಬೇಕಾಗಿದೆ. ಇಂದು ನಮ್ಮ ದೇಶದ ಆರ್ಥಿಕಾಭಿವೃದ್ಧಿಯು ನಮ್ಮ ಈ ವಿದ್ಯಾಭಿವೃದ್ಧಿಯಮೇಲೆಯೇ ನಿಂತಿದೆಯೆಂದು ಹೇಳುವುದರಲ್ಲಿ ಏನೂ ಸಂದೇಹವಿಲ್ಲ. ಆದಕಾರಣ ನಿಮಗೀಗ ಯಾವ ತರಹದ ಒಂದು ವಿದ್ಯಾಭ್ಯಾಸ ಬೇಕಾಗಿದೆಯೆಂದರೆ adjustment according to their circumstances ಎಂಬ ತರದಲ್ಲಿ ಸಂದರ್ಭಕ್ಕೆ ಹೊಂದಿಕೊಳ್ಳುವಂಥ ವಿದ್ಯಾಭ್ಯಾಸ ಬೇಕಾಗಿದೆ. ಇದುವರೆಗೂ ನಾವು ಆ ಒಂದು ಪರದೇಶದ ವಿದ್ಯಾಭ್ಯಾಸವನ್ನು ಮಾಡಿದಂಥವರಾಗಿದ್ದೇವೆ. ಆ ಪರಕೀಯರು ನಮ್ಮ ದೇಶವನ್ನು ಯಾವ ರೀತಿಯಾಗಿ ಒಂದು ಹದ್ದು ಬಸ್ತಿನಲ್ಲಿಟ್ಟುಕೊಳ್ಳಬೇಕಾಗಿತ್ತೋ ಅದಕ್ಕೆ ಲಗತ್ತಾಗಿದ್ದಂಥ ಒಂದು ಮಾದರಿಯ ವಿದ್ಯಾಭ್ಯಾಸವನ್ನೇ ಅವರು ನಮಗೆ ಕೊಡಿಸುತ್ತಿದ್ದರು. ಆದುದರಿಂದಲೇ ಇಲ್ಲಿಯತನಕ ನಮ್ಮ ದೇಶಾಭಿವೃದ್ಧಿ ಆಗಲಿಲ್ಲ. ಅಷ್ಟಾಗಿದ್ದರೂ ಇನ್ನೂ ನಮ್ಮಲ್ಲಿ ಅನೇಕರಿಗೆ ಆ ಹಳೆಯ ವಿದ್ಯಾಭ್ಯಾಸದ ಒಂದು ಹುಚ್ಚು ಬಿಟ್ಟಿಲ್ಲವೆಂದು ಕಾಣುತ್ತಿದೆ.

ಈಗ ನಾವು ಈ ಸುಧಾರಣೆಗಳಲ್ಲಿ ಹೇಳಿರತಕ್ಕ ಪ್ರಾಥಮಿಕ ವಿದ್ಯಾಭ್ಯಾಸದ ಬದಲಾವಣೆಗೆ ಬರೋಣ. ಈ ವಿಚಾರವನ್ನು ತೆಗೆದುಕೊಂಡರೆ ಈಗ ಬಾಲಕರಿಗೆ 6 ವರ್ಷಗಳ ಕಾಲ ಈ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳಿದ್ದಾರೆ. ಇದು ಹಾಗಿರಲಿ. ಇಲ್ಲಿಯತನಕವು ಜನರು ಏನೊಂದು ಮಾಡುತ್ತಿದ್ದರೆಂದರೆ ತಂದೆತಾಯಿಗಳಾದವರು ತಮ್ಮ ತಮ್ಮ ಮಕ್ಕಳು ಬೇಗ ವಿದ್ಯಾವಂತರಾಗಲಿ ಎಂಬ ಒಂದು ಆಸೆಯಿಂದ ನಮ್ಮ ಮಕ್ಕಳು ಬಹಳ ಬುದ್ಧಿವಂತರು ಎಂಬುದಾಗಿ ಹೇಳಿಕೊಳ್ಳುತ್ತ ಪ್ರಾಥಮಿಕ ಒಂದನೆಯ ಕ್ಲಾಸಿನಲ್ಲಿ ಒದುತ್ತಿದ್ದಂಥ ಹುಡುಗನನ್ನು ತೆಗೆದುಕೊಂಡು ಹೋಗಿ ಪ್ರೈಮರಿ 3ನೆಯ ಕ್ಲಾಸಿಗೆ ಸೇರಿಸುವುದು, ಅಲ್ಲಿ ಆ 3ನೆಯ ಕ್ಲಾಸಿನಲ್ಲಿ ಓದುತ್ತಿದ್ದಂಥ ಹುಡುಗನನ್ನು ತೆಗೆದುಕೊಂಡುಹೋಗಿ ಮಿಡಲ್ ಸ್ಕೂಲು ಫಸ್ಟ್‌ಯಿಯರ್‌ಗೆ ಸೇರಿಸುವುದು ಇಂಥ ಆಟಗಳೆಲ್ಲವೂ ನಡೆಯುತ್ತಿದ್ದವು. ಹೀಗೆಲ್ಲಾ ಮಾಡುತ್ತಿದ್ದುದರಿಂದ ಅನೇಕ ಹುಡುಗರಿಗೆ ಅವರ ವಿದ್ಯಾಭ್ಯಾಸ ಕುಂಠಿತವಾದದ್ದೇ ಅಲ್ಲದೇ ಅನೇಕ ಸಂದರ್ಭಗಳಲ್ಲಿ ಮಾನಸಿಕ ಮತ್ತು ಅವರ ಶರೀರ ಶಕ್ತಿಗಳಿಗೂಕೂಡ ಒಂದು ಧಕ್ಕೆಯುಂಟಾಗುವಂಥ ಪ್ರಸಂಗಗಳಿದ್ದವು. ಹೀಗೆ ಅವರು ಚಿಕ್ಕವಯಸ್ಸಿನಲ್ಲೇ ಹೆಚ್ಚು ಹೆಚ್ಚಾಗಿ ಓದಿಕೊಂಡು, ಪರೀಕ್ಷೆಗಳನ್ನು ಮುಗಿಸಿಕೊಂಡು ಮಾಡುವುದಕ್ಕೆ ಮತ್ತೆ ಯಾವ ಕೆಲಸ ಕಾರ್ಯಗಳೂ ಇಲ್ಲದೆ ಅವರು ಅಲ್ಲಿಲ್ಲಿ ಅಲೆಯುತ್ತ ಬಂದುದೇ ಇಂದಿನ ನಮ್ಮ ಒಂದು ನಿರುದ್ಯೋಗ ಸಮಸ್ಯೆ ಒಂದು ದೊಡ್ಡ ಕಾರಣವಾಯಿತೆಂದು ಹೇಳಬೇಕಾಗಿದೆ. ಆದರೆ ನಾವು ಈ ದಿವಸ ಬಾಲಕರಿಗೆ ಈ ಒಂದು ವಿದ್ಯಾಭ್ಯಾಸ ಕೊಡಿಸುವುದು ಅವರಿಗೆ ಜೀವನದಲ್ಲಿ ಒಂದು ಗುರಿಯನ್ನು ಸಾಧಿಸಲು

(ಶ್ರೀ ಎಂ. ಚಿಕ್ಕಲಿಂಗಯ್ಯ)

ಸ್ವಸಾಮರ್ಥ್ಯವನ್ನು ದೊರಕಿಸಿ ಕೊಡುವುದಕ್ಕಾಗಿಯೇ ಹೊರತು ಹೀಗೆಲ್ಲಾ ನೌಕರಿಗಳಿಗೆ ಅಲೆದಾಡುವುದಕ್ಕಲ್ಲ. ಆದುದರಿಂದ ಈ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು 4 ವರ್ಷಗಳಿಂದ 6 ವರ್ಷಗಳಿಗೇರಿಸಿ, ಅವರು ತಮ್ಮ 14ನೆಯ ವಯಸ್ಸಿಗೆ ಬರುವಾಗ ಸರಿಯಾಗಿ ಈ ಸೆಕಂಡರಿ ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡಿ, ಅನಂತರ ಅವರು ತಮ್ಮ 18ನೆಯ ವಯಸ್ಸಿಗೆ ಬರುವುದರೊಳಗೆ ಈ ಒಂದು ವಿದ್ಯಾಭ್ಯಾಸವನ್ನು ಪಡೆದುಕೊಂಡು ತನ್ಮೂಲಕ ಅವರಿಗೆ ತಮ್ಮ ತಮ್ಮ ಸ್ವಸಾಮರ್ಥ್ಯದಿಂದ ತಮ್ಮ ಜೀವನದಲ್ಲಿ ಒಂದು ಸುಗಮವಾದ ದಾರಿಯನ್ನು ಅವರೇ ಹುಡುಕಿಕೊಳ್ಳಲು ಅನುಕೂಲವಾಗುವಂಥ ದಾರಿಗಳನ್ನು ಅವರಿಗೆ ತೋರಿಸುವಂಥ ಒಂದು ಜ್ಞಾನಾರ್ಜನೆಗೆ ಅವಕಾಶವನ್ನುಂಟು ಮಾಡುವುದು, ಇಂದಿನ ದೇಶದ ಆರ್ಥಿಕದ ದೃಷ್ಟಿಯಲ್ಲಿ ಬಹಳಮಟ್ಟಿಗೆ ಮುಖ್ಯವಾದದ್ದು. ಏತಕ್ಕೆಂದರೆ ನಾನು 1916ನೆಯ ಇಸ್ವಿಯಲ್ಲಿ ಮೈಸೂರು ನಜರ್‌ಬಾದಿನಲ್ಲಿ ರುವ ಸರ್ಕಾರಿ ಪಾಠಶಾಲೆಯಲ್ಲಿ ಓದುತ್ತಿದ್ದೆ. ಆಗ ನನ್ನನ್ನು ಅಲ್ಲಿಗೆ ಸೇರಿಸಿದ್ದರು. ಆ ಪಾಠಶಾಲೆಯಲ್ಲಿ ಏನೇನು ಪಾಠಪ್ರವಚನಗಳನ್ನು ಕಲಿಸುತ್ತಿದ್ದರೆಂದರೆ ಚಾಪೆ ಹೆಣೆಯುವುದು ಎಂದರೆ ಕಾಡಿಗೆ ಹೋಗಿ ಭೂತಾಳಿ ಮರವನ್ನು ಕಡಿದು ಅದರ ತಿಗುಡನ್ನು ತಂದು, ತಿಕ್ಕಿ ನಾರುಮಾಡಿ ಚಾಪೆಹೆಣೆಯುವುದು, ಅನಂತರ ಮರಗೆಲಸ ಬಡಗಿಯ ಕೆಲಸ, ಕಸೂತಿ ಕೆಲಸ, ಚಪ್ಪಲಿಗಳನ್ನು ಮಾಡುವುದು, ಹೊಲಗೆ ಕೆಲಸ ಇತ್ಯಾದಿ ವಿದ್ಯೆಗಳನ್ನೆಲ್ಲಾ ಕಲಿಸುತ್ತಿದ್ದರು. ಹೀಗೆ 4 ವರ್ಷ ಕಾಲ ಈ ವಿದ್ಯೆಗಳನ್ನೆಲ್ಲಾ ಅಭ್ಯಾಸಮಾಡಿ ಪ್ರತಿಯೊಂದು ಬಾಬಿನಲ್ಲಿಯೂ ಹುಡುಗರು ಪರಿಶ್ರಮ ಹೊಂದುತ್ತಿದ್ದರು. ಆದರೆ ಜನರಲ್ ವಿದ್ಯಾಭ್ಯಾಸದ ಲೈನೂ ನಾವು ಹಿಂದೆ ಬಿದ್ದಿರಲಿಲ್ಲ. ಅದರಲ್ಲಿಯೂ ಕೂಡ ಫಸ್ಟ್‌ಕ್ಲಾಸ್, ಸೆಕೆಂಡ್‌ಕ್ಲಾಸುಗಳಲ್ಲಿ ಕೂಡ ಉತ್ತೀರ್ಣರಾಗುತ್ತಿದ್ದೆವು. ಆಗಿನ ಕಾಲದ ಪಾಠ ಪ್ರವಚನಗಳೆಲ್ಲಾ ಬಹಳ ಚೆನ್ನಾಗಿರುತ್ತಿದ್ದವು, ಆಗಿನ ಸ್ಕೂಲುಗಳಲ್ಲಿ ಎಂದರೆ ನಾನೀಗ ಹೇಳಿದ ಪಾಠಶಾಲೆಯ ಪತ್ರಿಕೆಯೊಂದನ್ನು ನಮ್ಮ ಮಾನ್ಯ ವಿದ್ಯಾಮಂತ್ರಿಗಳು ತರಿಸಿಕೊಂಡು ನೋಡಿದರೆ ಆಗಿನ ಕಾಲದ ವಿದ್ಯಾಭ್ಯಾಸ ಹೇಗಿತ್ತೆಂಬುದು ಗೊತ್ತಾಗುತ್ತದೆ; ಮತ್ತು ಹಿಂದೆ ಯಾವರೀತಿ ಅವರು ಈ ಕೈಗಾರಿಕಾಭಿವೃದ್ಧಿ ಮತ್ತು ಜನರಲ್ ಎಜ್ಯುಕೇಷನ್ ಈ ಎರಡನ್ನು ಹುಡುಗರಿಗೆ ಕಲಿಸುತ್ತಿದ್ದರೆಂಬುದು ತಮಗೆ ಚೆನ್ನಾಗಿ ವೇದ್ಯವಾಗುತ್ತದೆ. ನಾನೂ ಸಹ ಆ ಶಾಲೆಯಲ್ಲಿ ಅಭ್ಯಾಸಮಾಡಿ ಆವೃತ್ತಿಗಳಲ್ಲೆಲ್ಲಾ ಶಿಕ್ಷಣ ಪಡೆದಿರುವುದರಿಂದ ನನಗೆ ಈ ವೃತ್ತಿಶಿಕ್ಷಣದ ವಿಚಾರದಲ್ಲಿ ಕೊಂಚ ಅನುಭವವಿದೆ. ಹಾಗೆ ನನಗೂ ಒಂದು ಅನುಭವವಿರುವುದರಿಂದಲೇ ನಾನೀಗ ಇದರ ಬಗ್ಗೆ ಎರಡು ಮಾತುಗಳನ್ನಾಡಬೇಕೆಂದು ಇಚ್ಛಿಸುತ್ತೇನೆ.

ಹೀಗೆ ಈ ಜನರಲ್ ವಿದ್ಯಾಭ್ಯಾಸದ ಜೊತೆಗೆ ಬಾಲಕರಿಗೆ ವೃತ್ತಿಶಿಕ್ಷಣ ಕೂಡ ದೊರೆಯುವಂತೆ ಮಾಡುವುದು ಬಹಳ ಮುಖ್ಯವಾದದ್ದು, ಇದು ನಮ್ಮ ದೇಶದ ಆರ್ಥಿಕಸ್ಥಿತಿಗೆ ಬಹಳಮಟ್ಟಿಗೆ ಸಹಾಯ ಮಾಡುತ್ತದೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ.

4-30 P. M.

ಇದಲ್ಲದೆ ಇನ್ನೊಂದು ವಿಷಯ. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಜಾರಿಗೆ ತರಲು ಸಾಧ್ಯವಾಗುವುದಿಲ್ಲ ಎಂದು ಕೆಲವರು ಹೇಳಿದ್ದಾರೆ; ಅದು ನಿಜ. ಆದರೆ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದು ಯಾವಾಗ? ಅದು ಈ ದಿವಸ ಅಥವಾ ನಾಳೆ ಸರಿಹೋಗುತ್ತದೆಯೆ? ಕಷ್ಟಬರುತ್ತಲೇ ಇರುತ್ತದೆ. 50 ರೂಪಾಯಿ ಅಥವಾ 100 ರೂಪಾಯಿ ಸಂಬಳ ಬರುವವರು ಸಾಲದು ಎಂದು ಹೇಳಿದರೆ ಹೇಗೆ? ಆದಾಯಕ್ಕೆ ತಕ್ಕಹಾಗೆ ಸರಿಹೊಂದಿಸಿಕೊಳ್ಳಬೇಕು. ಹಾಸಿಗೆ ಇರುವಷ್ಟು ಕಾಲುನೀಡಬೇಕು ಎಂಬ ತತ್ವದ ಪ್ರಕಾರ ನಮ್ಮ ದೇಶದ ಸ್ಥಿತಿಗತಿ, ಆವಶ್ಯಕತೆ ಇವುಗಳಿಗೆ ತಕ್ಕಂತೆ ಬದಲಾವಣೆ ಮಾಡಿಯೇತೀರಬೇಕು, ಇಲ್ಲದಿದ್ದರೆ ಸಾಧ್ಯವಿಲ್ಲ. ಆದರೆ ಪೂರ್ತಿಯಾಗಿ ಈ ಸುಧಾರಣೆಯನ್ನು ಜಾರಿಗೆತರುವುದಕ್ಕಾಗದಿದ್ದರೆ ಪ್ರೈಮರಿ ವಿದ್ಯಾಭ್ಯಾದ ನಾಲ್ಕು ತರಗತಿಗಳವರೆಗಾದರೂ ಪ್ರಾಯೋಗಿಕವಾಗಿ ಮೊದಲು ಜಾರಿಗೆ ತಂದು ಅನಂತರ ಅವಕಾಶವಿದ್ದಂತೆ ಮುಂದುವರಿಸುವುದು ಸೂಕ್ತ. ಇದರಿಂದ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸಿಕೊಳ್ಳಬಹುದು ಎಂಬ ಅಭಿಪ್ರಾಯವಿದೆ. ಅಲ್ಲದೆ ಒಂದುಸಲ ಉಪಾಧ್ಯಾಯರ ಸಂಘದ ಮೀಟಿಂಗ್ ನಡೆಯಿತು. ಆಗ ಎರಡು ರೇಂಜಿನ ಸ್ಕೂಲುಗಳ ಉಪಾಧ್ಯಾಯರು ಕರೆತಿದ್ದರು. ಆ ಸಮ್ಮೇಳನದಲ್ಲಿ ಪ್ರತಿಯೊಬ್ಬ ಉಪಾಧ್ಯಾಯರನ್ನೂ ಕೂಲಂಕಷವಾಗಿ ವಿಚಾರಮಾಡಿ ಸುಧಾರಣೆಯ ವಿಷಯದಲ್ಲಿ ಅವರ ಅಭಿಪ್ರಾಯವನ್ನು ಪಡೆದೆ. ಅವರಾರೂ ಒಂದು ಭಯದಿಂದ ಅಭಿಪ್ರಾಯ ಕೊಡಲಿಲ್ಲ. ಪ್ರತಿಯೊಬ್ಬ ಉಪಾಧ್ಯಾಯರೂ ಕೂಲಂಕಷವಾಗಿ ಪರಿಶೀಲಿಸಿ ಈ ಸುಧಾರಣೆ ಅತ್ಯಗತ್ಯ, ಈಗಿನ ವಿದ್ಯಾಭ್ಯಾಸ ಸರಿಯಾಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಉಪಾಧ್ಯಾಯರನ್ನು ತರಪೇತು ಮಾಡಿಲ್ಲ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇದು ಶಾಸ್ತ್ರೋಕ್ತವಾಗಿ ನಡೆದ ಹೊರತು ಸರಿಯಾಗಿ ಪಾಠ ಹೇಳಲು ಸಾಧ್ಯವಿಲ್ಲ. ಆದರೆ ಒಂದೇಸಾರಿ ಎಲ್ಲರಿಗೂ ಶಿಕ್ಷಣ ಕೊಡುವುದಕ್ಕೆ ಸಾಧ್ಯವೆ? ಇದೊಂದು ದೊಡ್ಡ ಸಮಸ್ಯೆಯಾಗಿದೆ. ಈಗಿರುವ ಪರಿಸ್ಥಿತಿಯಲ್ಲಿ ಎಲ್ಲಾ ಉಪಾಧ್ಯಾಯರಿಗೂ ಟ್ರೈನಿಂಗ್ ಕೊಡುವುದಕ್ಕೆ ಸಾಧ್ಯವಿಲ್ಲ, ಸರ್ಕಾರಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾಡಬಹುದು. ವರ್ಷಕ್ಕಿಷ್ಟು ಎಂದು ಅನುಕೂಲವಿರುವಷ್ಟು ಉಪಾಧ್ಯಾಯರಿಗೆ ಶಿಕ್ಷಣ ಕೊಡಬಹುದು. ಮುಂದೆ ಒಂದು ಸ್ಟ್ಯಾಂಡರ್ಡಿಗೆ ಬಂದ ಮೇಲೆ ಎಸ್. ಎಸ್. ಎಲ್. ಸಿ.ಗೆ ಇದ್ದಹಾಗೆ ಅಟ್ಯಾಚ್ ಮಾಡಿದರೆ, ವೃತ್ತಿಶಿಕ್ಷಣಕ್ಕೆ ಮಾಡಿರುವಹಾಗೆ ಮಾಡಿದರೆ ತೊಂದರೆಯಿಲ್ಲದಹಾಗೆ ಸುಲಭವಾಗಿ ಟ್ರೈನ್ಡ್ ಟೀಚರ್ಸ್ ಸಿಕ್ಕುತ್ತಾರೆ. ಎಸ್. ಎಸ್. ಎಲ್.ಸಿ. ಆದ ಮೇಲೆ ಟೆಕ್ನಿಕಲ್ ವಿದ್ಯಾಭ್ಯಾಸವಿರುವಂತೆ ಟ್ರೈನಿಂಗ್ ಅಟ್ಯಾಚ್ ಮಾಡಿದರೆ ಸುಲಭವಾಗಿ ವರ್ಷೇ ವರ್ಷೇ ಹೆಚ್ಚು ತರಪೇತಾದ ಉಪಾಧ್ಯಾಯರು ಸಿಕ್ಕುತ್ತಾರೆ ಎಂದು ಸೂಚನೆ ಕೊಡುತ್ತಿದ್ದೇನೆ.

ಆಮೇಲೆ ಸ್ಕೂಲನ್ನು ನಡೆಸುವಕಾಲದ ಕಡೆ ನೋಡೋಣ. ಪ್ರಾತಃಕಾಲ ಮಕ್ಕಳಿಗೆ ನಾಲ್ಕು ಗಂಟೆ ಸ್ಕೂಲು ಮಾಡುತ್ತಿದ್ದುದನ್ನು $3\frac{1}{2}$ ಗಂಟೆಗೆ ಇಳಿಸಿದರೆ ಸ್ವಲ್ಪ ಕಾಲಾವಕಾಶ ಸಿಕ್ಕುತ್ತದೆ. ಹೀಗೆ ಮಾಡಬಹುದು ಎಂದು ಪ್ರತಿಯೊಬ್ಬರೂ ಅಭಿಪ್ರಾಯಪಟ್ಟಿದ್ದಾರೆ. ಮೊದಲೇ ಹೇಳಿದಹಾಗೆ ಚಿಕ್ಕ ಮಕ್ಕಳಿಗೆ ನಾಲ್ಕು ವರ್ಷದ ಅವಧಿಯಲ್ಲಿ ತೋಟದ ಕೆಲಸ, ಕೈ ಕೆಲಸ, ಮಣ್ಣಿನ ಕೆಲಸ ಮಾಡಿಸಬಹುದು. ನಮ್ಮ ತಾಲ್ಲೂಕಿನಲ್ಲಿರುವ ಬೇಸಿಕ್ ಸ್ಕೂಲುಗಳನ್ನು ನಾನು ನೋಡಿದ್ದೇನೆ. ಅಲ್ಲಿ ಸಾಕಾದಷ್ಟು ಸಲಕರಣೆಯಿಲ್ಲದೆ ಅವು

ನಡೆಯುವುದೇ ಕಷ್ಟವಾಗಿದೆ. ವ್ಯವಸಾಯ ಮಾಡುವುದು, ಕೈತೋಟ ಮಾಡುವುದು, ಬತ್ತ ಬೆಳೆಯುವುದು, ತರ್ಕಾರಿ ಬೆಳೆಯುವುದು ಕೆಲವು ಸ್ಕೂಲುಗಳಲ್ಲಿ ಚೆನ್ನಾಗಿ ನಡೆಯುತ್ತಿದೆ. ಆದರೆ ಎಕ್ವಿಪ್‌ಮೆಂಟ್ ಸಾಲದು. ಬೇಸಿಕ್ ಸ್ಕೂಲು ತೆರೆದಾಗ ಟ್ರೈನಿಂಗ್ ಆದ ಉಪಾಧ್ಯಾಯರನ್ನು ಕೊಡಬೇಕು, ಬೇಕಾದ ಸಲಕರಣೆ ಕೊಡಬೇಕು. ಪಾಶ್ಚಿಮಾತ್ಯರಿಗೂ ನಮಗೂ ಇರುವ ವ್ಯತ್ಯಾಸ ವಿಷ್ಟೇ. ಅವರು ಮೊದಲು ಎಕ್ವಿಪ್‌ಮೆಂಟ್ ಒದಗಿಸಿ ಆಮೇಲೆ ಸ್ಕೂಲನ್ನು ನಡೆಸುತ್ತಾರೆ. ನಾವಾದರೋ ಸ್ಕೂಲು ಷುರುಮಾಡಿದ ಮೇಲೆ ಅದಕ್ಕೆ ಕಟ್ಟಡ, ಎಕ್ವಿಪ್‌ಮೆಂಟ್ ಮುಂತಾದುವನ್ನು ಒದಗಿಸಲು ಯೋಚನೆ ಮಾಡುತ್ತೇವೆ. ಹೀಗೆ ಮಾಡದೆ ನಾವೂ ಪಾಶ್ಚಿಮಾತ್ಯರಂತೆ ಮೊದಲೇ ಬೇಕಾದ ಸಲಕರಣೆಗಳನ್ನೊದಗಿಸಿ ಕೊಂಡು ಅನಂತರ ಸ್ಕೂಲನ್ನು ನಡೆಸುವುದಾದರೆ ಖಂಡಿತ ಕೆಲಸ ಚೆನ್ನಾಗಿ ನಡೆಯುತ್ತದೆ. ಕೆಲವರು ಬೇಸಿಕ್ ಸ್ಕೂಲು ನಡೆಯಕೂಡದು ಎಂದು ಅಭಿಪ್ರಾಯ ಪಟ್ಟರು, ಆದರೆ ಅದು ಸರಿಯಿಲ್ಲ ಬಾಕಿ ಸ್ಕೂಲುಗಳ ಜೊತೆಗೆ ಬೇಸಿಕ್ ಸ್ಕೂಲುಗಳನ್ನೂ ಮುಂದುವರಿಸಬೇಕು, ಅವುಗಳಿಂದ ತೋಟದ ಕೆಲಸ ಮುಂತಾದುವು ಚೆನ್ನಾಗಿ ನಡೆಯುತ್ತವೆ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಮತ್ತೊಂದು ವಿಚಾರವೆಂದರೆ, ಹುಡುಗರಿಗೆ ಪಠ್ಯ ಪುಸ್ತಕಗಳು ಸರಿಯಾಗಿ ದೊರಕುತ್ತಿಲ್ಲ. ಕೆಲವು ಪಠ್ಯ ಪುಸ್ತಕಗಳು ಅಚ್ಚಾಗಿಲ್ಲವೆಂದು ಸಹ ತಿಳಿದುಬಂದಿದೆ. ವಿದ್ಯಾಭ್ಯಾಸದ ಸುಧಾರಣೆಗೆ ಸಂಬಂಧಪಟ್ಟಹಾಗೆ ವಿದ್ಯೆ ಕಲಿಯುವವರಿಗೆ ಸುಲಭವಾಗಿ ಪಠ್ಯ ಪುಸ್ತಕಗಳೂ ದೊರಕುವ ಹಾಗೆ ತಕ್ಕ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಕೆಲವು ಕಡೆಗಳಲ್ಲಿ ಪ್ರೈಮರಿ ಶಾಲೆಗಳಲ್ಲಿ ಕನ್ನಡದ ಜೊತೆಗೆ, ಸಂಸ್ಕೃತವನ್ನು ಬೇರೆ ಕಲಿಸಿಕೊಡುತ್ತಿದ್ದಾರೆ. ಕನ್ನಡವನ್ನು ಹುಡುಗರಿಗೆ ತಿಳಿಯುವ ರೀತಿಯಲ್ಲಿ ಹೇಳಿಕೊಡುವುದಕ್ಕೆ ಸರಿಯಾದ ಅರ್ಹತೆಯಿಲ್ಲದ ಆ ಉಪಾಧ್ಯಾಯರಿಗೆ ಸಂಸ್ಕೃತವನ್ನು ಬೇರೆ ಸಮರ್ಪಕವಾಗಿ ಹೇಳಿಕೊಡಲು ಹೇಗೆ ಸಾಧ್ಯ? ಪ್ರಾರಂಭದಲ್ಲಿ ಕನ್ನಡವನ್ನು ಕಲಿಯಬೇಕಾಗಿರುವವರಿಗೆ ಸಂಸ್ಕೃತವನ್ನು ಬೇರೆ ಕಲಿಯುವ ಅವಶ್ಯಕತೆಯೇನು? ಸಂಸ್ಕೃತ ಪಾಠ ಹೇಳಬೇಕಾದರೂ ಅದನ್ನು ಚೆನ್ನಾಗಿ ಅರಿತಿರುವವರು ಮಕ್ಕಳಿಗೆ ಮನಸ್ಸಿಗೆ ನಾಟುವಂತೆ ಹೇಳಿಕೊಡುವವರಾಗಿರಬೇಕು.

ವಿದ್ಯಾಭ್ಯಾಸ ಸುಧಾರಣೆಯ ವಿಚಾರದಲ್ಲಿ ಮತ್ತೊಂದು ಅಂಶವನ್ನು ಈ ಸಭೆಯ ಗಮನಕ್ಕೆ ತಂದರೆ ಯಾರೂ ಆ ಬಗ್ಗೆ ಅನ್ಯಥಾ ಭಾವಿಸಬಾರದು. ನಿಮ್ನ ವರ್ಗದವರಿಗೆ ಕೊಡುವ ವಿದ್ಯಾಭ್ಯಾಸ ಯಾವ ರೀತಿ ಇರಬೇಕೆಂಬ ಬಗ್ಗೆ ಏನನ್ನೂ ಇದರಲ್ಲಿ ನಮೂದಿಸಿಲ್ಲ. ಹೆಚ್ಚು ಹೆಚ್ಚಾಗಿ ಇವರಿಗೆ ಸ್ಕಾಲರ್‌ಷಿಪ್ ಕೊಡಬೇಕೆಂಬುದನ್ನು ಮಾತ್ರ ತಿಳಿಸಿರುತ್ತಾರೆ. ಈಗ ನಮ್ಮ ಸಂಸ್ಥಾನದಲ್ಲಿ ನಮ್ಮ ವಿದ್ಯಾಭ್ಯಾಸ ಪ್ರಾರಂಭವಾಗಿ 52 ವರ್ಷಗಳಾದುವು. ಈ ದಿನ general standard of educatiou ಸಂಸ್ಥಾನದಲ್ಲಿ ಶೇಕಡಾ 20ರಷ್ಟು ಇರುವಾಗ ಹರಿಜನರಲ್ಲಿ ಕೇವಲ ಶೇಕಡ 5ರಷ್ಟು ಸಹ ಇಲ್ಲ. ಹೀಗಾದ ಮೇಲೆ ಇವರು ವಿದ್ಯಾಭ್ಯಾಸದಲ್ಲಿ ಬಹಳಮಟ್ಟಿಗೆ ಹಿಂದುಳಿದಿದ್ದಾರೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ನಮ್ಮ ದೇಶದಲ್ಲಿ ವಿದ್ಯಾ ಪ್ರಗತಿ ಸಾಧಿಸಬೇಕಾದರೆ, ಶ್ರೀ ವಿ. ವೆಂಕಟಪ್ಪನವರು ಹೇಳಿದಹಾಗೆ, agricultural residential schcol ಏರ್ಪಡಿಸಬೇಕು. I fully agree with him. ನಮ್ಮ ದೇಶ ಮುಖ್ಯವಾಗಿ ವ್ಯವಸಾಯದ ದೇಶ. ವ್ಯವಸಾಯಾಭಿವೃದ್ಧಿಯೇ ನಮ್ಮ ದೇಶದ ಅಭಿವೃದ್ಧಿ ಎಂಬುದನ್ನು ನಾವೆಲ್ಲರೂ ಪೂರ್ಣವಾಗಿ ಮನಗಾಣಬೇಕು. ಗ್ರಾಮಾಂತರ ಕಡೆಗಳಲ್ಲಿ ಪ್ರತಿ ನೂರು ಹುಡುಗರಿಗೆ ಒಂದೊಂದು agricultural residential school ಎಂದು ಮಾಡಿ. ಅವರ ನಿತ್ಯ ಜೀವನಕ್ಕೆ ಬೇಕಾಗುವ ತರಕಾರಿ, ಹಣ್ಣುಹಂಪಲು, ರಾಗಿ ಬತ್ತ ವಗ್ಯೆರೆ ಅವರೇ ಬೆಳೆಯಬೇಕು. ಅವರಿಗೆ ಬೇಕಾಗುವ ಬಟ್ಟೆಬರೆಗಳನ್ನು ಅವರೇ ಹೊಲಿದುಕೊಳ್ಳಬೇಕು ಎಂದು ಈ ರೀತಿಯಾಗಿ ಒಂದು self-contained unit ಆಗಿ ಮಾಡಿ ಈ ರೀತಿಯ ಸ್ಕೂಲುಗಳ ಸ್ಥಾಪನೆ ಆಗಬೇಕು. ಇದರಿಂದ ಅವರಿಗೆ ವಿದ್ಯೆ ಜೀವನ ಮಾರ್ಗದ ಅರಿವು ಬಂದು ಜಾಗ್ರತೆಯಾಗಿ ಅವರು ಏಳಿಗೆಗೆ ಬರಲು ಸಹಕಾರಿಯಾಗಿರುತ್ತದೆ.

ನಿಮ್ನ ವರ್ಗದ ಬಾಲಕ ಬಾಲಕಿಯರಿಗೆ ಈಗ ಕೊಡುತ್ತಿರುವ ಸ್ಕಾಲರ್‌ಷಿಪ್ ಸಂಖ್ಯೆ ಬಹಳ ಕಡಮೆಯಾಗಿದೆ. ಇದನ್ನು ಕೊನೆಯ ಪಕ್ಷ ಶೇಕಡಾ 20ರಷ್ಟಾದರೂ ಜಾಸ್ತಿ ಮಾಡಬೇಕು.

ನಿಮ್ನ ವರ್ಗದವರಿಗಾಗಿ ಪ್ರತ್ಯೇಕ ಪಾಠಶಾಲೆಗಳು ಏರ್ಪಡಿಸಿರುವುದನ್ನು ಮುಂದುವರಿಸುವುದಕ್ಕಾಗುವುದಿಲ್ಲವೆಂದು ಸಮಿತಿಯವರು ಅಭಿಪ್ರಾಯಪಟ್ಟಿರುತ್ತಾರೆ. ಈ ವಿಚಾರದಲ್ಲಿ ಎಷ್ಟೋ ಸುಧಾರಣೆಗಳಾದರೂ ಗ್ರಾಮಾಂತರಗಳಲ್ಲಿ ಕಷ್ಟವಿದೆ. ನಿಮ್ನ ವರ್ಗದವರು 300 ಮಂದಿಗಿಂತ ಮೇಲ್ಪಟ್ಟು ಯಾವ ಯಾವ ಗ್ರಾಮದಲ್ಲಿದ್ದಾರೆಯೋ ಅಲ್ಲೆಲ್ಲಾ ಇನ್ನೂ ಕೊಂಚಕಾಲ ಈಗಿರುವ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಬರುವುದು ಒಳ್ಳೆಯದು.

ವಿದ್ಯಾಭ್ಯಾಸ ಸುಧಾರಣೆಯನ್ನು ಜಾರಿಗೆ ತರಲು ದ್ರವ್ಯಾನುಕೂಲತೆ ಬೇಕೆಂಬುದು ಸರ್ಕಾರದ ಅಭಿಪ್ರಾಯ. ಈ ಬಗ್ಗೆ ಈಗಾಗಲೇ ಹಲವು ಮಾನ್ಯ ಸದಸ್ಯರು ಈ ಹಣವನ್ನು ಬರಮಾಡಿಕೊಳ್ಳಲು ಯಾವ ವಿಧವಾದ ತೆರಿಗೆಯನ್ನೂ ಹಾಕಬಾರದು ಎಂದು ತಿಳಿಸಿರುತ್ತಾರೆ. ಈ ವಿಚಾರವಾಗಿ ನನ್ನ ಸ್ವಂತ ಅಭಿಪ್ರಾಯ ಹೇಳುವುದಾದರೆ, ಸಂಸ್ಥಾನದಲ್ಲಿ ವಿದ್ಯಾಪ್ರಗತಿಯಾಗಬೇಕಾದರೆ, ದೇಶದ ಜನರು ವಿದ್ಯಾವಂತರಾಗಬೇಕಾದರೆ ಅದಕ್ಕಾಗಿ ತಗಲುವ ಖರ್ಚಿನ ಭಾರವನ್ನು ಸಹ ಅವರು ಕೊಂಚಮಟ್ಟಿಗೆ ವಹಿಸಿಕೊಂಡು ವಿದ್ಯಾಭ್ಯಾಸದ ಸೆಸ್ ಕೊಡಲು ಸಿದ್ಧರಾಗಿರಬೇಕು. ಖಂಡಿತವಾಗಿಯೂ ಸರ್ಕಾರದವರು ಈ ಬಗ್ಗೆ ತೆರಿಗೆಯನ್ನು ಜನರ ಮೇಲೆ ವಿಧಿಸಿ ಅದನ್ನು ವಸೂಲು ಮಾಡಿ ತನ್ಮೂಲಕ ವಿದ್ಯಾಪ್ರಸಾರಣಾ ಕಾರ್ಯವನ್ನು ಜಯಪ್ರದವಾಗಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಕೊನೆಯದಾಗಿ ಮಹಿಳೆಯರ ವಿದ್ಯಾಭ್ಯಾಸದ ವಿಚಾರವಾಗಿ ನಮ್ಮ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರು ಮತ್ತು ಸುಬ್ಬಮ್ಮನವರು ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ನನ್ನ ಅಭಿಪ್ರಾಯ ಹೇಳುವುದಾದರೆ ಈ ವಿಚಾರದಲ್ಲಿ ನಾನು ಶ್ರೀ ಶಿವಪ್ಪನವರನ್ನು ಅನುಮೋದಿಸುತ್ತೇನೆ. ಸ್ತ್ರೀಯರಿಗೆ ವಿದ್ಯಾಭ್ಯಾಸ ಕೊಡಬೇಡಿ ಎಂದು ಹೇಳುವುದಿಲ್ಲ ಆದರೆ ಒಂದು ವಿಷಯವನ್ನು ಗಮನದಲ್ಲಿಡಬೇಕು. ಗಂಡಸರು ಎಷ್ಟು ಜನ ಇದ್ದಾರೋ ಅಷ್ಟೇ ಜನ ಹೆಂಗಸರೂ ಇದ್ದಾರೆ ಎಂದು ಹೇಳಿದರೆ ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ ಎಂದು ನಂಬಿದ್ದೇನೆ.

ಒಬ್ಬ ಸದಸ್ಯರು.—ಇನ್ನೂ ಹೆಚ್ಚು ಜನ ಇದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬಹಳ ಸಂತೋಷ. ಹಾಗಿದ್ದ ಪಕ್ಷದಲ್ಲಿ ಗಂಡಸರಿಗೆ ಯಾವ ರೀತಿ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೀರೋ ಅದೇ ರೀತಿ ಸೌಲಭ್ಯಗಳನ್ನು ಹೆಂಗಸರಿಗೂ ಕಲ್ಪಿಸಿಕೊಡುವುದಾದ ಪಕ್ಷದಲ್ಲಿ ನಾವು ಯಾವ ರೀತಿ ಕ್ರಮ ಅನುಸರಿಸಬೇಕೆಂಬುದನ್ನು ಯೋಚನೆ ಮಾಡಬೇಕು. ಅವರಿಗೆ ವಿದ್ಯಾಭ್ಯಾಸ ಕೊಡಕೂಡದು ಎಂದು ನಾನು ಹೇಳುತ್ತಿಲ್ಲ. ನಿಜವಾಗಿಯೂ ನಮ್ಮ ದೇಶದಲ್ಲಿ ಹೆಂಗಸರಿಗೆ ಯಾವ ಮಟ್ಟದ ವಿದ್ಯಾಭ್ಯಾಸ ಕೊಡಬೇಕು, ಯಾವ ಮಟ್ಟದ ವಿದ್ಯಾಭ್ಯಾಸ ಕೊಟ್ಟ ಪಕ್ಷದಲ್ಲಿ ಅನೇಕ ಸಂಸಾರಗಳು ಉದ್ಧಾರವಾಗುತ್ತವೆ ಎಂಬುದನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ. ಎಲ್ಲರೂ B.A., M.A., ಪಾಸ್ ಮಾಡಿಕೊಂಡು ಸೆಕ್ರೆಟೇರಿಯಟ್‌ನಲ್ಲಿ ಗುಮಾಸ್ತೆರಾಗುತ್ತೇವೆ ಎಂತಲೋ ಅಥವಾ ಪಾಶ್ಚಿಮಾತ್ಯ ದೇಶಗಳಿಗೆ ಹೋಗಬೇಕೆಂತಲೋ ಓದುವುದಿಲ್ಲ. ಒಂದು ವೇಳೆ ಆ ರೀತಿ ಓದಿದರೂ ಸಹ ಯಾರೂ ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಯಾವುದಾದರೂ ಅಚಾತುರ್ಯವಾದ ಪಕ್ಷದಲ್ಲಿ ಆಗ ವಿದ್ಯಾಭ್ಯಾಸ ಹೊಂದಿದ್ದರೆ ಎಲ್ಲಾದರೂ ನೌಕರಿ ಮಾಡಿಕೊಂಡು ತನ್ನ ಜೀವನ ನಡೆಸುವುದಕ್ಕೆ ಅವಕಾಶವಾಗುತ್ತದೆ, ಸಂಪಾದನೆ ಮಾಡುವುದಕ್ಕೆ ಸಾಮರ್ಥ್ಯ ಇರುತ್ತದೆ ಎಂದು ಹೇಳಿ ಓದುತ್ತಾರೆ. ಅದಕ್ಕೆ ಅವರಿಗೆ ಸೆಕೆಂಡರಿ ವಿದ್ಯಾಭ್ಯಾಸದ ಮಟ್ಟದವರೆಗೆ ವಿದ್ಯಾಭ್ಯಾಸ ಕೊಟ್ಟರೆ ಸಾಕು. ಅದರ ಜೊತೆಗೆ ಕಸೂತಿ ಮತ್ತು ಇತರ ಕೆಲಸಗಳನ್ನು ಹೇಳಿಕೊಟ್ಟು ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಷ್ಟು ಹೊರತು ಯೂನಿವರ್ಸಿಟಿ ವಿದ್ಯಾಭ್ಯಾಸ ಸ್ತ್ರೀಯರಿಗೆ ಕೊಡತಕ್ಕದ್ದು ಅಷ್ಟೇನೂ ಸೂಕ್ತವಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ ಫೀಜಿನ ವಿಚಾರ ಹೇಳಿದರು. ಶ್ರೀ ಶಿವಪ್ಪನವರು ಹೇಳಿದ್ದು ನಿಜ. ಫೀಜು ಕೊಡತಕ್ಕದ್ದು ಗಂಡಸರೇ ಹೊರತು ಹೆಂಗಸರೇನೂ ಅಲ್ಲ. ಆದ್ದರಿಂದ ಖಂಡಿತವಾಗಿಯೂ ಅವರಿಗೆ ಹಿಂದೆ ಇದ್ದ ಹಾಗೆ ಪೂರ್ತಿ ಫೀಜು ಮಾಫಿ ಮಾಡುವುದು ಅಥವಾ ಅರ್ಧ ಫೀಜು ಹಾಕುವುದು ಸೂಕ್ತ, ಜವಾಬ್ದಾರಿಯೆಲ್ಲಾ ಗಂಡಸರ ತಲೆ ಮೇಲೆ ಇರುತ್ತದೆ ಅದನ್ನು ಅವರೂ ಸಹ ಒಪ್ಪುತ್ತಾರೆ ಎಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುತ್ತಾ ಇದ್ದೇನೆ.

ಒಟ್ಟಿನಲ್ಲಿ, ದೇಶದ ಸ್ಥಿತಿಗತಿಗಳಿಗನುಗುಣವಾಗಿ ತಂದಿರತಕ್ಕ ಈ ಸುಧಾರಣೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಆದರೆ ಒಟ್ಟಿಗೆ ಈ ಸುಧಾರಣೆಯಲ್ಲಿರುವುದೆಲ್ಲವನ್ನೂ ಜಾರಿಗೆ ಕೊಡುವುದಕ್ಕೆ ಈಗಿನ ಆರ್ಥಿಕ ಸ್ಥಿತಿಯಲ್ಲಿ ಸಾಧ್ಯವಾಗದ ಪಕ್ಷಕ್ಕೆ ಮೊದಲಿನಿಂದ ಷುರುವಾಗಿ 1956ನೆಯ ವರ್ಷದಲ್ಲಾದರೂ ಜಾರಿಗೆ ತರುವುದಕ್ಕೆ ಏರ್ಪಾಡು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳಲು ಮರೆತೆ. ಪರೀಕ್ಷೆಗಳ ವಿಚಾರದಲ್ಲಿ ಇದರ ಪ್ರಕಾರ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ವಜಾ ಮಾಡಬೇಕೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ನನ್ನ ಅಭಿಪ್ರಾಯವೇನೆಂದರೆ, ಈಗ ಎಷ್ಟೋ ಹುಡುಗರು ಮಿಡ್ಲ್ ಎರಡನೆ ತರಗತಿ, ಮೂರನೆ ತರಗತಿ ನಾಲ್ಕನೆಯ ತರಗತಿಗಳಲ್ಲಿ ಓದುತ್ತಿದ್ದಾರೆ. ಈಗಿನ್ನೂ ಹೊಸ ಸುಧಾರಣೆಗಳನ್ನು ಜಾರಿಗೆ ಕೊಟ್ಟಿಲ್ಲ. ಈಗ ತಾವು ತಕ್ಷಣ ಜಾರಿಗೆ ಕೊಟ್ಟರೆ ಮಿಡ್ಲ್ ಸ್ಕೂಲಿನ ಮೂರನೆಯ ಮತ್ತು ನಾಲ್ಕನೆಯ ತರಗತಿಯ ಹುಡುಗರಿಗೆ ಸುಮ್ಮನೆ ಪ್ರಮೋಷನ್ ಕೊಟ್ಟು ಹೈಸ್ಕೂಲಿಗೆ ತೆಗೆದುಕೊಂಡಂತಾಗುತ್ತದೆ. ಇದರಿಂದಾಗಿ ಎಷ್ಟೋ ಹುಡುಗರು ಲೋವರ್ ಸೆಕೆಂಡರಿ ಪಾಸು ಮಾಡಿಕೊಂಡು ಹೈಸ್ಕೂಲಿಗೆ ಹೋಗಿ ಎಸ್. ಎಸ್. ಎಲ್. ಸಿ. ಪಾಸ್ ಮಾಡಿ ಸರ್ಟಿಫಿಕೇಟ್ ತೆಗೆದುಕೊಂಡು ಯಾವುದಾದರೂ ಮೇಷ್ಟರ ಕೆಲಸಕ್ಕೆ ಹೋಗುವುದಕ್ಕೆ ಅವಕಾಶವಿರುತ್ತದೆ. ಆದ್ದರಿಂದ ಹಾಲಿ ಇರುವಂತೆ ಲೋವರ್‌ಸೆಕೆಂಡರಿ ಪರೀಕ್ಷೆಯನ್ನು 1956ನೆಯ ಇಸವಿಯವರೆಗೂ ಇಟ್ಟಿರಬೇಕೆಂದು ನಾನು ಸೂಚಿಸುತ್ತೇನೆ. ಇಷ್ಟನ್ನು ಹೇಳಿ, ನನಗೆ ಈ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ.

Sri K. PATTABHIRAMAN (Kolar).—Mr. Speaker, before the discussion continues, before it is further taken up, I would like to seek some clarification from the Hon'ble Minister. Possibly it might help us very much. There is a feeling in some of us that in adopting the pattern of basic education there are certain declarations made by the Central Government which might give a large windfall in so far as the finances are concerned, *viz.*, 30 per cent of the cost of basic education is to be entirely borne by the Central Government and all expenses in respect of training in regard to basic education to be completely borne by the Central Government. I think there are these two declarations. Possibly, if the Hon'ble Minister for Education would try to clarify this matter, it might facilitate us to appreciate the financial position in the perspective certainly better or more helpful to the report now under discussion.

Sri A. G. RAMACHANDRA RAO.—My information is this that the Government wants that all further expansion of elementary education should be of the basic type and as far as possible the present elementary schools should be converted into basic schools, and both in regard to expansion as well as conversion ,they are going to bear in a certain proportion the extra expenses that would be necessary; I believe the proportion is 1 : 2.

Sri J. MOHAMED IMAM.—I may bring to the notice of the Minister this fact. The Five-Year Plan provides about Rs. 151 crores for education, which comprises Rs. 34 crores at the Centre and about

Rs. 117 crores in the States. That is, we have to find out ways and means of securing Rs. 117 crores. The obligation rests on the States and the Centre is prepared to advance only to the extent of Rs. 34 crores for the whole country.

Sri A. G. RAMACHANDRA RAO.—For the whole country and for all grades of education.

Sri J. MOHAMED IMAM.—In that case, the proportion you mentioned, 1 : 2 may not be quite correct.

Sri A. G. RAMACHANDRA RAO.—Further some talks are now going on for technical education; regarding the ratio I feel that is the correct figure.

Sri A. BHEEMAPPA NAIK.—1 : 2, is it in addition to the aid that is shown under the Five-Year Plan or does it include ....

Sri A. G. RAMACHANDRA RAO.—It is a part of the Five-Year Plan.

Sri A. BHEEMAPPA NAIK.—So, if we are to incur all that expenditure, we have to cut short expenditure on other items.

Sri A. G. RAMACHANDRA RAO.—No. I believe I have to make myself clear. For all extension of basic education in the State and for the conversion, above the normal expenditure that we are incuring the extra expenditure will be apportioned between the States and the Centre in the proportion of one to two.

Sri K. PATTABHIRAMAN.—I just want to clarify what the Hon'ble Minister for Education said. Possibly, he has put it very clearly. So far as the content or pattern of basic type of education is concerned, it has a certain significance even in terms of finance. In regard to the general educational set up, the present type of general education, what exactly will be the central assistance is a matter on which I am now not competent to say nor is it very necessary. But adopting the pattern of education of basic type—it has a very peculiar significance to us, namely, that the entire cost in regard to the training will be borne by the Central Government. That is the declaration made. In regard to the expenditure incurred on the type of basic education, on a ratio of one is to two, thirty per cent will be borne by the Centre. But that kind of Central assistance will not come to us definitely if we do not adopt the basic type. I am just adding a clarification.

Some of my friends might remember that while inaugurating the previous session of the Parliament, the President, in his opening address, said that he deplored that the pace at which basic education was being developed and fostered in the country was something that was deplorable. That is the trend, because, finance seems to have coloured or influenced the decisions of very many of us in this House, as I could see; therefore, I thought this clarification from the Minister might help us to appreciate this better.

Sri K. HANUMANTHAIYA (Chief Minister).—Sir, I expected that this House would give us guidance in regard to policies. If we think too much of finance, nothing can be done. We have to make up our mind regarding the policies to be pursued in remoulding our education. It is for that that we sought the guidance of the House. If we go on eternally discussing about finance, it will merely become a discussion on finance and not on educational problems.

Sri K. PATTABHIRAMAN.—Sir, personally I endorse your views. But there is this House. (*Laughter*).

*ಶ್ರೀ ಎಚ್. ಎಸ್. ರುದ್ರಪ್ಪ (ಹೊನ್ನಾಳಿ).—ಅಧ್ಯಕ್ಷರೇ, ಬಹುಶಃ ಈಗಾಗಲೇ ಅನೇಕ ನನ್ನ ಮಿತ್ರರು ಈ ವರದಿಯ ಬಗ್ಗೆ ಮಾತನಾಡಿರುತ್ತಾರೆ. ಹಾಗೆ ಇಲ್ಲಿಯವರೆಗೂ ಚರ್ಚೆಮಾಡಿರತಕ್ಕವರ ಪೈಕಿ ಕೆಲವರು ಇದನ್ನು ಸಂಪೂರ್ಣವಾಗಿ ಸ್ವಾಗತಿಸಿದ್ದಾರೆ. ಮತ್ತೆ ಕೆಲವರು ಇದರ ಬಗ್ಗೆ ಅವರ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇದರಲ್ಲಿರತಕ್ಕ ಅಂಶಗಳ ಬಗ್ಗೆ ನಾವು ಹೀಗೆ ಚರ್ಚೆಮಾಡಿ ಕೇವಲ ನಮ್ಮ ಅಭಿಪ್ರಾಯಗಳನ್ನು ಸೂಚಿಸಿದ ಮಾತ್ರಕ್ಕೇ ನಮ್ಮ ಜವಾಬ್ದಾರಿ ಪೂರೈಸಿದಂತಾಗುವುದಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಾವು ನಮ್ಮ ಪ್ರಜೆಗಳನ್ನು ಸತ್ಪ್ರಜೆಗಳ

(ಶ್ರೀ ಎಚ್. ಎಸ್. ರುದ್ರಪ್ಪ.)

ನ್ನಾಗಿ ಮಾಡಬೇಕಾದದ್ದು ನಮ್ಮಗಳ ಕರ್ತವ್ಯವಾಗಿದೆ. ನಮ್ಮ ದೇಶದಲ್ಲಿ ಡೆಮಾಕ್ರಸಿ ಎಂದು ಹೇಳಿ ಏನು ಮಾಡಿದೆಯೋ ಅದನ್ನು ನಾವು ಉಳಿಸಿಕೊಳ್ಳಬೇಕಾದರೆ ನಾವು ನಮ್ಮ ಮುಂದಿನ ಜನಾಂಗಕ್ಕೆ ಒಂದು ಸರಿಯಾದ ದಾರಿಯನ್ನು ಹಾಕಿ ಕೊಡಬೇಕಾಗಿರುತ್ತದೆ. ಹಾಗೆ ಮಾಡದೆ ಸುಮ್ಮನೆ ಈಗಿರತಕ್ಕ ಪದ್ಧತಿಯನ್ನೂ ಮತ್ತು ಇಂದು ಬದಲಾವಣೆ ಮಾಡಬೇಕೆಂದು ಉದ್ದೇಶಿಸಿರುವುದನ್ನೂ ನಾವುಗಳು ಸುಮ್ಮನೆ ಖಂಡಿಸಿ ಮಾತನಾಡಿದರೆ ಅವರಿಂದಲೇನೂ ನಮಗೆ ಬೇಕಾದಂಥ ಒಂದು ಸುಗಮವಾದ ದಾರಿ ಸಿಕ್ಕಿದಂತಾಗುವುದಿಲ್ಲ. ಹೀಗೆ ಮಾಡುವುದರಿಂದ ನಮ್ಮ ದಾರಿಯೇನೂ ಒಂದು ಸುಲಭರೂಪಕ್ಕೆ ಬಂದಂತಾಗಲಿಲ್ಲ. ಈ ಸಮಿತಿಯಲ್ಲಿ ಅನೇಕ ದೊಡ್ಡ ದೊಡ್ಡ ಪಂಡಿತರೂ, ವಿದ್ಯಾವಂತರೂ ಮತ್ತು ನುರಿತ ಅನುಭವಶಾಲಿಗಳೂ ಇದ್ದಾರೆ. ಅವರು ಅನೇಕ ವಿಚಾರಗಳನ್ನು ಕ್ರೋಢೀಕರಿಸಿ ನಮ್ಮ ದೇಶದ ಜನರಿಗೆ ಹೊಂದಾವಣಿಕೆಯಾಗುವಂಥ ವಿದ್ಯಾಭ್ಯಾಸವನ್ನು ನಾವು ಯಾವ ರೀತಿ ನಮ್ಮ ಜನರಿಗೆ ಕಲ್ಪಿಸಿ ಕೊಡಬೇಕು, ಮುಂದೆ ಯಾವರೀತಿ ಇದನ್ನು ಅವರು ಒಂದು ಕ್ರಮವಾಗಿ ನಡೆಸಿಕೊಂಡು ಹೋಗಲು ಏನೇನು ಕಾರ್ಯ ಕ್ರಮಗಳನ್ನು ನಾವು ಕೈಕೊಳ್ಳಬೇಕು ಎಂಬ ಇತ್ಯಾದಿ ಅನೇಕ ವಿಚಾರಗಳನ್ನು ಈ ವರದಿಯಲ್ಲಿ ತಿಳಿಸಿದ್ದಾರೆ. ಆದುದರಿಂದ ನಾವೀಗ ಆ ಸಮಿತಿಯವರು ಸೂಚಿಸಿರುವ ಸಲಹೆಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡು ಚರ್ಚೆ ಮಾಡಬೇಕಾಗಿದೆ. ಆದರೆ ನನಗೆನಿಸುತ್ತದೆ—ನಾವು ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡುವುದು ಅವರನ್ನು ದೇಶದ ಸತ್ಪ್ರಜೆಗಳನ್ನಾಗಿ ಮಾಡುವುದಕ್ಕೇ ಹೊರತು ಅವರನ್ನು ಪರೀಕ್ಷೆಗಳಲ್ಲಿ ಒಂದು ಫಸ್ಟ್‌ಕ್ಲಾಸ್‌ನಲ್ಲಿ ಪಾಸ್‌ಮಾಡುವಂತೆ ಮಾಡಬೇಕೆಂಬ ಉದ್ದೇಶದಿಂದಲ್ಲ. ಇಂಥ ಒಂದು ಉದ್ದೇಶದಿಂದಲೇನಾದರೂ ನಾವು ವಿದ್ಯಾಭ್ಯಾಸ ಕೊಡುವುದಾದರೆ ಅಂಥ ವಿದ್ಯಾಭ್ಯಾಸದಿಂದ ದೇಶಕ್ಕೇನೂ ಪ್ರಯೋಜನವಾಗುವುದಿಲ್ಲ. ಆದಕಾರಣ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಸತ್ಪ್ರಜೆಯಾಗಿ ಬಾಳಬೇಕಾಗಿದ್ದರೆ ನಾವು ದೇಶದಲ್ಲಿ ಯಾವ ರೀತಿಯಾದ ವಿದ್ಯಾಭ್ಯಾಸವನ್ನು ಮುಂದುವರಿಸಿದರೆ ಇದು ಸಾಧ್ಯವಾಗುತ್ತದೆ, ಮುಂದೆ ನಮ್ಮ ಜನರು ಒಂದು ಸುಗಮವಾದ ರೀತಿಯಿಂದ ಪ್ರಜಾಸತ್ತಾತ್ಮಕ ರಾಜ್ಯಭಾರವನ್ನು ನಡೆಸಲು ಅನುಕೂಲವಾಗುತ್ತದೆ ಎಂಬ ಬಗ್ಗೆ ನಾವು ಇಂಗ್ಲೆಂಡ್, ಅಮೆರಿಕಾ, ಜರ್ಮನಿ ಮತ್ತು ಇತ್ತೀಚೆಗೆ ರಷ್ಯ, ಚೈನಾ ಮತ್ತು ಜಪಾನ್ ಈ ದೇಶಗಳವರನ್ನು ನೋಡಿ ಅವರಿಂದ ಒಂದು ಪಾಠವನ್ನು ನಾವು ಅರಿತುಕೊಂಡರೆ ಆಗ ನಮಗೆ ಇದು ಚೆನ್ನಾಗಿ ಗೊತ್ತಾಗುತ್ತದೆ. ಈ ವಿದ್ಯಾಭ್ಯಾಸದಲ್ಲಿ, ನಮ್ಮ ದೇಶಕ್ಕಿಂತಲೂ ಹಿಂದಿದ್ದಂಥ ದೇಶಗಳೆಲ್ಲಾ, ಎಂದರೆ ಆರ್ಥಿಕ ಪರಿಸ್ಥಿತಿಯಲ್ಲಿ ಹಿಂದುಳಿದಿದ್ದಂಥ ದೇಶಗಳೆಲ್ಲಾ, ಹೇಗೆ ಅವು ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ವಿದ್ಯಾ ಸೌಕರ್ಯಗಳನ್ನೊದಗಿಸಿ ಅವುಗಳು ಯಾವ ರೀತಿಯಲ್ಲಿ ಒಂದು ಮೇಲ್ಮಟ್ಟವನ್ನು ಹೊಂದಿದವು ಎಂಬ ಅಂಶಗಳನ್ನೆಲ್ಲಾ ನಾವು ಕ್ರೋಢೀಕರಿಸಿ ಅವುಗಳನ್ನೆಲ್ಲಾ ನಮ್ಮ ಮನಸ್ಸಿನಲ್ಲಿಟ್ಟುಕೊಂಡು, ಅನಂತರ ಈ ವರದಿಯಲ್ಲಿ ಸೂಚಿಸಿರತಕ್ಕಂಥ ಅಭಿಪ್ರಾಯಗಳನ್ನು ನಾವು ವಿಮರ್ಶೆ ಮಾಡಿ ನೋಡುವುದಾದರೆ, ನನಗೆನಿಸುತ್ತದೆ, ಈ ಸಮಿತಿಯವರು ಕೆಲವು ಅತ್ಯುತ್ತಮವಾದಂಥ ಒಳ್ಳೆಯ ಸಲಹೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎಂದು. ಆದರೆ ಈ ವರದಿಯಲ್ಲಿ ನಮಗೆ ಎದ್ದು ಕಾಣುವ ಒಂದು ವಿಷಯವೆಂದರೆ ನಮ್ಮ ಇಂದಿನ ಹಣಕಾಸಿನ ಪರಿಸ್ಥಿತಿಯಲ್ಲಿ ನಾವು ಇದನ್ನೆಲ್ಲಾ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಒಂದು ದೊಡ್ಡ ಅನುಮಾನ. ಅವರು ಇವಕ್ಕೆಲ್ಲಾ 8–10 ಕೋಟಿರೂಪಾಯಿಗಳು ಆಗಬೇಕೆಂದು ಹೇಳಿದ್ದಾರೆ. ಇಷ್ಟನ್ನೂ ನಾವು ಎಲ್ಲಿಂದ ಒದಗಿಸಬೇಕು, ಇದು ನಮ್ಮಿಂದ ಸಾಧ್ಯವೇ ಎಂಬುದಾಗಿ ಒಂದು ಭೀತಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ನಾವು ಹೆದರಿಕೊಂಡು ಸುಮ್ಮನೆ ಕುಳಿತುಬಿಟ್ಟಿದ್ದೇ ಆದರೆ ನಾವು ಕರ್ತವ್ಯಬಾಹಿರರಾಗುತ್ತೇವೆ. ಆದುದರಿಂದ ಈ ವಿಷಯವನ್ನು ಚರ್ಚೆ ಮಾಡುವಾಗ ನಾವು ಈ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮೊದಲನೆಯದಾಗಿ ಈಗ ಈ ವರದಿಯಲ್ಲಿ 6 ವರ್ಷ ವಯಸ್ಸಿನೊಳಗಿರುವ ಹುಡುಗರಿಗೆ ಬೇಕಾಗಿರುವಂಥ ಶಿಶುವಿಹಾರ ಪಾಠಗಳನ್ನು ತೆರೆಯಲು ಅದಕ್ಕೆ ತಗಲುವ ಖರ್ಚುವೆಚ್ಚಗಳೇನನ್ನೂ ಸರ್ಕಾರದವರು ವಹಿಸುವುದಿಲ್ಲವೆಂದೂ, ಆ ಖರ್ಚುವೆಚ್ಚಗಳನ್ನೆಲ್ಲಾ ಆಯಾ ಬಾಲಕರ ತಂದೆತಾಯಿಗಳೇ ವಹಿಸಬೇಕಾಗಿದೆ ಎಂಬುದಾಗಿಯೂ ತಿಳಿಸಲಾಗಿದೆ. ಹೀಗೆ ತಿಳಿಸಿರುವುದರಿಂದ ಇಂಥ ಒಂದು ಖರ್ಚುವೆಚ್ಚಗಳನ್ನು ವಹಿಸಿಕೊಂಡು ಆ ಶಿಶುವಿಹಾರ ಮಂದಿರಗಳನ್ನು ನಡೆಸುವುದಕ್ಕೆ ನಿಜವಾಗಿಯೂ ಅವರಿಗೆ ಶಕ್ತಿಸಾಮರ್ಥ್ಯಗಳಿವೆಯೇ ಎಂಬುದನ್ನು ನಾವೀಗ ಆಲೋಚಿಸಬೇಕಾಗಿದೆ. ಆದರೆ ಪಟ್ಟಣಗಳಲ್ಲಿರತಕ್ಕವರೇನೋ ಈ ಖರ್ಚುವೆಚ್ಚಗಳನ್ನು ವಹಿಸಿಕೊಳ್ಳಬಹುದು. ಆದರೆ ಹಳ್ಳಿಗಳಲ್ಲಿರತಕ್ಕವರಲ್ಲಿ, ಕೆಲವರಿಗೆ ಅದರಲ್ಲೂ ನಮ್ಮ ಶ್ರೀ ವಿ. ವೆಂಕಟಪ್ಪನವರಂಥ ಶ್ರೀಮಂತರಿಗೆ ಇದು ಸಾಧ್ಯವಿರಬಹುದೇ ಹೊರತು ಬಾಕಿಯವರಿಗೆ ಇದು ಸಾಧ್ಯವಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಹಳ್ಳಿಗರವರೆಲ್ಲರೂ ಇಂಥ ಶಿಶುವಿಹಾರ ಕೇಂದ್ರಗಳನ್ನು ತೆರೆಯಬೇಕೆಂದರೆ ತುಂಬಾ ತೊಂದರೆಗಳೂ ನಾನಾ ಕಷ್ಟಗಳೂ ಇರುತ್ತವೆ. ಹಾಗೆಯೇ ಈ ಕೇಂದ್ರಗಳೆಲ್ಲವನ್ನೂ ಸರ್ಕಾರದವರೇ ತೆರೆಯಬೇಕೆಂದರೆ ಅವರಿಗೂ ಕೂಡ ತುಂಬ ತೊಂದರೆಯಿದೆ. ಅವರಿಂದಲೂ ಸಹ ಸಾಧ್ಯವಿಲ್ಲ. ಆದರೆ ಕೆಲವುಕಡೆ ಜನರು ಸರ್ಕಾರದವರ ಯಾವ ಒಂದು ಸಹಾಯವೂ ಇಲ್ಲದೆ ವಿದ್ಯಾಭ್ಯಾಸದ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಎಲ್ಲರೂ ಇದೇ ರೀತಿ ಮಾಡಬೇಕೆಂದರೆ ತುಂಬ ಕಷ್ಟವಿದೆ. ಆದರೆ ಯಾವ ಯಾವ ತಂದೆತಾಯಿಗಳಿಗೆ ಇಂಥ ಶಿಶುವಿಹಾರ ಮಂದಿರಗಳ ಮೇಲೆ ತುಂಬ ಪ್ರೇಮವಿದೆಯೋ ಮತ್ತು ಯಾರುಯಾರಿಗೆ ಇಂಥ ಮಂದಿರಗಳನ್ನು ತೆರೆಯಲು ಅನುಕೂಲತೆಗಳಿವೆಯೋ ಅಂಥವರು ಇವುಗಳನ್ನು ಬಹಳ ಕಡಿಮೆ ಖರ್ಚಿನಲ್ಲಿ ಮಾಡಿಕೊಳ್ಳಬಹುದು. ನಾನೂ ಕೂಡ ಕೂಲಿಮಠದಲ್ಲೇ ಓದಿದವನು. ಆಗಿನ ಕಾಲದಲ್ಲಿ ಈಗಿನಂತೆ ಸರ್ಕಾರೀ ಪಾಠಶಾಲೆಗಳು ಇರಲಿಲ್ಲ. ಆದುದರಿಂದ ನಮ್ಮ ತಂದೆತಾಯಿಗಳು ಆ ಕೂಲಿಮಠಕ್ಕೆ ಸೇರಿಸಿದ್ದರು. ಹಿಂದಿನಕಾಲದಲ್ಲೆಲ್ಲಾ ಬಹುಶಃ ವಿದ್ಯಾಭ್ಯಾಸ ಹಾಗೆಯೇ ನಡೆಯುತ್ತಿತ್ತೆಂದು ಹೇಳಬಹುದು. ನಾವೂ ಸಹ ಈಗ ಹಾಗೆಯೇ ಮಾಡಬೇಕಾಗಿದೆ. ಆದರೆ ಈ ದಿವಸ ಯಾರು ಯಾರು ಮುಂದೆ

ಬಂದು ಇಂಥ ಶಿಶುವಿಹಾರಗಳನ್ನು ತೆರೆಯುತ್ತೇವೆಂದು ಹೇಳುತ್ತಾರೋ ಅಂಥವರಿಗೆ ಸರ್ಕಾರದವರು ಒಂದು ಸಹಾಯ ನೀಡಬೇಕಾದದ್ದು ಅಗತ್ಯವಾಗಿದೆ. ಈರೀತಿಯಾಗಿ ಸರ್ಕಾರದವರು ಒಂದು ಸಹಾಯವನ್ನು ಇಂದು ಪಟ್ಟಣಗಳಲ್ಲಿರತಕ್ಕ ಶಿಶುವಿಹಾರಗಳಿಗೆ ಕೊಡುತ್ತಿದ್ದಾರೆಂದು ನಾನು ಕೇಳುತ್ತೇನೆ. ಅನೇಕ ಶ್ರೀಮಂತರೂ ಸಹ ಇವುಗಳಿಗೆ ಬೇಕಾದಷ್ಟು ಹಣ ಸಹಾಯ ನೀಡಿದ್ದಾರೆ. ನಾನೀಗ ಒತ್ತಾಯ ಮಾಡಬೇಕಾಗಿರುವ ವಿಷಯವೇನೆಂದರೆ—ಇಂಥ ಶಿಶುವಿಹಾರಗಳನ್ನು ಯಾರು ತೆರೆಯುತ್ತೇವೆಂದು ಮುಂದೆ ಬರುತ್ತಾರೋ ಅಂಥವರಿಗೆ, ಅವರು ಶ್ರೀಮಂತರೇ ಆಗಿರಲಿ, ಅಥವಾ ಬಡವರೇ ಆಗಿರಲಿ, ಅವರು ಯಾರೇ ಆಗಿರಲಿ, ಅಂತೂ ಈ ಸ್ಕೂಲುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ತೆರೆಯತಕ್ಕವರಿಗೆ ತಾವು ಸ್ವಲ್ಪ ಸಹಾಯ ಮಾಡಿದರೆ ಅದರಿಂದ ಜನರಲ್ಲಿ ಒಂದು ಆಕರ್ಷಣೆಹುಟ್ಟಿ ಅನಂತರ ಜನರಲ್ಲೇ ಒಂದು ಸ್ವಶಕ್ತಿ ಉಂಟಾಗಿ ಅವರವರೇ ಇಂಥ ಸ್ಕೂಲುಗಳನ್ನು ಹೆಚ್ಚು ಹೆಚ್ಚಾಗಿ ಕಲ್ಪಿಸಿಕೊಳ್ಳಲು ಅವರಿಗೆ ಆಸಕ್ತಿ ಹುಟ್ಟುತ್ತದೆ; ತಾವು ಹೀಗೆ ಮಾಡುವುದು ಉತ್ತಮ ಎಂಬು ನಾನು ಸಲಹೆ ಮಾಡುತ್ತೇನೆ. ಸರ್ಕಾರದವರು ಏನೂ ಮಾಡದೇ ಇದ್ದಲ್ಲಿ ಜನರೇ ಇದನ್ನು ಪ್ರಥಮತಃ ಪ್ರಾರಂಭಿಸಲು ತುಂಬಾ ಕಷ್ಟವಿರುತ್ತದೆ. ಅಷ್ಟೇ ಅಲ್ಲದೆ ಸರ್ಕಾರದವರು ಹಳ್ಳಿಯವರಿಗೂ ಮತ್ತು ಪಟ್ಟಣದವರಿಗೂ ಒಂದು ವ್ಯತ್ಯಾಸವನ್ನು ತೋರಿಸಿದಂತಾಗುತ್ತದೆ. ಆದರೆ ಪಟ್ಟಣದಲ್ಲಿರತಕ್ಕವರಿಗೂ, ಮತ್ತು ಹಳ್ಳಿಯಲ್ಲಿರತಕ್ಕವರಿಗೂ ತುಂಬ ವ್ಯತ್ಯಾಸವಿದೆ. ಆದುದರಿಂದ ಹಳ್ಳಿಗಳಲ್ಲಿ ಯಾರಾದರೂ ಈ ಶಿಶುವಿಹಾರಗಳನ್ನು ತೆರೆಯುತ್ತೇವೆಂದು ಮುಂದೆ ಬರುವುದಾದರೆ ತಾವು ಅಂಥವರಿಗೆ ಒಂದು ಉತ್ತೇಜನ ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

5 P.M.

ಅನಂತರ ಎರಡನೆಯದು ಆರರಿಂದ 12 ವರ್ಷಗಳವರೆಗೆ ನಡೆಯುವ ಪ್ರಾಥಮಿಕ ವಿದ್ಯಾಭ್ಯಾಸ ಇಂಗ್ಲೆಂಡ್, ಅಮೇರಿಕಾ ಮುಂತಾದ ಇತರ ದೇಶಗಳಲ್ಲಿ ನೋಡಿದರೆ ಈ ವಿದ್ಯಾಭ್ಯಾಸದ ಭಾರವನ್ನು ಚರ್ಚು ಮುಂತಾದ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್‌ಗಳವರು ತಾವೇ ವಹಿಸಿಕೊಂಡು ಸುಲಭವಾಗಿ ನಡೆಸುತ್ತಾರೆ. ಅಲ್ಲಿ ಸರ್ಕಾರದ ಕರ್ತವ್ಯ ಬರೀ ಹೊಟ್ಟೆಗೆ ಅನ್ನ ನೀಡುವುದು. ಇದು ಪ್ರಜಾಪ್ರಭುತ್ವದ ಕರ್ತವ್ಯ. Confering democracy on hungry people is as good as wedding a eunuch. ವಿದ್ಯಾಭ್ಯಾಸಕ್ಕಿಂತ ಯಾರೂ ಉಪವಾಸ ಮಾಡದಂತೆ ನೋಡಿಕೊಳ್ಳಬೇಕಾದುದು ಮುಖ್ಯವಾದುದು, ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ತೊಂದರೆ ಎಂಬದಾಗಿ ಹೇಳುತ್ತಾರೆ. ಹಾಗೆ ವಿದ್ಯಾಭ್ಯಾಸಕ್ಕೆ ಎರಡನೆಯ ಸ್ಥಾನ ಕೊಟ್ಟಿದ್ದಾರೆ. ಆದರೆ ಹೊರದೇಶಗಳಲ್ಲಿ ವಿದ್ಯಾಭ್ಯಾಸದ ಜವಾಬ್ದಾರಿ ಹೆಚ್ಚಾಗಿ ಧಾರ್ಮಿಕ ಸಂಸ್ಥೆಗಳು ಮುಂತಾದುವು ವಹಿಸುವಾಗ ನಮ್ಮ ದೇಶದಲ್ಲಾದರೋ ಆ ಭಾರವೆಲ್ಲಾ ಸರ್ಕಾರದ ಮೇಲೆಯೇ ಬಿದ್ದಿದೆ. ನಮ್ಮಲ್ಲಿ ಹಾಗೆ ಧಾರ್ಮಿಕ ಸಂಸ್ಥೆಗಳು ಮುಂದೆ ಬರುತ್ತಿಲ್ಲ. ಯಾವ ಮುಂದುವರಿದ ದೇಶವನ್ನು ತೆಗೆದುಕೊಂಡು ನೋಡಿದರೂ ಧಾರ್ಮಿಕ ಸಂಸ್ಥೆಗಳು ಮೊದಲು ಮುಕ್ಕಾಲುಭಾಗ ವಿದ್ಯಾಭ್ಯಾಸದ ಜವಾಬ್ದಾರಿ ವಹಿಸಿ ಆ ಮೇಲೆ ಸರ್ಕಾರದ ಜವಾಬ್ದಾರಿಗೆ ಬಿಟ್ಟಿದ್ದಾರೆ. ಹತ್ತಾರು ವರ್ಷಗಳಾದ ಮೇಲೆ ಸರ್ಕಾರ ವಹಿಸಿಕೊಂಡಿದೆ. ಈಗ ಎಲ್ಲಾ ಕಡೆಯೂ ಸುಧಾರಣೆ ಮಾಡಬೇಕೆಂದು ಹೇಳುತ್ತಾರೆ, ಅದು ಒಪ್ಪಬೇಕಾದದು. ಅದನ್ನು ಯಾವ ರೀತಿ ಮಾಡಬೇಕು, ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲದಿರುವಾಗ ಹೇಗೆ ಖರ್ಚು ಕಡಮೆಮಾಡಿ ಹೆಚ್ಚು ವ್ಯಯ ಮಾಡದಂತೆ ಜಾರಿಗೆ ತರಬೇಕು ಎಂಬುದನ್ನು ಯೋಚನೆಮಾಡಬೇಕು. ನಾವು ಇದಕ್ಕೆ ಹೆಚ್ಚಿನ ಗಮನ ಕೊಟ್ಟಿಲ್ಲ. ವಿರೋಧಪಕ್ಷದ ನಾಯಕರು ವಿದ್ಯಾಸುಧಾರಣೆಗೆ ಹೆಚ್ಚು ಹಣ ಆವಶ್ಯಕವೆಂದು ಹೇಳಿದರು; ಆದರೆ ತೆರಿಗೆ ಹಾಕಿ ಹಣ ಉತ್ಪತ್ತಿ ಮಾಡಲು ಒಪ್ಪುವುದಿಲ್ಲ, ಕೇಂದ್ರದಿಂದ ಸಹಾಯ ಕೇಳಿ ಎಂದು ಹೇಳುತ್ತಾರೆ. ಇದು ಸರಿಯಾದ ಔಷಧಿಯೆ? ಅಲ್ಲ, ಇದೊಂದು ರೋಗ. ಕೇಂದ್ರ ಸರ್ಕಾರವನ್ನು ಈಗಾಗಲೇ ಕೈಗಾರಿಕೆ ಮುಂತಾದುವಕ್ಕೆ ಸಹಾಯ ಮಾಡಬೇಕೆಂದು ಕೇಳಿದೆ. ನಾವು ಎಲ್ಲಕ್ಕೂ ಅವರನ್ನು ಕೇಳದೆ ನಾವೇ ಒಂದು ಪರಿಹಾರ ಕಂಡುಹಿಡಿಯಬೇಕು. ಅದಕ್ಕೆ ಹೇಳುವುದ ಯಾರು ಯಾರಿಗೆ ಎಷ್ಟೆಷ್ಟು ಹೊರೆ ಹೊರುವುದಕ್ಕೆ ಶಕ್ತಿಯಿದೆಯೆಂದು ಈಗಿನಿಂದಲೇ ವಿಚಾರ ಮಾಡಿ ನೋಡಬೇಕು. ಶಿಕ್ಷಣಕೊಡಲು ಯಾರು ಯಾರು ಎಷ್ಟು ಹೊರೆ ಹೊರಬೇಕು, ಯಾರು ಪ್ರೋತ್ಸಾಹ ಕೊಡಬಹುದು ಎಂಬುದನ್ನು ಪರಿಶೀಲಿಸಿ ಇಲ್ಲಿ ಅದನ್ನು ಸೇರಿಸಿದರೆ ಅನುಕೂಲ, ಈ ಸುಧಾರಣೆಯನ್ನು ಜಾರಿಗೆ ತರಲು ಸಾಧ್ಯ.

ಶ್ರೀ ವಿ. ವೆಂಕಟಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಹಣ ಒದಗಿಸುವುದಾಗಿ ಹೇಳಿದರು.

ಶ್ರೀ ಎಚ್. ಎಸ್. ರುದ್ರಪ್ಪ.—ಹೇಳುವುದು ಸುಲಭ. ದೇಶದ ಮುಂದೆ ಸುಧಾರಣೆಯನ್ನಿಟ್ಟ ಮೇಲೆ ಅದನ್ನು ಜಾರಿಗೆ ತರುವುದು ಹೇಗೆ ಎಂಬದನ್ನು ನಾವು ಯೋಚನೆ ಮಾಡಬೇಕು. ಮುಖ್ಯ ಮಂತ್ರಿಗಳು ಹಣ ಹೊಂದಿಸುತ್ತೇವೆಂದು ಹೇಳಿದರೂ ಅದನ್ನೇ ಆಧಾರವಾಗಿಟ್ಟುಕೊಂಡು ನಡೆಸುವುದು ಹೇಗೆ? ಅವರು ಆ ರೀತಿ ಧೈರ್ಯ ಕೊಟ್ಟಿದ್ದಾರೆ, ಸಂತೋಷ. ಈಗ ಆರರಿಂದ ಹನ್ನೆರಡು ವರ್ಷಗಳ ವರೆಗಿನ ವಿದ್ಯಾಭ್ಯಾಸದ ಭಾರವನ್ನು ಸರ್ಕಾರದವರೇ ವಹಿಸಬೇಕೆಂದು ಹೇಳಬಹುದು, ಅದು ತಪ್ಪಾಗುವುದಿಲ್ಲ. ಅದರ ಮೇಲೆ ಸಾರ್ವಜನಿಕರ ಸಹಾಯ ಯಾವ ರೀತಿಯಲ್ಲಿ ದೊರೆಯಬೇಕೆಂಬುದನ್ನು ಹೇಳೋಣ. ಈಗ ಈ ಸುಧಾರಣೆಯಲ್ಲಿ ಆರರಿಂದ ಹನ್ನೆರಡು ವರ್ಷಗಳವರೆಗೆ ಕೊಡುವ ವಿದ್ಯಾಭ್ಯಾಸದ ಸುಧಾರಣೆಯನ್ನು ಜಾಗ್ರತೆ ಜಾರಿಗೆತರಬೇಕೆಂದು ಹೇಳಿದೆ. ನಾವು ಒಳ್ಳೆಯ ಪ್ರಜೆ ತಯಾರಿಸಬೇಕು. ಈಗಿರುವ ನಾಲ್ಕು ವರ್ಷಗಳ ವಿದ್ಯಾಭ್ಯಾಸದಿಂದ ಏನೂ ಆಗುವುದಿಲ್ಲ. ಅರ್ಜಿ ಬರೆಯುವುದು ಅಥವಾ ರುಜು ಹಾಕುವುದು ಬರಬಹುದು, ಅದರಿಂದ ಪ್ರಯೋಜನವಾಗುವುದಿಲ್ಲ. ಸುಲಭ ಭಾಷೆಯಲ್ಲಿ ಸುಲಭ ಖರ್ಚಿನಲ್ಲಿ ಪಂಡಿತರನ್ನು ತಯಾರುಮಾಡಿ ದೇಶದ ಆಡಳಿತ ಹೇಗೆ ನಡೆಯುತ್ತದೆ, ಡೆಮಾಕ್ರಸಿ ಅಂದರೇನು, ರಾಜ್ಯಾಂಗವೆಂದರೇನು ಎಂದು ತಿಳಿದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಬೇಕು. ಇದು ನ್ಯಾಯವಾದುದು. ಸುಲಭವಾದ ರೀತಿಯಲ್ಲಿ ಜವಾಬ್ದಾರಿಯೇನು ಎಂಬುದನ್ನು ತೋರಿಸದಿದ್ದರೆ ಬಹಳ ಕಷ್ಟ. ಕೆಲವರು ಜವಾಬ್ದಾರಿ ಸರ್ಕಾರದ ತಲೆ ಮೇಲಿದೆ, ಪುಂಬರುಗಳ ಮೇಲಿದೆ ಎಂದು ಹೇಳಿದರು. ಸರ್ಕಾರದವರೂ ಸಾರ್ವಜನಿಕರೂ ಹೊಂದಿಕೊಂಡು ಹೋದರೆ ವಿದ್ಯಾಭ್ಯಾಸ ಮುಂದುವರಿಯುವುದಕ್ಕೆ ಸಾಧ್ಯವೇ ಹೊರತು ಸರ್ಕಾರದವರೇ ಎಲ್ಲಾ ಮಾಡಬೇಕೆಂದು ಹೇಳಿದರೆ ಏನೂ ಆಗವುದಿಲ್ಲ. ಅದಕ್ಕೆ ಈಗಲೇ ಹೇಳುವುದು ಆರರಿಂದ 12 ವರ್ಷಗಳವರೆಗಿನ

(ಶ್ರೀ ಎಚ್. ಎಸ್. ರುದ್ರಪ್ಪ.)

ವಿದ್ಯಾಭ್ಯಾಸದಲ್ಲಿ ಸರ್ಕಾರ ಎಷ್ಟೇ ಸಹಾಯ ಮಾಡಿದರೂ ನಾವೂ ಸಹಕರಿಸಿದರೆ ಅದು ಮುಂದುವರಿಯಲು ಸಾಧ್ಯ ಎಂದು. ಏಕೆಂದರೆ ಶ್ರೀ ವೆಂಕಟಪ್ಪನವರು ಸ್ಕೂಲು ಕಟ್ಟಡ ಕಟ್ಟುವುದಕ್ಕೆ ಸರ್ಕಾರದವರು ಹಿಂದು ಮುಂದು ನೋಡುತ್ತಿದ್ದಾರೆ, ಕಟ್ಟಿರುವ ಕಟ್ಟಡಗಳು ಬಿದ್ದು ಹೋಗುತ್ತಿವೆ, ಅನೇಕ ಕಡೆ ಮರದ ನೆರಳಿನಲ್ಲಿ ವಿದ್ಯಾಭ್ಯಾಸ ನಡೆಯುತ್ತಿದೆ ಎಂದು ಹೇಳಿದರು. ವಿದ್ಯಾಭ್ಯಾಸ ಹೊಂದುವ ಹಕ್ಕುಬಾಧ್ಯತೆ ಗೊತ್ತಾದ ಮೇಲೆ ಮುಂದೆ ಯಾವ ರೀತಿ ಮಾಡಬೇಕೆಂಬುದು ಗೊತ್ತಾಗುತ್ತದೆ. ಈಗ ಕಮ್ಯೂನಿಟಿ ಪ್ರಾಜೆಕ್ಟಿನಲ್ಲಿ ಸುಮಾರು 15 ಸ್ಕೂಲು ಕಟ್ಟಡಗಳನ್ನು ಕಟ್ಟಿದೆ. ಸ್ವಲ್ಪ ಪ್ರೋತ್ಸಾಹ ಮಾಡಿದ್ದರಿಂದ ಉತ್ತಮವಾದ ಸ್ಕೂಲನ್ನು ಕಟ್ಟಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆ ಅಂದಾಜು ಎಷ್ಟಿತ್ತೋ ಅದಕ್ಕಿಂತ ಕಡಮೆ ಖರ್ಚಿನಲ್ಲಿ ಕೆಲಸ ಮಾಡಿದ್ದಾರೆ.

ಈ ಕಟ್ಟಡಗಳಿಗೆ ಅಭಾವವಿಲ್ಲದಂತೆ ಜ್ಞಾನ ಪ್ರಸಾರಣೆ ಕೇಂದ್ರವಾದ ಸ್ಕೂಲು ಕಟ್ಟಡಗಳಿಗೆ ಸರ್ಕಾರದವರು ಅಗತ್ಯವಾದ ಗಮನವನ್ನು ಕೊಡುವುದು ಅವರ ಕರ್ತವ್ಯ; ಹಾಗೆ ಮಾಡಿಯೂ ಮಾಡುತ್ತಾರೆ ಎಂದು ನನ್ನ ನಂಬಿಕೆ.

Mr. SPEAKER.—May I know what time you would like to take ?

Sri H. S. RUDRAPPA.—Fifteen minutes.

Mr. SPEAKER.—You may continue it day after tomorrow, because we have two other questions the subject-matter of which has to be taken up for discussion now.

Sri K. HANUMANTHAIYA (Leader of the House).—Day after tomorrow, if the discussion on education reforms is taken up, is there any time-limit for speakers ?

Mr. SPEAKER.—The House, including the Hon'ble Leader of the House, never suggested any time-limit.

Sri K. HANUMANTHAIYA.—My only submission is this. If the House so desires, I will also speak on these reform proposals. May be that my Hon'ble colleague Sri Ramachandra Rao will be able to deal with the various points raised. Then, I will wind up the debate mainly on matters of policy, if the House so desires, and, therefore, day after tomorrow some time may be left for me and to my colleague Sri Ramachandra Rao to speak.

Mr. SPEAKER.—Tomorrow there are certain Bills to be taken up for consideration. I hope the House will see that all the Bills are passed. That is left to you, of course. If any Bill remains over, it will have to be taken up the day after tomorrow. After the Bills, this debate will continue; and it depends upon the time becoming available to us then. We will have to wait and see day after tomorrow.

Sri K. HANUMANTHAIYA.—It would be better to fix a time-limit so that the Government can reply. If some time is allowed ....

Mr. SPEAKER.—What time would the Minister for Education require ?

Sri A. G. RAMACHANDRA RAO.—Not more than 20 minutes.

Mr. SPEAKER.—And the Hon'ble Chief Minister ?

Sri K. HANUMANTHAIYA.—So far as the Chief Minister is concerned, since everybody is pointing his or her finger at him, I may be given some latitude.

Mr. SPEAKER.—I must know what time would he require just to adjust time.

Sri K. HANUMANTHAIYA.—I think an hour would do justice to the cause.

Mr. SPEAKER.—Now discussion on the subject-matter of Questions Nos. 121 and 156. Sri Duggappa.

DISCUSSION ON QUESTIONS Nos. 121 AND 156.

Abolition of the posts of Special Revenue Inspectors.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ನಮ್ಮ ವರ್ಗದವರ ಅಭಿವೃದ್ಧಿ ಕಾರ್ಯ ಅನೇಕ ವರ್ಷಗಳಿಂದ ನಡೆಯುತ್ತಾ ಬಂದಿದೆ. ಇದಕ್ಕೆ ಮುಖ್ಯವಾದ ಕಾರಣ ರಾಜಮನೆತನದವರ ಅನುಗ್ರಹ ಮತ್ತು ಹಿಂದೆ ಅಧಿಕಾರದಲ್ಲಿದ್ದ ಅಧಿಕಾರಿಗಳ ಸಹಾನುಭೂತಿ ಈಗ ನಮ್ಮ ಕಾಂಗ್ರೆಸ್ ಸರ್ಕಾರ ರಾಜ್ಯಾಡಳಿತವನ್ನು ವಹಿಸಿಕೊಂಡು ನಡೆಸುತ್ತಾಯಿರತಕ್ಕ ಕಾಲದಲ್ಲಿ ನಿಮ್ನ ವರ್ಗದವರ ಅಭಿವೃದ್ಧಿಕಾರ್ಯ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆದುಕೊಂಡು ಬರಬೇಕು, ಇದನ್ನು ಒಂದು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಬರತಕ್ಕದ್ದು ಅತ್ಯವಶ್ಯಕ ಎಂದು ನಾನು ಭಾವಿಸುತ್ತೇನೆ,